ಮಂತ್ರಿಗಳು ಎಷ್ಟು ಜನರಿದ್ದಾರೆ, ಸದಸ್ಯರುಗಳು ಎಷ್ಟು ಜನರಿದ್ದಾರೆಂಬುದನ್ನು ದಯಮಾಡಿ ನೋಡಬೇಕು.

ಶ್ರೀ ಯು.ಆರ್.ಸಭಾಪತಿ: ನಿಮ್ಮಲ್ಲಿ ಎಷ್ಟು ಜನರಿದ್ದಾರೆಂಬುದನ್ನು ಲೆಕ್ಕ ಮಾಡಿಕೊಳ್ಳಿ.

ಉಪಾಧ್ಯಕ್ಷರು: ಈ ಸದನದಲ್ಲಿ ಇರುವವರೆಲ್ಲರೂ ನಮ್ಮವರೇ.....

## 3. ನಿಲುವಳಿ ಸೂಚನೆ

**ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿ ಗ್ರಾಮದಲ್ಲಿ ಎರಡು ದಲಿತ ಕುಟುಂಬಗಳಿಗೆ ಸೇರಿದ ಏಳು ಜನರನ್ನೂ ಸಜೀವವಾಗಿ ಸುಟ್ಟಿರುವ ಬಗ್ಗೆ ಮುಂದುವರಿದ ಚರ್ಚೆ.**

+ ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ): ಮಾನ್ಯ ಉಪಾಧ್ಯಕ್ಷರೆ, ನಮ್ಮ ಅನೇಕ ಹಿರಿಯ ಸದ್ಯರುಗಳು ಕಂಬಾಲಪಲ್ಲಿಯಲ್ಲಿ ನಡೆದಂತಹ ಘಟನೆಯ ಬಗ್ಗೆ ಹಾಗೂ ರಾಜ್ಯದ ಇತರ ಕಡೆಗಳಲ್ಲಿ ಏನೇನು ಘಟನೆಗಳು ಆಗಿದೆ ಎಂಬ ಬಗ್ಗೆ ಇಂದು ಬೆಳಗಿನಿಂದ ನಡೆದ ಚರ್ಚೆಯಲ್ಲಿ ಅನೇಕ ವಿಷಯಗಳನ್ನು ಸಭೆಯಲ್ಲಿ ತಿಳಿಸಿದ್ದಾರೆ. ನಮ್ಮಲ್ಲಿ ಏನಾಗಿದೆ ಎಂದರೆ ದೊಡ್ಡ ಸಂಖ್ಯೆಯಲ್ಲಿ ಜನರಿದ್ದಾರೆ, ಆದರೆ ಮನುಷ್ಯರು ಕಮ್ಮಿಯಾಗುತ್ತಿದ್ದಾರೆ ದಿನೇ ದಿನೇ ಮಾನವೀಯತೆ ಕಡಿಮೆಯಾಗುತ್ತದೆ. ಇದನ್ನು ನೋಡಿದಾಗ ನನಗೆ ಒಂದು ಮಾತು ನೆನಪಿಗೆ ಬರುತ್ತದೆ. "Where the law ends, tyranny begins" ಆ ರೀತಿಯಾಗಿ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂಬ ಭಾವನೆ ನಮ್ಮಲ್ಲಿ ಬರುತ್ತಿದೆ. ನಾನು ಸಹ ಘಟನೆ ನಡೆದಂತಹ ಕಂಬಾಲಪಲ್ಲಿಗೆ ಭೇಟಿ ಮಾಡಿದ್ದೆ. ಅಲ್ಲಿನ ಜನರ ಹತ್ತಿರ ಹೋಗಿ ಅವರ ದುಃಖದಲ್ಲಿ ಭಾಗಿಯಾದೆವು. ಅಲ್ಲಿ ನಡೆದ ಘಟನೆಯ ಬಗ್ಗೆ ಜನರ ಹತ್ತಿರ ಚರ್ಚೆ ಮಾಡಿ, ವಿಷಯಗಳನ್ನು ಸಂಗ್ರಹ ಮಾಡಿದಾಗ ಸರ್ಕಾರ ಮತ್ತೆ ಅಧಿಕಾರಿಗಳು ತಾವು ನಡೆಸುವಂತಹ ಕರ್ತವ್ಯದಲ್ಲಿ ಸರ್ಕಾರದ ಹಸ್ತಕ್ಷೇಪವಾಗಿದೆ. ಇದರಿಂದ ಈ ಒಂದು ಸಮಸ್ಯೆ ಉದ್ಭವವಾಗಿದೆ ಎನ್ನುವ ಭಾವನೆ ನಮ್ಮಲ್ಲಿ ಬರುತ್ತದೆ. ಏಕೆಂದರೆ ಹಿಂದಿನ ಮೂರು ವರ್ಷಗಳಲ್ಲಿ ನಡೆದಂತಹ ಒಂದು ಘಟನೆ, ಮತ್ತು 10ನೇ ತಾರೀಖಿನಂದು ಸಾಯಂಕಾಲ ಆದಂತಹ ಘಟನೆಯಾಗಿದೆ. ಸವರ್ಣೀಯನೊಬ್ಬ ಸ್ಕೂಟರ್‌ನಲ್ಲಿ ಹೋಗುವಾಗ ಒಬ್ಬ ಹರಿಜನರ ಕಾರಿಗೆ ಸ್ಕೂಟರ ತಾಗಿದ್ದು ನಂತರ ಅವರಲ್ಲಿ ಘರ್ಷಣೆಯಾಗಿರುವಂಥಾದ್ದು, ಇದಾದನಂತರ ಪೊಲೀಸರನ್ನು ನಿಯೋಜಿಸಿದ್ದು ಪುನಃ ಮಾರನೆಯ ದಿವಸ ವಾಪಸ್ಸು ಪಡೆದು ಕೇವಲ ಮೂರು ಜನ ಕಾನ್‌ಸ್ಟೇಬಲ್‌ಗಳನ್ನು ನಿಯೋಜಿಸಿರುವಂಥಾದ್ದು, ಅಲ್ಲಿ

ಗಲಾಟೆಯಾದ ಕೂಡಲೇ ಇವರು ಓಡಿಹೋಗಿರುವಂಥಾದ್ದು, ಇದನ್ನು ನೋಡಿದಾಗ ಎಲ್ಲೋ ಒಂದು ಕಡೆ ಪೋಲಿಸರು ಕರ್ತವ್ಯ ಸರಿಯಾಗಿ ಮಾಡಿಲ್ಲವೆನ್ನುವ ಭಾವನೆ ನಮಗೆ ಬರುತ್ತದೆ. ಇಂದು ಬೆಳಿಗ್ಗೆ ನಡೆದಂತಹ ಚರ್ಚೆಯಲ್ಲಿ ಮಾತನಾಡಿದಂತಹ ನಮ್ಮ ಅನೇಕ ಹಿರಿಯ ಸದಸ್ಯರುಗಳು ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿಲ್ಲವೆನ್ನುವ ಬಗ್ಗೆ ಹೇಳಿದ್ದಾರೆ. ಈಗಾಗಲೇ ಆರು ಬಾರಿ ಸಸ್ಪೆಂಡ್ ಆಗಿರುವಂತಹ ಸಬ್‌ಇನ್‌ಸ್ಪೆಕ್ಟರ್ ಅನ್ನು ಆ ಸ್ಟೇಷನ್‌ಗೆ ನಿಯೋಜನೆ ಮಾಡಿರುವಂಥಾದ್ದು. ಈಗಾಗಲೇ ಮಾನ್ಯ ಚೌಡರೆಡ್ಡಿಯವರು ಮಾತನಾಡುವಾಗ ಜಿಲ್ಲಾ ಮಂತ್ರಿಯವರಿಗೆ ಒಂದು ಪತ್ರವನ್ನು ಕೊಟ್ಟಿದ್ದೇವೆಂದು ಹೇಳಿದರು. ನಾನು ಹಿಂದೆ ಮಂತ್ರಿಯಾಗಿದ್ದಾಗ ಅನೇಕ ಮಂದಿ ಶಾಸಕರು ಪತ್ರಗಳನ್ನು ಕೊಟ್ಟಿದ್ದಾರೆ, ಡಿ.ಜಿ.ಯವರಿಗೂ ಹೇಳಿದ್ದಾರೆ. ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಗೃಹ ಮಂತ್ರಿಗಳಾಗಿದ್ದಾಗ ನಾವು ಹಸ್ತಕ್ಷೇಪ ಮಾಡುವುದಕ್ಕೆ ಹೋಗಲಿಲ್ಲ ಒಂದು ವೇಳೆ ಅಂಥಾದ್ದು ಏನಾದರೂ ಆದರೆ, ಅಧಿಕಾರಿಗಳು ಒಳ್ಳೆಯವರಾಗದಿದ್ದರೆ ಅಂಥವರನ್ನು ನಿಯೋಜನೆ ಮಾಡಬಾರದೆಂದು ಡಿ.ಜಿ.ಯವರಿಗೆ ಹೇಳುವಂಥದ್ದು ಉಂಟು. ಈ ವಿಚಾರವನ್ನು ಬೇಕಾದರೆ ಅವರ ಹತ್ತಿರವೂ ಕೇಳಬಹುದು. ಇಂತಹ ಪರಿಸ್ಥಿತಿಗಳು ನಿರ್ಮಾಣವಾಗುವುದಕ್ಕೆ ನಮ್ಮ ಹಸ್ತಕ್ಷೇಪವೇ ಕಾರಣ. ನಾವು ಈ ಪೊಲೀಸ್ ಇಲಾಖೆಯಲ್ಲಿ ಎಷ್ಟು ಹಸ್ತಕ್ಷೇಪ ಮಾಡುತ್ತೇವೆ, ಅಷ್ಟು ಈ ಇಲಾಖೆ ಹದಗೆಡುತ್ತದೆನ್ನುವ ಭಾವನೆ ನನ್ನದಾಗಿದೆ. ಇವತ್ತು ಎಸ್.ಐಗಳನ್ನು ಅಥವಾ ಅಧಿಕಾರಿಗಳನ್ನು ಅವರ ಊರಿಗೆ ಹಾಕುವಂಥಾದ್ದು ಅಥವಾ ನಮ್ಮ ಬಂಧುಗಳು ನಮಗೆ ಬೇಕಾದಂತಹ ಸ್ಟೇಷನ್‌ಗೆ ಅಥವಾ ಅವರ ಜಾತಿಯವರನ್ನೇ ಹಾಕುವಂಥಾದ್ದು, ಈ ಒಂದು ಪರಿಸ್ಥಿತಿ ನಿರ್ಮಾಣವಾಗುವಂಥಾದ್ದು, ಈ ರೀತಿಯಾಗಿ ಆಡಳಿತದಲ್ಲಿ ಅವ್ಯವಸ್ಥೆ ತರುವಂಥಾದ್ದು ಆಗುತ್ತದೆ. ಯಾವುದೇ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡಿದರೂ ಈ ಪೊಲೀಸ್ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡಬಾರದೆಂದು ನನ್ನ ವಿಚಾರವಾಗಿದೆ. ನಾನು ಕಂಬಾಲಪಲ್ಲಿಗೆ ಹೋಗಿದ್ದಾಗ ಇನ್ನೊಂದು ವಿಚಾರವನ್ನು ಕೇಳಿದೆ. ಆರು ಬಾರಿ ಸಸ್ಪೆಂಡ್ ಆಗಿದ್ದಂತಹ ಎಸ್‌ಐ.ಅವರನ್ನು ಪೋಸ್ಟಿಂಗ್ಸ್ ಮಾಡಿದಮೇಲೆ ಎಸ್.ಪಿ.ಯವರು ಎರಡು ತಿಂಗಳುಗಳ ಕಾಲ ಪೋಸ್ಟಿಂಗ್ ಕೊಡಲಿಲ್ಲ. ಇವರಿಗೆ ಒತ್ತಾಯ ಬಂದ ಮೇಲೆ ಈ ಸಬ್‌ಇನ್‌ಸ್ಪೆಕ್ಟರಿಗೆ ಪೋಸ್ಟಿಂಗ್ಸ್‌ಕೊಟ್ಟಿದ್ದಾರೆ. ಇವರು ಅಲ್ಲಿಯ ಹಿರಿಯ ರಾಜಕಾರಣಿಯ ಬಂಧುಗಳೆಂದು ನಮಗೆ ವರದಿ ಬಂತು. ಈ ರೀತಿಯಾಗಿ ರಾಜಕಾರಣಿಗಳ ಬಂಧುಗಳನ್ನು ಅವರಿಗೆ ಬೇಕಾದಂತಹ ಕಡೆಗಳಲ್ಲಿ ಹಾಕಿಕೊಂಡರೆ ಇಂತಹ ಗಲಾಟೆಗಳು ಆಗುವಂಥಾದ್ದು ಸರ್ವೆಸಾಮಾನ್ಯವಾಗುತ್ತದೆ. ಇಲ್ಲಿ ಅವರು ಹೇಳಿದ ಹಾಗೆ ಅಧಿಕಾರಿಗಳು ಕೇಳಬೇಕಾಗುತ್ತದೆ. ಮಾನ್ಯ ಚೌಡರೆಡ್ಡಿಯವರು ಅಲ್ಲಿಯ ರಾಜಕೀಯ ಹಿನ್ನೆಲೆಯ ಬಗ್ಗೆಯೂ ಹೇಳಿದರು. ಇವರು ಪಕ್ಷೇತರರಾಗಿ ಗೆದ್ದು ಬಂದು ಈ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಎಷ್ಟು ತೊಂದರೆಯನ್ನು ಮಾಡುತ್ತಿದ್ದಾರೆನ್ನುವ ಬಗ್ಗೆ ಹಲವಾರು ವಿಷಯಗಳನ್ನು ಹೇಳಿದ್ದಾರೆ.

ನಮ್ಮ ಸರ್ಕಾರ ಆಡಳಿತ ನಡೆಸುತ್ತಿದ್ದಾಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧಪಕ್ಷದ ನಾಯಕರಾಗಿದ್ದರು. ಆಗ ಅವರು ಅನೇಕ ವಿಷಯಗಳ ಬಗ್ಗೆ ಸಲಹೆ ನೀಡುತ್ತಿದ್ದರು. We used to take it in right spirit. ನಮಗೆ selfolisciplire ಬೇಕು ಅವರು ಹೇಳಿದಂತಹ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ನಾವು ಅವುಗಳನ್ನು ಪಾಲಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದೆವು. ಈಗ ಅವರು ಅಧಿಕಾರಕ್ಕೆ ಬಂದಮೇಲೆ ಸರಿಯಾಗಿ ಕೆಲಸ ಮಾರುವುದಕ್ಕೆ ಹಸ್ತಕ್ಷೇಪದಿಂದ ಆಗುತ್ತಾ ಇಲ್ಲವೋ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಚಿಸುತ್ತೇನೆ. ಕೆಲವೊಂದು ಕಡೆಗಳಲ್ಲಿ Opposition knows how to rule than the Ruling Party. ಆ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ವಿರೋಧಪಕ್ಷದಲ್ಲಿದ್ದಾಗ ಎಷ್ಟು ಮಾತುಗಳನ್ನು ಹೇಳುತ್ತಿದ್ದರು. ಸರ್ಕಾರ ನಡೆಸಬೇಕೆನ್ನುವ ಕಿವಿಮಾತನ್ನು ಹೇಳುತ್ತಿದ್ದರು. ಆದರೆ ಇವರು ಆಡಳಿತ ಪಕ್ಷದಲ್ಲಿರುವಾಗ ಆ ಒಂದು ಪರಿಸ್ಥಿತಿ ನಿರ್ಮಾಣವಾಗುತ್ತಿಲ್ಲ. ಮಾನ್ಯ ಎಸ್.ಎಸ್.ಪಾಟೀಲರವರು ಒಂದು ವಿಚಾರವನ್ನು ಹೇಳಿದರು. ನಾವು ಆಡಳಿತ ಪಕ್ಷದಲ್ಲಿದಾಗ ಹತ್ತು ಜನ ಮಂತ್ರಿಗಳು ಇಲ್ಲದಿದ್ದರೆ ಗಲಾಟೆ ಮಾಡುತ್ತಿದ್ದರು. ಇವತ್ತು 43 ಜನ ಮಂತ್ರಿಗಳು ಇದ್ದಾರೆ, ಸದನದಲ್ಲಿ ಏನು ವಿಷಯ ಚರ್ಚೆಯಾಗುತ್ತಿದೆ ಎನ್ನುವ ಬಗ್ಗೆ ಕೇಳುವುದಕ್ಕೆ ಸಭೆಯಲ್ಲಿ ಮಂತ್ರಿಗಳಿಲ್ಲ.

ಉಪಾಧ್ಯಕ್ಷರು: ಈಗ ನಿಮಗೆ ಬೇಕಾದದ್ದು ಮಾನ್ಯ ಮುಖ್ಯಮಂತ್ರಿಯವರು, ಮತ್ತು ಸಂಬಂಧಪಟ್ಟ ಮಂತ್ರಿಯವರು ಇದ್ದಾರಲ್ಲಾ?

ಶ್ರೀ ಕೆ.ಜಯಪ್ರಕಾಶ ಹೆಗಡೆ: ನಮ್ಮ ಸರ್ಕಾರವಿದ್ದಾಗಲೂ ಸಂಬಂಧಪಟ್ಟಂತಹ ಮಂತ್ರಿಗಳು ಇರುತ್ತಿದ್ದರು, ಆದರೂ ಈ ಮಾತನ್ನು ಹೇಳುತ್ತಿದ್ದರು. ಇಲ್ಲಿ ಸರ್ಕಾರದ ಜವಾಬ್ದಾರಿ ಎಂದು ಇರುವಾಗ ಕೇವಲ ಸಂಬಂಧಪಟ್ಟಂತಹ ಇಲಾಖಾ ಮಂತ್ರಿಗಳು ಬಂದು ಕುಳಿತುಕೊಳ್ಳುವಂಥಾದ್ದು ಅಲ್ಲ. ಈಗ ಹೊಸದಾಗಿ ಮಂತ್ರಿಗಳಾಗಿದ್ದಾರೆ, ಸದನದಲ್ಲಿ ಹೊಸ ಹೊಸ ವಿಚಾರಗಳನ್ನು ಚರ್ಚೆಗೆ ತೆಗೆದುಕೊಂಡಾಗ ಅದು ಹೇಗೆ ನಡೆಯುತ್ತದೆ ಎಂಬುದನ್ನು ನೋಡಬೇಕಾಗುತ್ತದೆ. ನಾನು ಸಭೆಗೆ ಬೆಳಿಗ್ಗೆ ಬಂದು ಸಾಯಂಕಾಲದವರೆಗೆ ಸದನದಲ್ಲಿ ಕುಳಿತುಕೊಳ್ಳುತ್ತಿದ್ದೆ, ಏಕೆಂದರೆ ನನಗೆ ಹಿರಿಯ ಸದಸ್ಯರುಗಳು ಮಾತನಾಡುವಾಗ ಅದರ ಬಗ್ಗೆ ಮಾಹಿತಿಗಳನ್ನು ತಿಳಿದುಕೊಳ್ಳುವಂತಹ ಕಾಳಜಿ ಇತ್ತು. ಈಗ ಕಿರಿಯ ಸಚಿವರು ಯಾರಿದ್ದಾರೆ, ಅವರು ಸದನದಲ್ಲಿ ಕುಳಿತು ಇಲ್ಲಿ ಏನು ನಡೆಯುತ್ತದೆನ್ನುವಂಥಾದ್ದನ್ನು ನೋಡುವಂತಹ ಅವಶ್ಯಕತೆ ಇದೆ. ನಾಳೆ ದಿವಸ ಅವರುಗಳ ಪೋರ್ಟ್‌ಫೋಲಿಯೊ ಬದಲಾವಣೆ ವಿಷಯಗಳನ್ನು ತಿಳಿದುಕೊಂಡಿಲದಿದ್ದರೆ ಅವರು ಏನು ಕೆಲಸವನ್ನು ಮಾಡುವುದಕ್ಕೆ

ಸಾಧ್ಯವಾಗುವುದಿಲ್ಲವೆಂದು ಹೇಳಲಿಚ್ಛಿಸುತ್ತೇನೆ. when the laws are not enforced, rights cannot be defended vigorously. ಯಾವ ಕಾನೂನನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಅದು ಕಾನೂನಾಗಿ ಉಳಿಯುವುದಿಲ್ಲ, ನನ್ನ ಕ್ಷೇತ್ರದಲ್ಲಿ ಏನಾಗಿದೆ ಎಂದರೆ ಪೊಲೀಸ್‌ನವರು ಕೇಸ್ ಬುಕ್ ಮಾಡುತ್ತಾರೆ. ಇವರು ಎಫ್.ಐ.ಆರ್. ಫೈಲ್ ಮಾಡಿ ಮಾರನೆ ದಿವಸ ಅಪರಾಧಿಯನ್ನು ಕೋರ್ಟ್‌ಗೆ ಕರೆದುಕೊಂಡು ಹೊಗಿ ಪ್ರೊಡ್ಯೂಸ್ ಮಾಡುವಂತಹ ಸಂದರ್ಭದಲ್ಲಿ ಎಫ್ ಐ ಆರ್ ಅಮೆಂಡ್ ಮಾಡಿ ಮತ್ತೆ ಸೆಕ್ಷನ್ 307ರ ಪ್ರಕಾರ ರಾಜಕೀಯ ದ್ವೇಷದಿಂದ ಮಾಡುವಂಥಾದ್ದು ಆಗಿದೆ. ಈಗ ಪಂಚಾಯತ್ ರಾಜ್ ಚುನಾವಣೆ ನಡೆದಿದೆ, ಇಂತಹ ಸದಸ್ಯರುಗಳು ಈ ಸ್ಥಾನಕ್ಕೆ ಬರಬಾರದೆಂದು ಇರುವಂಥಾದ್ದು, ಅವರು Anticipatory Bail ತೆಗೆದುಕೊಳ್ಳುವಾಗ ತಡವಾಗುತ್ತದೆ. ಇಂತಹ ವಿಚಾರಗಳು ನಡೆದಿರುವಂಥಾದ್ದರ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾಹಿತಿಯನ್ನು ತರಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ರಾಜಕೀಯ ದ್ವೇಷವನ್ನು ತಂದು ಪೋಲೀಸ್‌ನವರ ತಲೆಯ ಮೇಲೆ ಹಾಕುವಂಥಾದ್ದು. ಆಗ ಸರ್ಕಾರದವರು ಏನು ಹೇಳುತ್ತಾರೆ ಅದನ್ನು ಮಾಡುವಂಥಾದ್ದಕ್ಕೆ ಪ್ರಯತ್ನ ಮಾಡುವುದು, ಇಲ್ಲಿ ಸರ್ಕಾರ ಮಾಡದಿದ್ದರೂ ಆ ಪಕ್ಷದ ಕಾರ್ಯಕರ್ತರು ಹಸ್ತಕ್ಷೇಪ ಮಾಡುತ್ತಾರೆ. ಉದಾಹರಣೆಗೆ ಯಾರೋ ದೊಡ್ಡ ವ್ಯಕ್ತಿಯ ಮನೆಯಲ್ಲಿ ಸಂಭ್ರಮ ಕೂಟಕ್ಕೆ ಮೈಕ್ ಹಾಕಿದಾಗ ಅದನ್ನು ಪೊಲೀಸ್‌ನವರು ವಿರೋಧ ಮಾಡುತ್ತಾರೆ. ಆಗ ಅವರು ತಮ್ಮ ಮೇಲೆ ಒತ್ತಾಯ ತಂದು ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡುವಂಥಾದ್ದು ಅವುಗಳು ನಡೆಯಬಾರದು. If you do that, you are going to demoralise the police force. ಅದನ್ನು ಮಾಡಬಾರದು. ಈ ಇಲಾಖೆಯಲ್ಲಿ ಡಿ.ಜಿ, ಎಸ್.ಪಿ, ಎಲ್ಲಾ ಅಧಿಕಾರಿಗಳು ಇರುತ್ತಾರೆ. ಅವರುಗಳು ಸಂಬಂಧಪಟ್ಟಂತಹ ಮಾಹಿತಿಗಳನ್ನು ತೆಗೆದುಕೊಂಡು, ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಮಾಡುತ್ತಾರೆ. ನಾವು ಅವರಿಗೆ ಪತ್ರಗಳನ್ನು ಬರೆದು ಇಂತಹ ಅಧಿಕಾರಿಗಳನ್ನು ಹಾಕಿ ಎಂದು ಹೇಳುವಂಥಾದ್ದು, ಅದಕ್ಕೆ ಮನ್ನಣೆ ಕೊಡುವಂತಹ ಅವಶ್ಯಕತೆ ಇಲ್ಲ. ಇದರ ಬಗ್ಗೆ ಡಿ.ಜಿ.ಯವರು ಮತ್ತು ಜಿಲ್ಲೆಯ ಸಂಬಂಧಪಟ್ಟಂತಹ ಅಧಿಕಾರಿಗಳು ಯಾರಿದ್ದಾರೆ. ಅವರ ಹತ್ತಿರ ಮಾಹಿತಿಗಳನ್ನು ತರಿಸಿಕೊಳ್ಳುವಂತಹ ಅಗತ್ಯವಿದೆ ಎಂದು ಹೇಳುತ್ತೇನೆ. ಇಲ್ಲಿ ಏನಾಗುತ್ತದೆಂದರೆ spider webನಲ್ಲಿ ದೊಡ್ಡ ದೊಡ್ಡ ಹುಳ ಪಾಸ್ ಆಗಿ ಹೋಗುತ್ತದೆ. ಸಣ್ಣ ಸಣ್ಣ ಹುಳ ಬೀಳುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ, ಈ ರೀತಿಯಾಗಬಾರದು. ಕಾನೂನಿಗೆ ದೃಷ್ಟಿಯಲ್ಲಿ ದೊಡ್ಡವರು ಒಂದೇ, ಸಣ್ಣವರು ಒಂದೇ, ಯಾರು ತಪ್ಪು ಮಾಡಿದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ವ್ಯವಸ್ಥೆ ನಿರ್ಮಾಣವಾಗಬೇಕೆಂದು ಹೇಳುತ್ತೇನೆ. ರಾಜ್ಯದಲ್ಲಿ ಇತ್ತೀಚೆಗೆ ನಡೆದಿರುವಂತಹ ಕಂಬಾಲಪಲ್ಲಿ ಘಟನೆ, ಶ್ರೀ ವಸಂತ ಅಸ್ನೋಟಿಕರರವರನ್ನು ಕೊಲೆ

ಮಾಡಿರುವಂಥಾದ್ದು, ಒಬ್ಬ ಶಿಕ್ಷಕರ ಕೊಲೆಯಾಗಿರುವಂಥಾದದ್ದು ಇನ್ನೊಬ್ಬ ಪೆಟ್ರೋಲ್ ಬಂಕ್ ಮಾಲಿಕನಿಗೆ ಚೂರಿಯನ್ನು ಹಾಕಿರುವುದು ಈ ರೀತಿಯದನ್ನು ನಾವು ದಿನನಿತ್ಯ ಪತ್ರಿಕೆಯಲ್ಲಿ ನೋಡುವಾಗ ಮನೆಯಲ್ಲಿರುವ ಹೆಂಗಸರು ಹಾಗೂ ಮಕ್ಕಳಿಗೆ ಗಾಬರಿಯ ಒಂದು ವಾತಾವರಣ ನಿರ್ಮಾಣವಾಗುತ್ತಿದೆ. ಗಂಡಸರು ಇಲ್ಲದಿರುವಾಗ ಮನೆಗೆ ನುಗ್ಗಿ ಕೊಲೆ ಮಾಡಿರುವುದು ನಡೆದಿದೆ. ಕಳೆದದು ತಿಂಗಳಿಂದ ಸಂಪೂರ್ಣವಾಗಿ ಸರ್ಕಾರ ತಪ್ಪು ಮಾಡುತ್ತಿದೆ ಎಂದು ಆಪಾದನೆ ಮಾಡುವುದಕ್ಕೆ ಹೋಗುತ್ತಿಲ್ಲ. ನಾವು ಸುರಕ್ಷಿತವಾಗಿ ಈ ರಾಜ್ಯದಲ್ಲಿ ಬದುಕುವುದಕ್ಕೆ ಸಾಧ್ಯವಿದೆ ಎನ್ನುವ ಒಂದು ವಾತಾವರಣವನ್ನು ಸರ್ಕಾರ ನಿರ್ಮಾಣ ಮಾಡುವ ಅಗತ್ಯವಿದೆ. ಏಕೆಂದರೆ ಪೋಲಿಸ್ ಫೋರ್ಸ್ ಬಲವಾಗಿ ಎಂದಾದ್ಧಾಗ ಕ್ರೈಮ್ಸ್ ಕಡಿಮೆಯಾಗುತ್ತಾ ಹೋಗುತ್ತದೆ. ಆ ಒಂದು ವಾತಾವರಣವನ್ನು ತಾವು ನಿರ್ಮಾಣ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಒಂದು ಮಾತನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ, To rule is easy, to govern is difficult. ನಾವು ಏನು ಮಾಡುತ್ತೇವೆಂದರೆ, ಸರ್ಕಾರವನ್ನು ನಡೆಸಿಕೊಂಡು ಹೋಗುವುದಕ್ಕೆ ಮುಖ್ಯಮಂತ್ರಿಗಳು, ಸಚಿವರು ಹಾಗೂ ನಾವೆಲ್ಲ ಸಹಕರಿಸಿಕೊಂಡು ಹೋಗುತ್ತೇವೆ. ನಾವು ತಪ್ಪನ್ನು ಮಾಡಿಲ್ಲವೆಂದು ಹೇಳುವುದಿಲ್ಲ. ನಾವು ತಪ್ಪನ್ನು ಮಾಡಿದ್ದೇವೆ, we have ruledd and we have governed. ಆದರೆ ನಮ್ಮಲ್ಲಿ ಜಗಳವನ್ನು ಮಾಡಿಕೊಂಡಿದ್ದೇವೆ. ಆ ರೀತಿ ಜಗಳವನ್ನು ಮಾಡಿಕೊಂಡಾಗಲು ಕೂಡ ನಾವು ಸರ್ಕಾರದ ಕೆಲಸವನ್ನು ಸರಿಯಾಗಿ ನಡೆಸಿಕೊಂಡು ಹೋಗಿದ್ದೇವೆ, ನಮ್ಮ ಇಲಾಖೆಯ ಕೆಲಸವನ್ನು ಸರಿಯಾಗಿ ನಡೆಸಿಕೊಂಡು ಹೋಗಿದ್ದೇವೆ. ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಯಾವುದೇ ಕಾರಣಕ್ಕಾಗಿ ಪೋಲಿಸ್ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡುವುದು, ಯಾವ ಪೋಲಿಸ್ ಅಧಿಕಾರಿಯನ್ನು ಹಾಕ ಬೇಕೆನ್ನುವುದರ ಬಗ್ಗೆ ಒತ್ತಡವನ್ನು ತರುವುದು, ಯಾವ ಕೇಸ್, ಯಾವ ಸೆಕ್ಷನ್ ಹಾಕುವುದಕ್ಕೆ ಒತ್ತಡವನ್ನು ತರುವುದು, ಈ ಬಗ್ಗೆ ಸರ್ಕಾರ ಅಥವಾ ಮಂತ್ರಿಗಳು, ಶಾಸಕರು ಅಥವಾ ಆಳುವ ಪಕ್ಷದ ಸದಸ್ಯರು ಬೇರೆ ಬೇರೆ ಕಡೆ ಏನಿದ್ದಾರೆ ಇವರು ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಬೇಕು ಎಂದು ನಾನು ಮಾನ್ಯ ಅಧ್ಯಕ್ಷರ ಮುಖೇನ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಬೆಳಿಗ್ಗೆಯಿಂದ ಇಲ್ಲಿಯವರೆಗೆ ಸದನದಲ್ಲಿ ಚರ್ಚೆ ಮಾಡಿರುವ ವಿಷಯ ಕಂಬಾಲಪಲ್ಲಿಯದಾಗಿದೆ. ಇಲ್ಲಿ ಹರಿಜನರ ಸಾಮೂಹಿಕ ದಹನದ ಜೊತೆಗೆ ಇನ್ನೊಬ್ಬ ವ್ಯಕ್ತಿ ಯಾರು ಸತ್ತಿದ್ದಾನೆ ಅವನ ಬಗ್ಗೆಯು ಕೂಡ ನಮಗೆ ಕಾಳಜಿ ಇದೆ, ನಾವು ದುಃಖವನ್ನು ವ್ಯಕ್ತಪಡಿಸುತ್ತೇವೆ. ಯಾರು ಸತ್ತರು ಕೂಡ ನಮಗೆ, ಈ ಸದನಕ್ಕೆ ಖೇದವಿದೆ, ನಾವು ಆ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕು. ಯಾವ ಕಾಲದಲ್ಲೂ ಇಷ್ಟೊಂದು ಜನರನ್ನು ಒಂದೇ ಸಾರಿ ಸುಟ್ಟಿರುವ ಘಟನೆ ನಡೆದಿಲ್ಲ. ಒಬ್ಬ ವ್ಯಕ್ತಿ ಸತ್ತು ಬಿದ್ದನೆಂದು ಕೇಳಿದ ಕೂಡಲೆ ಹುಲ್ಲನ್ನು ತಗೆದುಕೊಂಡು ಹೋಗಿ ಮನೆಯ ಎದುರಿಗೆ

ಹಾಕಿದರು. ಏಕೆಂದರೆ ಎಲ್ಲರು ಒಂದೇ ವಟಾರದಲ್ಲಿದ್ದವರು, ಎಲ್ಲರು ಅಣ್ಣತಮ್ಮಂದಿರಂತೆ ಇರಬೇಕಾಂತಹವರು. ಆ ಹಳ್ಳಿಯಲ್ಲಿರುವುದು ಒಟ್ಟು ನೂರು ಮನೆಗಳು. ಅದರಲ್ಲಿ ಪರಿಶಿಷ್ಟ ಜಾತಿಯವರು ಹಾಗೂ ಬೇರೆ ಜಾತಿಯವರು ಒಂದೇ ವಟಾರದಲ್ಲಿದ್ದಾರೆ. ಅವನು ಸತ್ತುಬಿದ್ದ ಕೂಡಲೆ ಕ್ರೋಧಕ್ಕೆ ಎಡೆಕೊಟ್ಟಂತಾಯಿತು, ಅವರು ಹುಲ್ಲನ್ನು ತೆಗೆದುಕೊಂಡು ಹೋಗಿ ಸೀಮೆ ಎಣ್ಣೆಯನ್ನು ಹಾಕಿ ಬೆಂಕಿಯನ್ನು ಇಟ್ಟರು. ಆದರೆ ಬಹುಶಃ ಪೋಲೀಸ್ ಒಂದು ರಿಸರ್ವ್ ವ್ಯಾನ್ ಅನ್ನು ಅಲ್ಲಿಟ್ಟಿದ್ದರೆ ಈ ಘಟನೆ ನಡೆಯುತ್ತಿರಲ್ಲ. ಇದು ಅಧಿಕಾರಿಗಳಿಗೆ ಏತಕ್ಕೆ ಹೊಳೆಯಲಿಲ್ಲವೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸದಸ್ಯರಾದ ಸೋಮಶೇಖರರವರು ಮಾತನಾಡುವಾಗ ಹೇಳಿದರು, ಅಲ್ಲಿನ ಸಬ್ ಇನ್‌ಸ್ಪೆಕ್ಟರ್ ಎಸ್.ಸಿ, ಜನಾಂಗದವರು ಸರ್ಕಲ್ ಇನ್‌ಸ್ಪೆಕ್ಟರ್ ಎಸ್.ಸಿ, ಡಿವೈಎಸ್‌ಪಿ ಕೂಡ ಎಸ್.ಸಿ. ಹೀಗಾಗಿ ದೂಷಣೆಯನ್ನು ಯಾರು ಮೇಲೆ ಹಾಕುವುದೆಂದು ನಮಗೆ ಗೊತ್ತಾಗುತ್ತಿಲ್ಲ. ಏಕೆಂದರೆ ಅಧಿಕಾರಿಗಳು ಬೇರೆಯವರೇನಾದರು ಇದ್ದಿದ್ದರೆ ಬೇರೆಯವರ ಮೇಲೆ ತಪ್ಪು ಹೊರಿಸುವುದಕ್ಕೆ ಅವಕಾಶವಿತ್ತು. ಆದರೆ ಇಲ್ಲಿ ಹಾಗಿಲ್ಲ, ಅವರದೇ ಜಾತಿಯ ಅಧಿಕಾರಿಗಳಿದ್ದು ಏಕೆ ಈ ಒಂದು ತಪ್ಪನ್ನು ಮಾಡಿದರು? ಅದರ ಬಗ್ಗೆ ಮಾಹಿತಿ ತಿಳಿದುಕೊಳ್ಳಬೇಕು. ಒಂದು ವೇಳೆ ಒತ್ತಡದ ಮೇರೆಗೆ ಪೋಲಿಸ್ ವ್ಯಾನ್ ಅನ್ನು ವಾಪಸ್ ತೆಗೆಸಿದ್ದರೆ, ಅಥವಾ ಒತ್ತಡದ ಮೇಲೆ ಆ ಅಧಿಕಾರಿಯನ್ನು ಅಲ್ಲಿಗೆ ಪೋಸ್ಟ್ ಮಾಡಿದ್ದರೆ, ಇದರ ಬಗ್ಗೆ ತನಿಖೆಯನ್ನು ಮಾಡಬೇಕಾಗುತ್ತದೆ. ಒಂದು ವೇಳೆ ಎಷ್ಟು ದೊಡ್ಡ ವ್ಯಕ್ತಿಯಾಗಿದ್ದರು, ಅವನ ಒತ್ತಡದ ಮೇರೆಗೆ ಆ ಅಧಿಕಾರಿಯನ್ನು ಅಲ್ಲಿ ಪೋಸ್ಟ್ ಮಾಡಿದ್ದಾಗಿದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಗೃಹ ಸಚಿವರು ಮಾಡಬೇಕು ಎಂದು ಹೇಳುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಹೆಚ್.ಹನುಮೇಗೌಡ (ಹಾಸನ ಕ್ಷೇತ್ರ): ಸನ್ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯ ಕಂಬಾಲಪಲ್ಲಿ ಗ್ರಾಮದಲ್ಲಿ ಎಂಟು ಜನ ಹರಿಜನರು ಬೆಂಕಿಯಲ್ಲಿ ದಹನವಾದ ಬಗ್ಗೆ ಒಂದೆರಡು ವಿಚಾರಗಳನ್ನು ನಾನು ಈ ಸದನಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇಂದು ಬೆಳಿಗ್ಗೆಯಿಂದ ಈ ಘಟನೆಯ ಬಗ್ಗೆ ವಿಪುಲವಾದ ಚರ್ಚೆಯಾಗುತ್ತಿದೆ. ಸತ್ತವರು ಸತ್ತರು, ಕೆಟ್ಟವರು ಕೆಟ್ಟರು, ಅನಾಥ ಮಕ್ಕಳು ಬೀದಿಪಾಲಾದರು. ನಾನೂ ಕೂಡ ಕಳೆದ ಹತ್ತಾರು ವರ್ಷಗಳಿಂದ ಈ ಶಾಸನಸಭೆಯ ಸದಸ್ಯನಾಗಿದ್ದೇನೆ ಆಗಿನಿಂದಲೂ ಇಂತಹ ಘಟನೆಗಳು ನಡೆಯುತ್ತಲೇ ಇವೆ. ಆದರೆ ಈ ಅಸಹಾಯಕ ಜನರ ಕೊಲೆ, ಸಜೀವದಹನ ದೇವರು ಎಂದಿಗೆ ಕೊನೆ ಮಾಡುತ್ತಾನೋ ಎಂದಿಗೆ ಈ ಅಸಹಾಯಕ ಜನ ಈ ಪಾಪದ ಭೀತಿಯಿಂದ ಮುಕ್ತರಾಗುವ ಕಾಲ ಬರುತ್ತದೊ ಎಂದು

ನನಗನಿಸುತ್ತದೆ. ಪ್ರತಿ ಸಾರಿ ಚರ್ಚೆಯಾಗುತ್ತದೆ, ಘಟನೆ ನಡೆದ ಕಾರಣಗಳ ಬಗ್ಗೆಯೂ ಕೂಡ ಹೇಳುತ್ತೇವೆ, ಅದರ ಬಗ್ಗೆ ತನಿಖೆಯಾಗಿ ಒಂದು ವರದಿ ಕೂಡ ಬರುತ್ತದೆ, ಅಲ್ಲಿಗೆ ನಿಂತು ಹೋಗುತ್ತದೆ ಮತ್ತೆ ಆರು ತಿಂಗಳೂ ಒಂದು ವರ್ಷದ ನಂತರ ಪುನಃ ಇಂತಹ ಘಟನೆಗಳು ನಡೆದು ಈ ಸುಸಂಸ್ಕೃತ ಸಮಾಜ ಹಾಗೂ ಸರ್ಕಾರ ತಲೆತಗ್ಗಿಸುವಂತಹ ಪರಿಸ್ಥಿತಿ ಆಗಾಗ್ಗೆ ನಿರ್ಮಾಣವಾಗುತ್ತಿರುತ್ತದೆ. ಈ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ದೀರ್ಘವಾಗಿ ಆಲೋಚನೆ ಮಾಡಿ ಇನ್ನು ಮುಂದೆ ಇಂತಹ ಅಕೃತ್ಯಗಳು ನಡೆಯದಿರುವ ಹಾಗೆ ಏನಾದರು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡು ಆ ಎಲ್ಲಾ ಜನಗಳ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗುತ್ತಾರೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಖರ್ಗೆಯವರು ಕಾರ್ಯಪ್ರವೃತ್ತಶೀಲರಾದ ವ್ಯಕ್ತಿ. ಆದರೆ ಈ ಘಟನೆಯ ಸ್ಥಳದಲ್ಲಿದ್ದ ಸಬ್ ಇನ್‌ಸ್ಪೆಕ್ಟರ್ ಅಜಾಗರೂಕತೆಯಿಂದ ಎಲ್ಲರು ತಲೆತಗ್ಗಿಸುವಂತಾಗಿದೆ. ಈ ಪ್ರಜಾಪ್ರಭುತ್ವವೇ ಹೀಗೆ ಎಲ್ಲವನ್ನು ಒಬ್ಬ ಮಂತ್ರಿಯ ಮೇಲೆ ಹೊರೆಸಿ ಜವಾಬ್ದಾರಿಯಿಂದ ತಪ್ಪಿಸಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೂ ಕೂಡ ಅವರು ಈ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಆದರೆ ಈ ಬಗ್ಗೆ ಕೂಲಂಕುಷವಾಗಿ ಆಲೋಚನೆ ಮಾಡಿ ಇನ್ನು ಮುಂದೆ ಇಂತಹ ಘಟನೆ ನಡೆಯದಿರುವ ಹಾಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಅನೇಕ ಸದಸ್ಯರು ಮಾತನಾಡುತ್ತಾ ಎಲ್ಲಾ ವಿವರಗಳನ್ನು ಹೇಳಿದ್ದಾರೆ, ಪುನಃ ಪುನಃ ಅದನ್ನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಯಾರು ಹರಿಜನರಿದ್ದಾರೊ ಅವರು ನೂರಕ್ಕೆ ತೊಂಭತ್ತು ಭಾಗ ತಮ್ಮ ಮತಗಳನ್ನು ಕಾಂಗ್ರೆಸ್ ಪಕ್ಷಕ್ಕೆ ಕೊಟ್ಟಿದ್ದಾರೆ ಕಂಡ ಕಂಡ ದೇವರಿಗೆಲ್ಲಾ ಕೈಮುಗಿದಿದ್ದಾರೆ. ನಮ್ಮ ಪಕ್ಷ ಅಧಿಕಾರಕ್ಕೆ ಬರಲಿ, ನಾವು ಕೂಡ ಬೇರೆಯವರಂತೆ ನೆಮ್ಮದಿಯಿಂದ ಬಾಳುತ್ತೇವೆ, ಏನಾದರೂ ಸ್ವಲ್ಪ ಅನುಕೂಲವನ್ನು ಕಲ್ಪಿಸಿಕೊಳ್ಳಬಹುದೆನ್ನುವ ಭಾವನೆಯಿಂದ ಅವರು ಕಾಂಗ್ರೆಸ್ ಪಕ್ಷಕ್ಕೆ ತಮ್ಮ ಮತವನ್ನು ನೀಡಿದ್ದಾರೆ. ಅಂಥ ಮುಗ್ದ ಜನರ ರಕ್ಷಣೆ ಸರ್ಕಾರದ ಆದ್ಯಕರ್ತವ್ಯವೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಮಾನ್ಯ ಗೃಹಮಂತ್ರಿಗಳಾಗಲಿ ನೇರವಾಗಿ ಜವಾಬ್ದಾರರು ಎಂದಿಲ್ಲದಿದ್ದರು ಕೂಡ ಇಂತಹ ಘಟನೆಗಳು ನಡೆಯದಿರುವ ಹಾಗೆ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಏನೇನು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿತ್ತೊ ಅದನ್ನು ತೆಗೆದುಕೊಂಡಿದ್ದರೆ ಈ ಅಚಾತುರ್ಯ ನಡೆಯುತ್ತಿರಲಿಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದು ಬಹಳ ಸೂಕ್ಷ್ಮಪ್ರದೇಶವೆಂದು ತಿಳಿದ ಮೇಲೆ, ನಾಲ್ಕಾರು ಕೊಲೆಗಳು ಆ ಗ್ರಾಮದಲ್ಲಿ ಆದಮೇಲೆ ಬರಿ ಕಾನೂನನ್ನು ಪಾಲನೆ ಮಾಡುವುದರಿಂದಲೇ ದ್ವೇಷಾಸೂಯೆಯನ್ನು ಹೋಗಲಾಡಿಸುವುದಕ್ಕಾಗುವುದಿಲ್ಲ

ಯಾರಾದರೂ ರಾಜಕೀಯ ಮುಖಂಡರುಗಳು ಅಥವಾ ಪೋಲಿಸ್ ಅಧಿಕಾರಿಗಳು ಅಥವಾ ರಾಜಕೀಯ ಕಾರ್ಯಕರ್ತರು ಆ ಗ್ರಾಮಕ್ಕೆ ಹೋಗಿ ಆ ಎರಡು ಕಮ್ಯುನಿಟಿಯವರನ್ನು ಒಟ್ಟಿಗೆ ಸೇರಿಸಿ, ಬೇಡರಪ್ಪ ಸರ್ವ ನಾಶವಾಗುತ್ತದೆ, ಇದರಿಂದ ನೀವು ಹಾಳಾಗುತ್ತಿರಿ ನಿಮ್ಮ ಹೆಂಡತಿಮಕ್ಕಳು ಬೀದಿ ಪಾಲಾಗುತ್ತಾರೆ ಎಂದು ವಿವೇಕ ಹೇಳಿ ಏನಾದರು ಪ್ರಯತ್ನ ಮಾಡಿದ್ದರೆ ಬಹುಶಃ ಈ ಅನಾಹುತವನ್ನು ತಪ್ಪಿಸಬಹುದಾಗಿತ್ತು ಎಂದು ನನಗನಿಸುತ್ತದೆ. ಎರಡನೆಯದಾಗಿ ಯಾರು ತಪ್ಪು ಮಾಡಿದ್ದಾರೊ ಅವರ ಮೇಲೆ ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಉದಾಹರಣೆಯಾಗಿ ಅವರನ್ನು ಅಷ್ಟು ಮಾಡಿದರು, ಇಷ್ಟು ಮಾಡಿದರು ನಮ್ಮನ್ನು ಕೂಡ ಇವರು ಏನು ಮಾಡುವುದಕ್ಕಾಗುವುದಿಲ್ಲವೆನ್ನುವ ಸಲಿಗೆ ಅವರಿಗೆ ಬಂದು ಯಾರು ಸ್ವಲ್ಪ ದಷ್ಟಪುಷ್ಟರಾಗಿರುತ್ತಾರೋ ಅವರು ಅಸಹಾಯಕ ಜನರ ಮೇಲೆ ಆಕ್ರಮಣ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಇನ್ನು ಮುಂದೆ ಇಂತಹ ಕೃತ್ಯ ಮಾಡಿದರೆ ಸರ್ಕಾರ ನಮ್ಮನ್ನು ಸುಮ್ಮನೆ ಬಿಡುವುದಿಲ್ಲ, ಜೈಲಿಗೆ ಹಾಕುತ್ತಾರೆನ್ನುವ ಒಂದು ಭೀತಿಯನ್ನು ಉಂಟು ಮಾಡುವ ಒಂದು ಕ್ರಮವನ್ನು ತೆಗೆದುಕೊಳ್ಳಬಹುದಾಗಿತ್ತು. ಅದು ಇಲ್ಲದಿದ್ದರೆ ಎರಡು ಪಕ್ಷದವರು ರಾಜಿಗೆ ಬರದೇ ಹೋದರೆ ಅಥವಾ ವಾತಾವರಣ ತಿಳಿಯಾಗದಿದ್ದರೆ ಅಥವಾ ವಿವೇಕದ ಮಾತನ್ನು ಕೇಳದಿದ್ದರೆ 107ನೇ ಸೆಕ್ಷನ್ ಹಾಕಿ ಹತ್ತಾರು ಸಾರಿ ಕೋರ್ಟು ಕಛೇರಿಯಗೆ ತಿರುಗಿಸಿದ್ದರೆ, ನಮಗೆ ಈ ಸಹವಾಸ ಬೇಡಪ್ಪ ನಾವು ರಾಜಿ ಮಾಡಿಕೊಳ್ಳುತ್ತೇವೆ ಎನ್ನುವ ಪರಿಸ್ಥಿತಿಯಾದರು ಬರುತ್ತಿತ್ತು ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಪ್ಪು ಮಾಡಿದವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಲಿಲ್ಲ ಅಥವಾ ಯಾರಾದರೂ ಮಧ್ಯವರ್ತಿಗಳು ಹೋಗಿ ಎರಡು ಪಾರ್ಟಿಯವರನ್ನೂ ಸೇರಿಸಿ ಅವರಿಗೆ ವಿವೇಕ ಹೇಳಿ, ಅವರನ್ನು ಒಂದುಗೂಡಿಸಿ ಒಮ್ಮತವಾಗಿ ಬಾಳಿಬದುಕುವಂಥ ಒಂದು ಒಳ್ಳೆಯ ಪರಿಸ್ಥಿತಿಯನ್ನು ನಿರ್ಮಾಣಮಾಡಲಿಲ್ಲ ಅವೆರಡೂ ಆಗದಿದ್ದರೆ ಕೊನೆಯ ಪಕ್ಷ ಎರಡೂ ಪಾರ್ಟಿಯ ಹತ್ತೋ ಐವತ್ತೋ ನೂರೋ ಜನರನ್ನು ಸೇರಿಸಿ ಕೋರ್ಟಿಗೆ ಹತ್ತಿಪ್ಪತ್ತು ಸಲ ತಿರುಗಿಸಿದ್ದರೆ ಅವರು ಸೋತು, ಬೇಡಪ್ಪಾ, ಮನೆಮಠ ಕಳೆದುಕೊಂಡು ಕೆಲಸಕಾರ್ಯಗಳನ್ನು ಬಿಟ್ಟು ನಾವು ಈ ರೀತಿ ತಿರುಗಬೇಕು, ಅದರ ಬದಲು ರಾಜಿಯಾಗೋಣ ಎನ್ನುವ ಭಾವನೆ ಅವರಲ್ಲಿ ಬರುತ್ತಿತ್ತು. ಅದನ್ನೂ ಮಾಡಲಿಲ್ಲ. ಈ ಮೂರರಲ್ಲಿ ಯಾವುದನ್ನು ಮಾಡಿದ್ದರೂ ಈ ಅನಾಹುತವನ್ನು ತಪ್ಪಿಸಬಹುದಾಗಿತ್ತು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ಇದು ಅನಿರೀಕ್ಷಿತವಾಗಿ ನಡೆದ ಘಟನೆಯಲ್ಲ. ಕೊಲ್ಲಲೇಬೇಕು ಎನ್ನುವ ಉದ್ದೇಶದಿಂದ ಮಾಡಿರುವಂಥ ಕೊಲೆ. ಪ್ರಾಣಿಗಳಿಗಿಂತಲೂ ನಿರ್ದಯವಾಗಿ, ಆ ಅಸಹಾಯಕ

ಜನರನ್ನು ಮನೆಯ ಒಳಗೆ ಸೇರಿಸಿ, ಹುಲ್ಲನ್ನು ತಂದು ಹಾಕಿ, ಅವರು ಹೊರಗೆ ಬರದ ಹಾಗೆ ಬಾಗಿಲಿಗೆ ಚಿಲಕ ಹಾಕಿ, ಅವರನ್ನು ಬೆಂಕಿ ಹಾಕಿ ಸುಟ್ಟಿದ್ದಾರೆ ಎಂದರೆ ಅವರು ಮನುಷ್ಯರಲ್ಲ, ಮೃಗಗಳಿಗಿಂತಲೂ ಕಡೆಯಾದವರು ಎಂದು ಹೇಳಿದರೆ ತಪ್ಪಾಗಲಾರದು ಎಂದು ನನಗನ್ನಿಸುತ್ತದೆ. ಒಂದು ನಿಮಿಷ ಅವರೇ ಆಲೋಚನೆ ಮಾಡಿದ್ದರೆ, ನಾವು ಒಳಗಡೆಯಿದ್ದು ನಮ್ಮ ಹೆಂಗಸರು ಮಕ್ಕಳು ಹೊರಗಡೆ ಇದ್ದು, ಹೀಗೆ ಯಾರಾದರೂ ಬೆಂಕಿ ಹಾಕಿದ್ದರೆ ನಮ್ಮ ಹೆಂಡತಿ ಮಕ್ಕಳು ಎಷ್ಟು ಗೋಳಾಡಿ ಅಯ್ಯೋ ಅನ್ನುತ್ತಿದ್ದರು ಎನ್ನುವಂಥ ಒಂದು ಭಾವನೆ ಅವರಿಗೆ ಬಂದಿದ್ದರೆ ಬಹುಶಃ ಅವರು ಈ ಕೆಲಸ ಮಾಡುತ್ತಿರಲಿಲ್ಲ ಎಂದು ನನಗನ್ನಿಸುತ್ತದೆ. ಕರುಳು ಕಿತ್ತು ಬರುವಂಥ ಪರಿಸ್ಥಿತಿಯೆಂದರೆ, ಒಬ್ಬ ಮುದುಕಿ, ಆಕೆಯ ಗಂಡ ಒಳಗಡೆ ತೀರಿಹೋಗಿದ್ದಾನೆ, ಒಬ್ಬ ಅಂಗವಿಕಲ ಮಗ, ಕೊನೆಯ ಪಕ್ಷ ಅವನ ಜೀವನಕ್ಕೆ ಏನಾದರೊಂದು ವ್ಯವಸ್ಥೆ ಮಾಡಬೇಕು ಎನ್ನುವ ದೃಷ್ಟಿಯಿಂದ, ಬೆಂಕಿಯಿಂದ ತನ್ನಷ್ಟಕ್ಕೆ ತಾನೇ ಆ ಬಾಗಿಲು ಸುಟ್ಟುಹೋದಮೇಲೆ, ಅವಳು ಹೊರಗಡೆ ಬಂದು ಓಡಿಹೋಗುವಾಗ ಅವಳಿಗೆ ಕಲ್ಲು ಹೊಡೆದರು ಎಂದರೆ ಅವರು ಮನುಷ್ಯರೋ ಅಥವಾ ಮೃಗಗಳೋ ಎಂದು ನಾನು ಕೇಳುತ್ತೇನೆ. ಇಂಥ ದುಷ್ಕೃತ್ಯಗಳನ್ನು ಮಾಡಲು ನಾವು ಅವಕಾಶ ಕೊಟ್ಟುಕೊಂಡು ಹೋದರೆ ಬಹುಶಃ ಈ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಮತ್ತು ಜನಗಳಿಗೆ ಒಳ್ಳೆಯ ಹೆಸರು ಬರುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ಒಳಗಡೆ ಇದ್ದಾಗ, ಬೆಂಕಿ ಆವರಿಸಿದಾಗ, ಹೊರಗಡೆ ಅವರ ಹೆಂಡತಿ ಮಕ್ಕಳು ನಿಂತುಕೊಂಡು ನೋಡುತ್ತಿದ್ದಾಗ, ಅವರು ಆಕ್ರಂದನ ಮಾಡಿ, ಕಣ್ಣೀರು ಹಾಕಿ ದೇವರನ್ನು ಪ್ರಾರ್ಥನೆ ಮಾಡಿ, ಎಷ್ಟು ವ್ಯಥೆಯಿಂದ ಶಾಪ ಹಾಕಿ ಸತ್ತರೋ? ನಾನು ಎಷ್ಟೋ ಸಲ ಈ ಶಾಸನ ಸಭೆಯಲ್ಲಿ ಹೇಳಿದ್ದೇನೆ. ಇಂಥ ಅಸಹಾಯಕ ಜನ, ಅಯ್ಯೋ ದೇವರೇ, ನಮಗೆ ಇಂಥ ಅನ್ಯಾಯವಾಗುತ್ತಿದೆ ಎಂದು ಬಿಡುವ ನಿಟ್ಟುಸಿರಿನಿಂದ, ಅವರ ಶಾಪದಿಂದ ಇದಕ್ಕೆ ಸಂಬಂಧಪಟ್ಟವರು ಎಂದೂ ಕೂಡ ತಪ್ಪಿಸಿಕೊಳ್ಳಲಾರರು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ಇದು ಬಹಳ ದುರ್ದೈವದ ಸಂಗತಿ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಆಗುವುದಂತೂ ಆಗಿದೆ, ಅದರ ಬಗ್ಗೆ ಎಷ್ಟೇ ಮಾತನಾಡಿದರೂ, ಯಾರೇ ಹೋಗಿ ನೋಡಿಕೊಂಡು ಬಂದರೂ ಕೂಡ ಆ ಅಸಹಾಯಕ ಜನರ ಗೋಳು, ಅವರ ಕಷ್ಟ, ಅವರ ಮಕ್ಕಳು ಬೀದಿ ಪಾಲಾದುದು ಇವೆಲ್ಲವನ್ನೂ ತಪ್ಪಿಸಲು ಆಗುವುದಿಲ್ಲ. ಈಗ ಸರ್ಕಾರದ ಕರ್ತವ್ಯ ಏನೆಂದರೆ, ಮುಂದೆ ಇಂಥ ಘಟನೆಗಳು ನಡೆಯದೇ ಇರುವ ಹಾಗೆ ಆಲೋಚನೆ ಮಾಡಿ ಏನಾದರೊಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ಉತ್ತಮ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಅಥವಾ ಇದುವರೆಗೆ ಮಾತನಾಡಿದಂಥ ಎಲ್ಲ ಮಾನ್ಯ ಸದಸ್ಯರುಗಳ ಅಭಿಪ್ರಾಯದಂತೆ ಇದನ್ನು ಸಿ ಬಿ ಐ ಗೆ ವಹಿಸುವುದು ಸೂಕ್ತ. ಹೊರಗಡೆಯಿಂದ ಬರುವಂಥ ಅವರು ನಿಷ್ಪಕ್ಷಪಾತವಾಗಿ ತನಿಖೆ ಮಾಡಿ, ಇದಕ್ಕೆ

ಕಾರಣವೇನು, ಮುಂದೆ ಇಂಥಾದ್ದನ್ನು ಯಾವ ರೀತಿ ತಪ್ಪಿಸಬಹುದು ಎನ್ನುವ ಬಗ್ಗೆ ಸಲಹೆ ಸೂಚನೆಗಳನ್ನುಕೊಡುತ್ತಾರೆ ಎಂದು ನನಗನ್ನಿಸುತ್ತದೆ. ಇಲ್ಲಿ ನೀವು ಜ್ಯುಡಿಷಿಯಲ್ ಎನ್‌ಕ್ವೈರಿ, ಸಿ ಓ ಡಿ ಎನ್‌ಕ್ವೈರಿ ಇವುಗಳನ್ನು ಮಾಡಿಸುತ್ತೇವೆ ಎಂದರೆ, ಇವರೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಇನ್‌ಫ್ಲೂಯೆನ್ಸ್ ಆಗೇ ಆಗುತ್ತಾರೆ. ಒಂದಲ್ಲ ಒಂದು ರೀತಿಯಲ್ಲಿ ನಮ್ಮವರು ಯಾರು, ಅವರು ಯಾರು, ಇವರು ಯಾರು, ಕೆಟ್ಟವರು ಯಾರು, ಒಳ್ಳೆಯವರು ಯಾರು, ನನಗೆ ಏನು, ಅವರಿಗೆ ಏನು, ಅವತ್ತು ಅದು ಮಾಡಿದರು, ಇವತ್ತು ಇದು ಮಾಡಿದರು ಏನ್ನುವುದನ್ನೆಲ್ಲಾ ಕನ್ಸಲ್ಟೇಷನ್‌ಗೆ ತೆಗೆದುಕೊಂಡು ಅವರು ನಿಷ್ಪಕ್ಷಪಾತವಾದ ವರದಿಯನ್ನು ಕೊಡಲಾರರು. ಆ ದೃಷ್ಟಿಯಿಂದ ಇದನ್ನು ಸಿ.ಬಿ.ಐ ಗೆ ವಹಿಸಬೇಕು. ಹೊರಗಡೆಯಿಂದ ಬಂದ ಅವರು ನಿಷ್ಪಕ್ಷಪಾತವಾದ ವರದಿಯನ್ನು ಕೊಡುತ್ತಾರೆ. ಅದರಂತೆ ಈ ಸರ್ಕಾರ ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ಮುಂದೆ ಇಂಥ ದುರ್ಘಟನೆಗಳು ನಡೆಯದ ಹಾಗೆ ತಕ್ಕ ವ್ಯವಸ್ಥೆಗಳನ್ನು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ಖರ್ಗೆಯವರು ಇಂಥ ವಿಚಾರಗಳಲ್ಲಿ ಧೈರ್ಯವಾಗಿ ಫೇಸ್ ಮಾಡಬೇಕು. ಏಕೆಂದರೆ, ಅವರು ಒಬ್ಬ ಹರಿಜನ ಮುಖಂಡರಾಗಿ ಈ ಮಟ್ಟಕ್ಕೆ ಬರಬೇಕಾದರೆ ಹತ್ತಾರು ವರ್ಷಗಳ ಶ್ರಮ ತ್ಯಾಗ, ಹೋರಾಟ ಇವುಗಳಿಂದ ಬಂದಂಥ ವ್ಯಕ್ತಿ ಅವರು. ನಾನು ಬೆಳಗಿನಿಂದ ಅವರನ್ನು ನೋಡುತ್ತಾ ಕುಳಿತಿದ್ದೆ, ಅವರು ತೀರಾ ಡಿಪ್ರೆಷನ್ ಆಗಿ ಕಂಡರು. ಇದನ್ನು ನೀವೇನೂ ಡೈರೆಕ್ಟಾಗಿ ಮಾಡಿದ್ದಲ್ಲ. ನೀವು ಡೈರೆಕ್ಟಾಗಿ ಮಾಡಿಲ್ಲ ಎಂದು ಹೇಳಿದಾಕ್ಷಣ ನೀವು ಇಂಥಾದ್ದನ್ನು ಮಾಡಿಕೊಂಡು ಹೋಗಬಹುದು ಎಂದು ನಾನು ಹೇಳುವುದಿಲ್ಲ. ನೀವು ಎಷ್ಟು ಸಾಧ್ಯವೋ ಅಷ್ಟು ನಿಸ್ಪೃಹತೆಯಿಂದ, ಜನಗಳ ಹಿತದೃಷ್ಟಿಯಿಂದ, ದೇವರು ಮೆಚ್ಚುವಂಥ ಉತ್ತಮವಾದ ಕೆಲಸಗಳನ್ನು ಮಾಡಬೇಕು. ಅದರ ಜೊತೆಗೆ, ಅಕಸ್ಮಾತ್ ತಮ್ಮ ಕೈಮೀರಿ ಇಂಥ ಘಟನೆಗಳು ನಡೆದಾಗ, ಮುಂದೆ ಇಂಥ ಘಟನೆಗಳು ನಡೆಯದ ಹಾಗೆ ಅದಕ್ಕೆ ಏನು ಬೇಕೋ ಅಂಥ ಉತ್ತಮವಾದ ಕೆಲಸಗಳನ್ನು ಮಾಡಿ ನೀವು ಕೀರ್ತಿಶಾಲಿಗಳಾಗಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ. ಈ ರೀತಿಯ ಘಟನೆಗಳು ಪದೇಪದೇ ನಡೆಯುತ್ತಿವೆ. ನಾನು ನೋಡಿದ ಹಾಗೆ ಈ ಶಾಸನಸಭೆಯಲ್ಲಿ ಇಂಥ ಘಟನೆಗಳ ಬಗ್ಗೆ ಚರ್ಚೆಯಾಗುತ್ತಿರುವುದು ಇದು ಸುಮಾರು ಹದಿನೈದನೆಯದೋ, ಇಪ್ಪತ್ತನೆಯದೋ ಇರಬೇಕೆಂದು ಕಾಣುತ್ತದೆ. ಇಂಥವು ನಡೆಯುತ್ತಾ ಇರುತ್ತವೆ. ಇಂಥವುಗಳಿಗೆ ಅವಕಾಶ ಕೊಡಬಾರದು. ಇದು ಕೊನೆಯಾಗಬೇಕು. ಇನ್ನುಮುಂದೆ ಇಂಥ ಅಸಹಾಯಕ ಜನರ ಕೊಲೆ ಮಾಡುವುದು, ಸುಡುವುದು ಇವೆಲ್ಲವನ್ನೂ ತಪ್ಪಿಸಲು ಏನು ಸಾಧ್ಯವೋ ಅದನ್ನು ಮಾಡಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಪುನಃ ಇಂಥ ಒಂದೋ ಎರಡೋ ಘಟನೆಗಳು ನಡೆದರೆ ಖಂಡಿತ ಈ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ ಮತ್ತು ಜನರೂ ಕೂಡ ನಿಮ್ಮನ್ನು ಕ್ಷಮಿಸುವುದಿಲ್ಲ ಎನ್ನುವ ಮಾತನ್ನು

ನಾನು ಈ ಸಂದರ್ಭದಲ್ಲಿ ತಿಳಿಸುತ್ತಾ, ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ.ಚೆನ್ನಿಗಪ್ಪ(ಕೊರಟಗೆರೆ): ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಅನೇಕ ಹಿರಿಯ ಸದ್ಯರು ಮಾತನಾಡಿದ ವಿಚಾರವೆಂದರೆ ಕಂಬಾಲಪಲ್ಲಿಯಲ್ಲಿ ನಡೆದಂತಹ ಒಂದು ದುರ್ಘಟನೆ. ಇದು ರಾಜ್ಯದ ಜನತೆ ಸುಖಶಾಂತಿಯಿಂದ ಜೀವನ ಮಾಡಲು ಸಾಧ್ಯವಾಗದೇ, ಬಡವರಿಗೆ ಆದಂಥ ಅನ್ಯಾಯ ಎಂದು ಹೇಳಲು ಇಷ್ಟಪಡುತ್ತೇನೆ. ಒಂದು ಸರ್ಕಾರ, ಅದು ಯಾವುದೇ ಸರ್ಕಾರವಾಗಿರಬಹುದು, ಅದು ಜನರಿಗೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಸರಿಯಾಗಿ ವ್ಯವಸ್ಥೆ ಮಾಡಿಕೊಡದೇ ಹೋದರೆ ಆ ಸರ್ಕಾರ ಉಳಿಯುವುದಿಲ್ಲ, ಆ ಸರ್ಕಾರವನ್ನು ನಿಜವಾದ ಸರ್ಕಾರ ಎಂದು ಕರೆಯಲು ಸಾಧ್ಯವಾಗುವುದಿಲ್ಲ. ಮನುಷ್ಯನಿಗೆ ಬೇಕಾದ ಒಂದೇ ಒಂದು ಅಂಶವೆಂದರೆ ಸುಖ ಬಾಳ್ವೆ, ಅವರು ಕೂಲಿ ಆಮಾಡಿ ತಿನ್ನಲಿ, ಏನೇ ಮಾಡಿ ತಿನ್ನಲಿ, ಅವರು ಸುಖ ಶಾಂತಿಯಿಂದ ಜೀವನ ಮಾಡಲು ಅವಕಾಶ ಮಾಡಿಕೊಡುವುದು ಸರ್ಕಾರದ ಕರ್ತವ್ಯ. ಇಲ್ಲಿ ಏಳು ಜನ ಹರಿಜನರ ಕೊಲೆ ಮಾಡುವಂಥ ಸಂದರ್ಭ ಬಂದಾಗ ಈ ಸರ್ಕಾರ ಅಲ್ಲಿ ಪೋಲೀಸರನ್ನು ನಿಯೋಜನೆ ಮಾಡದೆ, ಮುಂಜಾಗರೂಕತೆಯಿಂದ ಅಲ್ಲಿಗೆ ಪೋಲೀಸರನ್ನು ನಿಯೋಜನೆ ಮಾಡದೆ, ಮುಂಜಾಗರೂಕತೆಯಿಂದ ಅಲ್ಲಿಗೆ ಪೋಲೀಸರನ್ನು ಅಳವಡಿಸದೇ ಆಗಿರುವಂಥ ಒಂದು ಕೃತ್ಯವಿದು ಎಂದು ನನಗನ್ನಿಸುತ್ತದೆ. ಕಾರಣವೆಂದರೆ, ಇವತ್ತು ಪೋಲೀಸ್ ಇಲಾಖೆಯಲ್ಲಿ ಹಿರಿಯ ಅಧಿಕಾರಿಗಳು ಏನೇ ಡೈರೆಕ್ಷನ್ ಕೊಟ್ಟರೂ, ಅವರ ಕೆಳಗಿನವರು, ಅದು ಸಬ್‌ಇನ್ಸ್‌ಪೆಕ್ಟರ್ ಆಗಿರಬಹುದು, ಸರ್ಕಲ್ ಇನ್ಸ್‌ಪೆಕ್ಟರ್ ಆಗಿರಬಹುದು, ಅವರು ಸ್ಪಾಟ್‌ಗೆ ಹೋಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಅನೇಕ ಹಳ್ಳಿಗಳಿಗೆ ರಾತ್ರಿ ಬೀಟಿಗೆ ಎಂದು ಪೋಲೀಸರನ್ನು ಹಾಕುತ್ತಾರೆ. ಅವರು ಹಳ್ಳಿಗೆ ಹೋಗಿ ಬೀಟ್ ಪುಸ್ತಕಕ್ಕೆ ಸೈನ್ ಮಾಡುವುದಿಲ್ಲ. ಒಂದು ಹಳ್ಳಿಗೆ ಹೋಗಿ, ಯಾರನ್ನೂ ಏನಾಗಿದೆ ಎಂದು ಕೇಳುವುದಿಲ್ಲ. ರಾಜ್ಯ ಪೋಲೀಸ್ ಇಲಾಖೆ ಅಷ್ಟು ಕೆಟ್ಟಿದೆ. ಇದು ನಾವು ಕಂಡಂಥ ವಿಚಾರ. ಇವತ್ತು ಅನೇಕ ಶಾಸಕರು ಎಷ್ಟೇ ಲೆಟರ್ ಕೊಟ್ಟರೂ ಅಥವಾ ಫೋನ್ ಮಾಡಿದರೂ ಹೋಗಿಬರುತ್ತೇವೆ ಎಂದು ಹೇಳುತ್ತಾರೆ. ನಂತರ ಎಲ್ಲಿಗೆ ಹೋಗಿದ್ದಪ್ಪಾ ಎಂದರೆ ಮೀಟಿಂಗಿಗೆ ಹೋಗಿದ್ದೆ ಎಂದು ಹೇಳುತ್ತಾರೆ. ಇಲ್ಲವೆಂದರೆ ನನಗೆ ನೈಟ್ ಡ್ಯೂಟಿ ಇತ್ತು ಎಂದು ಹೇಳುತ್ತಾರೆ. ಯಾವ ಹಳ್ಳಿಗಳಿಗೂ ಹೋಗುವುದಿಲ್ಲ, ಯಾವ ನೈಟ್ ಡ್ಯೂಟಿಯನ್ನೂ ಮಾಡುವುದಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಪೊಲೀಸರು ಅಷ್ಟರಮಟ್ಟಿಗೆ ನಿಷ್ಕ್ರಿಯರಾಗಿದ್ದಾರೆ. ಹಿರಿಯ ಸಚಿವರಾದ ಮಾನ್ಯ ಖರ್ಗೆಯವರು ಇಲ್ಲಿ ಕುಳಿತಾಗ ಅನೇಕ ಸಲ ಹೇಳುತ್ತಿದ್ದರು. ಒಂದು ಸಲ ರಾಮನಗರದಲ್ಲಿ ಫ್ಯಾಕ್ಟರಿ ವಿಚಾರದಲ್ಲಿ ಫೈರಿಂಗ್ ಆದಾಗ ಕೂಡಲೇ ಎಸ್.ಪಿ.ಯವರನ್ನು ಸಸ್ಪೆಂಡ್ ಮಾಡಿ

ಎಂದು ಹೇಳಿದ್ದರು. ಈಗ ನಾನು ವಿನಂತಿ ಮಾಡುತ್ತಿದ್ದೇನೆ. ಏಳು ಜನ ಅಸಹಾಯಕ ಹರಿಜನರು ಸತ್ತಿದ್ದಾರೆ, ಅದಕ್ಕಾಗಿ ಅಲ್ಲಿರುವಂಥ ಎಸ್.ಪಿ.ಯವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಎಷ್ಟರ ಮಟ್ಟಿಗೆ ಇದೆ ಎನ್ನುವುದನ್ನು ಈಗಾಗಲೇ ಅನೇಕ ಹಿರಿಯ ಶಾಸಕರು ಮತ್ತು ಮಾಜಿ ಸಚಿವರು ಮಾತನಾಡಿದ್ದಾರೆ. ಸನ್ಮಾನ್ಯ ಸಿಂಧ್ಯಾರವರೂ ಹೇಳಿದ್ದಾರೆ. ಅವರ ಕಾಲದಲ್ಲಿ ನಾವು ಇಂಥ ಅನೇಕ ವಿಚಾರಗಳನ್ನು ಅವರಿಗೆ ಹೇಳಿದಾಗ ಅವರು ಕೂಡಲೇ ಬರೆಯುತ್ತಿದ್ದರು, ನಮ್ಮ ಮುಂದೆಯೇ ಡಿ.ಜಿ.ಯವರಿಗೆ ಫೋನ್ ಮಾಡಿ ಈ ಕೆಲಸ ಮಾಡಿ ಎಂದು ಹೇಳುತ್ತಿದ್ದರು. ನಾನು ಮಾನ್ಯ ಖರ್ಗೆಯವರನ್ನು ನಿಷ್ಠೂರ ಮಾಡಲು ಇಷ್ಟಪಡುವುದಿಲ್ಲ. ಯಾವ ಅಧಿಕಾರಿಗಳು ತಪ್ಪು ಮಾಡಿದ್ದಾರೆ, ಲಾ ಅಂಡ್ ಆರ್ಡ್‌ರ್ ಕಾಪಾಡುವ ವಿಚಾರದಲ್ಲಿ ಯಾವ ಮಟ್ಟದಲ್ಲಿ ಅಧಿಕಾರಿಗಳಿಂದ ವಂಚನೆಯಾಗಿದೆ ಅಂಥವರ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕು. ಮತ್ತು ಅಸು ನೀಗಿರುವ ಏಳು ಜನ ಹರಿಜನ ಕುಟುಂಬದವರಿಗೆ ಒಳ್ಳೆಯ ರೀತಿಯಿಂದ ಜೀವನ ಮಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಅನುಕೂಲ ಮಾಡಿಕೊಡಲು ಕೂಡಲೇ ಸರ್ಕಾರ ಮುಂದಾಗಬೇಕು ಎಂದು ವಿನಂತಿ ಮಾಡುತ್ತೇನೆ. ಇಂಥ ಘಟನೆ ನಡೆದಿರುವುದು ಇದೇ ಮೊದಲು ಎಂದು ನನಗನ್ನಿಸುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಶಾಸಕರಾಗಿದ್ದ ಅಸ್ನೋಟಿಕರ್‌ರವರು ಕಳೆದ ವರ್ಷ ಈ ಸದನದಲ್ಲಿದ್ದರು. ಅವರು ಸಜ್ಜನಿಕೆಯಿದ್ದವರು, ಬಡವರ ಬಗ್ಗೆ ಕಾಳಜಿ ಇದ್ದವರು, ಅವರು ಉತ್ತಮವಾದ ಕೆಲಸ ಮಾಡುತ್ತಿದ್ದರು ಎಂದು ಸಚಿವರು ಹೇಳಿದರು. ಆದರೆ ಅವರ ಕೊಲೆಯಾಯಿತು. ಸ್ವಾಮಿ, ಇವತ್ತು ಶಾಸಕರಿಗೆ ಪ್ರೊಟೆಕ್ಷನ್ ಎಲ್ಲಿದೆ? ದಯಮಾಡಿ ಯೋಚನೆ ಮಾಡಿ. ಶಾಸಕರು ಬಹಳ ಕಷ್ಟಪಟ್ಟು ಹಳ್ಳಿಗಳಿಗೆ ತಿರುಗಿ, ಜನರಿಗೆ ಕೈಮುಗಿದು, ಕಾಲಿಗೆ ಬಿದ್ದು, ಒಳ್ಳೆಯ ಕೆಲಸಗಳನ್ನು ಮಾಡಿ ಅವರು ಶಾಸಕರಾಗಿ ಇಲ್ಲಿಗೆ ಬರುತ್ತಾರೆ. ಇದ್ದಕ್ಕಿದ್ದಹಾಗೆ ಅವರನ್ನು ಕೊಲೆ ಮಾಡುವಂಥ ಪರಿಸ್ಥಿತಿ ಬಂದಾಗ ಸರ್ಕಾರದ ಕರ್ತವ್ಯವೇನು? ಅದನ್ನು ತಾವು ಯೋಚನೆ ಮಾಡಬೇಕು. ಅದು ಯಾವುದೇ ಸರ್ಕಾರವಾಗಬಹುದು, ನಮ್ಮ ಸರ್ಕಾರವಿರಬಹುದು ಅಥವಾ ನಿಮ್ಮ ಸರ್ಕಾರವಿರಬಹುದು, ಯಾವ ಸರ್ಕಾರ ಎನ್ನುವ ಪ್ರಶ್ನೆ ಇಲ್ಲಿ ಇಲ್ಲ. ಸರ್ಕಾರ ಶಾಸಕರಿಗೆ ಪ್ರೊಟೆಕ್ಷನ್ ಕೊಡಬೇಕು. ಹರಿಜನರು ಸತ್ತರೆ ಅವರಿಗೂ ಪ್ರೊಟೆಕ್ಷನ್ ಇಲ್ಲ, ಅಲ್ಲಿಯ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಆವತ್ತು ಅಲ್ಲಿಗೆ ಪೋಲೀಸರನ್ನು ಏಕೆ ಹಾಕಲಿಲ್ಲ. ರೆಡ್ಡಿ ಎನ್ನುವ ಒಬ್ಬ ಮನುಷ್ಯ ಸತ್ತ ದಿನ ಅಲ್ಲಿ ಪೋಲೀಸಿನವರನ್ನು ಹಾಕಿದ್ದರೆ ಇದು ಆಗುತ್ತಿರಲಿಲ್ಲ, ಇದನ್ನು ಕಂಟ್ರೋಲ್ ಮಾಡಬಹುದಿತ್ತು. ಅನೇಕ ಹಿರಿಯರು ಹೇಳುತ್ತಿದ್ದರು, ಐ.ಪಿ.ಸಿ, ಸಿ.ಆರ್.ಪಿ.ಸಿ ಸೇರಿ ಎಫ್ ಐ.ಆರ್.ಚೇಂಜ್ ಮಾಡುತ್ತಾರೆ ಎಂದು, ಮಾನ್ಯ ಹೆಗಡೆಯವರು ಹೇಳುತ್ತಿದ್ದರು, ಅದು ನಿಜ, ಎಫ್.ಐ.ಆರ್ ಹಾಕಬೇಕಾದರೆ ಯಾರೋ ಬೇಕಾದವರು ಹೋಗಿ

ಅವರಿಗೆ ಹಣ ಕೊಟ್ಟರೆ ಐ ಪಿ ಸಿ 302 ಇದ್ದರೆ ಅದನ್ನು ಸೆಕ್ಷನ್ 304 ಎಂದೂ ಅಥವಾ ಇನ್ನೂ ಏನು ಮಾಡಿದರೂ ನಡೆಯುತ್ತದೆ.

3.50 ಪಿ.ಎಂ

ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಪಂಚಾಯಿತಿ ಚುನಾವಣೆ ನಡೆಯುವಂಥ ಕಾಲದಲ್ಲಿ ಇಂಥ ಕಡೆ ಗಲಾಟೆ ನಡೆಯುತ್ತಿದೆ ಎಂದು ನಾನು ಕೂಡಲೆ ಎಸ್.ಪಿ.ಯವರಿಗೆ ಬರೆದು ಕಳುಹಿಸಿದೆ. ಎಸ್.ಪಿ.ಯವರು ಆರ್ಡರ್ ಮಾಡಿದರೂ ಕೂಡ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸಬ್ ಇನ್ಸ್‌ಪೆಕ್ಟರ್‌ರವರು ಸ್ಪಾಟ್‌ಗೆ ಹೋಗಲಿಲ್ಲ. ನೆಲಮಂಗಲ ತಾಲ್ಲೂಕಿನ ಚಿಕ್ಕನ ಹಳ್ಳಿಯಲ್ಲಿ ಹರಿಜನರ ಗಲಾಟೆಯಾಯಿತು. ಅಲ್ಲಿಯ ಸಬ್ ಇನ್ಸ್‌ಪೆಕ್ಟರಿಗೆ ಸ್ಥಳಕ್ಕೆ ಹೋಗಿ ನೋಡಿ ಎಂದು ಹೇಳಿದರೂ ಕೂಡ ಆ ಸ್ಪಾಟ್‌ಗೆ ಹೋಗಲಿಲ್ಲ ನೆಲಮಂಗಲದ ಸಬ್‌ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಡಿ.ಎಸ್.ಪಿ. ಇವರುಗಳಿಗೆ ಅಲ್ಲಿಯ ಹರಿಜನರು ಹೋಗಿ ಅರ್ಜಿಯನ್ನು ಕೊಟ್ಟರೆ ಅದನ್ನು ಸ್ವೀಕಾರ ಮಾಡದೆ ಅವರನ್ನು ವಾಪಸ್ಸು ಕಳುಹಿಸಿದ್ದಾರೆ. ಇಂಥ ಘಟನೆಗಳಿಗೆ ನಾವು ಕಾರಣರಲ್ಲ, ಈ ವ್ಯವಸ್ಥೆಯೇ ಕಾರಣ. ಬಡವರ ಅಥವಾ ಹರಿಜನರ ಕೊಲೆ ಆಗಿರಬಹುದು, ಇದಕ್ಕೆ ಕಾರಣಕರ್ತರು ಯಾರೆಂದರೆ ಸರ್ಕಾರ ಎಂದು ಹೇಳಬೇಕಾಗುತ್ತೆ. ಏಕೆಂದರೆ ಯಾರು ತಪ್ಪಿತಸ್ಥರು ಎಂದು ಕಂಡುಬರುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇನ್ನು ಈ ಅಪರಾಧ ತಡೆ ಸಪ್ತಾಹ ಎಂದು ಮಾಡುತ್ತಿದ್ದೀರಿ, ಇದರ ಉದ್ದೇಶ ಏನು? What is the meaning of that? It is the prevention of the crimes in the State. ಬೇಕಾಬಿಟ್ಟಿ ಬೋರ್ಡ್ ಹಾಕಿಕೊಂಡು, ಬ್ಯಾನರ್ ಹಾಕಿಕೊಂಡು, ಅಧಿಕಾರದಲ್ಲಿರುವವರನ್ನು ಕರೆಸಿ ಫಸ್ಟ್‌ಕ್ಲಾಸ್ ಆಗಿ ಒಂದು ಸಮಾರಂಭ ಮಾಡಿ ಎರಡು ಮಾತು ಹೇಳಿಬಿಟ್ಟು ಹೋಗುತ್ತಾರೆ. ಇದರಿಂದ ನಾಡಿಗೆ ಏನು ಸಿಗುತ್ತದೆ? ಇತ್ತೀಚೆಗೆ ಪೆಟ್ರೋಲ್ ಬ್ಯಾಂಕ್‌ನ ಮಾಲೀಕರಿಗೆ ದರೋಡೆಕೋರರು ಚೂರಿ ಹಾಕಿದರು, ಶಿಕ್ಷಕರನ್ನು ಕೊಲೆ ಮಾಡಿದರು ಹೀಗೆ ಪ್ರತಿದಿನ ಮರ್ಡರ್, ಕೊಲೆ, ಸಾಯಿಸಿದರು, ರೇಪ್ ಮಾಡಿದರು ಎಂದು ಪತ್ರಿಕೆಯಲ್ಲಿ ಬರುತ್ತಲೇ ಇದೆ. ಇದಕ್ಕೆಲ್ಲ ಕಾರಣ ಸರ್ಕಾರ ತನ್ನ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುತ್ತಿಲ್ಲ. ಒಂದು ಸರ್ಕಾರ ಉಳಿಯಬೇಕಾದರೆ ಕಾನೂನು ಮತ್ತು ಸುವ್ಯವಸ್ಥೆ ಬಹಳ ಮುಖ್ಯ. ಒಂದು ಸರ್ಕಾರದ ಅಳಿವು ಉಳಿವು ತನ್ನ ಆಡಳಿತಾವಧಿಯಲ್ಲಿನ ಲಾ ಅಂಡ್ ಆರ್ಡರ್ ಸ್ಥಿತಿಯ ಮೇಲೆ ಡಿಪೆಂಡ್ ಆಗುತ್ತದೆ. ಆ ಒಂದು ನಿಟ್ಟಿನಲ್ಲಿ ಅಲ್ಲಿಯ ಹರಿಜನರ ಕೊಲೆಗೆ ಸರ್ಕಾರದ ವೈಫಲ್ಯತೆಯೇ ಕಾರಣ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಕೂಡಲೇ ಸಿ.ಬಿ.ಐ.ಎನ್‌ಕ್ವಯರಿ ಮಾಡಿಸುವುದು ಒಳ್ಳೆಯದು. ಅಲ್ಲಿ ಅಷ್ಟು ಹರಿಜನರು ಸತ್ತಾಗ ನಾವು ಇಲ್ಲಿ ಸುಮ್ಮನೆ ಕುಳಿತುಕೊಂಡು ಇದ್ದರೆ ನಿಜವಾಗಿ ದೇವರು ಒಳ್ಳೆಯದು

ಮಾಡುವುದಿಲ್ಲ. ಸದನದಲ್ಲಿ ಸುಮ್ಮನೆ ಮಾತನಾಡಿಕೊಂಡು ಅಥವಾ ಏನೋ ಮಾಡಿಕೊಂಡು ಟಿ.ಎ. ಡಿ.ಎ. ತೆಗೆದುಕೊಂಡು ಹೋಗುವ ಸಲುವಾಗಿ ನಾವು ಜನರಿಂದ ಆರಿಸಿ ಬಂದಿಲ್ಲ. ನಮಗೆಲ್ಲರಿಗೆ ಜವಾಬ್ದಾರಿ ಇದೆ. ಈ ರಾಜ್ಯದ ಜನತೆಗೆ ಉತ್ತಮವಾದಂಥ ಕಾನೂನು ಸುವ್ಯವಸ್ಥೆಯನ್ನು ಕಲ್ಪಿಸಿಕೊಡುವುದು ನಮ್ಮ ಕರ್ತವ್ಯವಾಗಿರುತ್ತದೆ. ಆದರೆ ಅದರಲ್ಲಿ ಲೋಪ ಆಗಿದೆ. ಆದ್ದರಿಂದ ದಯಮಾಡಿ ಈ ಘಟನೆಯ ಬಗ್ಗೆ ಸಿ.ಬಿ.ಐ ಎನ್‌ಕ್ವಯರಿ ಮಾಡಿಸಬೇಕು. ಇದನ್ನು ಸಿ.ಒಡಿ.ಗೆ ಒಪ್ಪಿಸುವುದು ಬೇಡ ಏಕೆಂದರೆ ಸಿ.ಒ.ಡಿಯಲ್ಲಿ ಯಾರಾದರೂ ಪ್ರಮುಖ ವ್ಯಕ್ತಿ ಒತ್ತಡ ತಂದರೆ ಎಫ್.ಐ.ಆರ್‌ನ್ನು ತಿರುಚಿ ಬೇರೆ ಸ್ಟೇಟ್‌ಮೆಂಟ್ ಮಾಡಿ, ಸಿ.ಆರ್.ಪಿ.ಸಿ. ಬೇರೆ ಮಾಡಿ ಇವರು ಆಪಾದನೆ ಮಾಡಿಲ್ಲ ಎಂದು ವರದಿ ಕೊಟ್ಟು ಆಪಾದಿತನನ್ನು ಉಳಿಸಿದಂಥ ಅನೇಕ ಕೇಸುಗಳು ನಡೆದಿವೆ. ಇದು ನನಗೆ ಗೊತ್ತಿರುವ ವಿಚಾರ. 7 ಜನ ಹರಿಜನರ ಕೊಲೆ ಆಗಿರುವ ಬಗ್ಗೆ ಮಾನ್ಯ ಗೃಹಸಚಿವರು ಮತ್ತು ಪೊಲೀಸರು ಹೆಚ್ಚಿನ ಕಾಳಜಿವಹಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು. ಇನ್ನು ಆಸ್ನೋಟಿಕಲ್‌ರವರ ಹತ್ಯೆ ಬಗ್ಗೆ ಹೇಳುವುದಾದರೆ, ನಾವೆಲ್ಲ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಗೆದ್ದು ವಿಧಾನಸಭೆಗೆ ಬಂದಿದ್ದೇವೆ. ನಾವು ಮರ್ಡರ್ ಆದೆವು ಎಂದರೆ ನಮ್ಮ ಡಿಪೆಂಡೆಟ್ಸ್‌ನ ಗತಿ ಏನು? ಜನರ ಮಾನಸಿಕ ಒತ್ತಡ ಏನಾಗಬೇಕು? ಅವರ ಸಂಸ್ಕೃತಿ, ಜೀವನ ಏನಾಗಬಹುದು ದಯಮಾಡಿ ಯೋಚನೆ ಮಾಡಿ. ಅಸ್ನೋಟಿಕರ್ ಕುಟುಂಬಕ್ಕೆ ಎಲ್ಲಾ ರೀತಿಯಲ್ಲೂ ಸಹಾಯ ಮಾಡುವುಕ್ಕೆ ಸರ್ಕಾರ ಮುಂದಾಗಬೇಕು. ಆ ಅಪರಾಧಿಗಳನ್ನು ಈಗಾಗಲೇ ಬಂಧಿಸ ಬೇಕಾಗಿತ್ತು. ಬಂಧಿಸದೇ ಇರುವುದು ಇದು ಭಾರೀ ಅವಮಾನಕರ ಪ್ರಸಂಗ. ಆದ್ದರಿಂದ ಆಂಧ್ರ ಪ್ರದೇಶದಲ್ಲಿ ಶಾಸಕರಿಗೆ ಪೊಲೀಸರ ಪ್ರೊಟೆಕ್ಷನ್ ಕೊಟ್ಟ ಹಾಗೆ ನಮ್ಮ ಶಾಸಕರೆಲ್ಲರಿಗೂ ಸಹ ಪೊಲೀಸ್ ಪ್ರೊಟೆಕ್ಷನ್ ಕೊಡುವ ಸಲುವಾಗಿ ವ್ಯವಸ್ಥೆ ಮಾಡಬೇಕು, ಏಕೆಂದರೆ ಶಾಸಕರು ಸತ್ತಾಗ ಆಗತಕ್ಕಂಥ ಅನ್ಯಾಯ ಅಪಾರ, ನಾವು ತಬ್ಬಲಿಗಳು, ನಮಗೆ ಯಾರೂ ರಕ್ಷಣೆ ಇಲ್ಲ, ಅನೇಕ ಜನ ವೈರಿಗಳು ಕ್ಷೇತ್ರದಲ್ಲಿ ಇರುತ್ತಾರೆ, ಸಾಯಿಸಬೇಕೆನ್ನುವ ಜನ ಪಕ್ಕದಲ್ಲಿ, ಜೊತೆಯಲ್ಲಿ ಇರುತ್ತಾರೆ, ಆದರೆ ಅದು ಗೊತ್ತಾಗುವುದಿಲ್ಲ. ಅಂಥವರು ಶಾಸಕರು ಒಳ್ಳೆಯ ಕೆಲಸ ಮಾಡುವುದಕ್ಕೆ ಹೋದರೆ ಬಿಡುವುದಿಲ್ಲ. ಆದ್ದರಿಂದ ಮಾನ್ಯ ಗೃಹಸಚಿವರಾದ ಶ್ರೀ ಖರ್ಗೆಯವರು ಇದನ್ನೆಲ್ಲಾ ಯೋಚನೆ ಮಾಡಿ ಎಲ್ಲಾ ಶಾಸಕರಿಗೆ ಹತ್ಯೆಯನ್ನು ತಪ್ಪಿಸುವ, ಪ್ರಾಣಾಂತಿಕ ಹಲ್ಲೆಯನ್ನು ತಪ್ಪಿಸುವ ಸಲುವಾಗಿ ಬಾಡಿಗಾರ್ಡ್‌ಗಳನ್ನು ಕೂಡಲೇ ನಿಯೋಜಿಸುವ ಸಲುವಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು ಹೆದ್ದಾರಿಯಿಂದ ನೆಲಮಂಗಲ ಟೌನ್‌ಗೆ ಹೋಗಬೇಕಾದರೆ 20 ನಿಮಿಷ ಬೇಕಾಗುತ್ತದೆ. ಆ ಸ್ಥಳದಲ್ಲಿ ಬಹಳಷ್ಟು ದರೋಡೆಗಳು ಆಗುತ್ತಿವೆ. ಆದರೆ ಅಲ್ಲಿ ಅನೇಕ ಸಾರಿ ಪೊಲೀಸ್ ಅಧಿಕಾರಿಗಳು ಕಾಣಸಿಗುವುದಿಲ್ಲ. ಈ ಸ್ಥಳದಲ್ಲಿ ಏಕೆ ಇರುವುದಿಲ್ಲ ಎಂದು ಜನರು ಅವರನ್ನು ಕೇಳಿದರೆ, ಅವರು ಏನೆನ್ನುತ್ತಾರೆಂದರೆ ಸ್ವಾಮಿ ನಾವು 3 ಲಕ್ಷ ಕೊಟ್ಟು

ಬಂದಿದ್ದೇವೆ, ನಾವು 4 ಲಕ್ಷ ಕೊಟ್ಟು ಬಂದಿದ್ದೇವೆ ಎಂದು ಹೇಳುತ್ತಾರೆ. ಇತ್ತೀಚೆಗೆ ನಮ್ಮಲ್ಲಿಗೆ ಶ್ರೀ ರಾಮಕೃಷ್ಣ ಎನ್ನುವ ಎಸ್.ಪಿ. ಅವರನ್ನು ಹಾಕಿದ್ದಾರೆ. ಒಳ್ಳೆಯ ಆಫೀಸರ್. ಸಣ್ಣ ಅಪರಾಧ ಆಗಿದೆ ಎಂದು ಕೇಳಿ ಬಂದರೂ ಅವರು ಸ್ಪಾಟ್‌ಗೆ ಹೋಗಿ ಚೆಕ್ ಮಾಡಿ ಬರುತ್ತಾರೆ. ಅಂಥವರನ್ನು ಎಲ್ಲಾ ಕಡೆ ನಿಯೋಜನೆ ಮಾಡಿ, ನಿಜವಾಗಿಯೂ ಜನರಿಗ ಅನುಕೂಲವಾಗುತ್ತದೆ. ಇದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಅದೇ ರೀತಿ ಕಂಬಾಲಪಲ್ಲಿಯಲ್ಲಿ ಆದಂಥ ಘಟನೆ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಂಡು ಅಪರಾಧಿಗಳನ್ನು ಬಂಧಿಸುವ ಕೆಲಸ, ನೊಂದವರಿಗೆ ಪರಿಹಾರವನ್ನು ಕೊಡುವಂಥ ಕೆಲಸದಬಗ್ಗೆ ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಇಷ್ಟು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಸಿ.ಬೈರೇಗೌಡ (ವೇಮಗಲ್ ಕ್ಷೇತ್ರ): ಮಾನ್ಯ ಉಪಾಧ್ಯಕ್ಷರೆ, ಈ ವಿಧಾನಸಭೆ ಅಸ್ತಿತ್ವಕ್ಕೆ ಬಂದು ಸುಮಾರು 50 ವರ್ಷಗಳ ನಂತರ ಅತ್ಯಂತ ಹೀನಾಯವಾದಂಥ ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿರುವುದು ದುರದೃಷ್ಟಕರ. ಈ ಸದನದ ಮಾನ್ಯ ಸದಸ್ಯರಾಗಿರತಕ್ಕಂಥ ನಮಗೂ ಸಹ ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಗೌರವಯುತವಾದ ನಮ್ಮ ಜೀವನದಲ್ಲಿ ಅವಕಾಶ ಒದಗಿ ಬಂದಿದೆ ಎನ್ನುವುದು ನನ್ನ ಅಭಿಪ್ರಾಯ. ಅತ್ಯಂತ ಶಾಂತಿಪ್ರಿಯವಾದಂಥ ರಾಜ್ಯವಾದ ನಮ್ಮ ಕರ್ನಾಟಕದಲ್ಲಿ ಮನುಷ್ಯರು ಮನುಷ್ಯರ ರೀತಿಯಲ್ಲಿ ವರ್ತನೆ ಮಾಡದೆ ಮೃಗಗಳನ್ನು ಸಾಯಿಸತಕ್ಕಂಥ ರೀತಿಯಲ್ಲಿ ವರ್ತನೆ ಮಾಡುತ್ತಿರುವುದು ಬಹಳ ವಿಷಾದಕರ ಸಂಗತಿ. ಇತ್ತೀಚಿನ ದಿನಗಳಲ್ಲಿ ಕೆಲವು ಘಟನೆಗಳನ್ನು ನೋಡಿದಾಗ ಮತ್ತು ನಮ್ಮ ಜಿಲ್ಲೆಯಲ್ಲಿ ಆದಂಥ ಈ ಘಟನೆ ನೋಡಿದಾಗ ನಾವು ಬಿಹಾರದಲ್ಲಿ ಇದ್ದೇವೆಯೋ ಕಾಶ್ಮೀರದಲ್ಲಿ ಪಾಕಿಸ್ಥಾನದಲ್ಲಿ ಅಥವಾ ಶ್ರೀಲಂಕಾದಲ್ಲಿ ಇದ್ದೇವೆಯೋ ಎನ್ನುವಂಥ ಪ್ರಶ್ನೆಯನ್ನು ನಮ್ಮಲ್ಲಿ ನಾವೇ ಹಾಕಿಕೊಳ್ಳತಕ್ಕಂಥ ಪರಿಸ್ಥಿತಿ ಇವತ್ತಿನ ದಿವಸ ಉಂಟಾಗಿದೆ. ಅದರಲ್ಲೂ ಆ ಜಿಲ್ಲೆಯಿಂದ ಬಂದಿರತಕ್ಕಂಥವನಾಗಿ ಮತ್ತು ಕಳೆದ ಐದು ವರ್ಷಗಳಿಂದ ನಾನು ಆ ಜಿಲ್ಲೆಯ ಜವಾಬ್ದಾರಿಯನ್ನು ಹೊತ್ತಿರತಕ್ಕಂಥವನಾಗಿ ಅತ್ಯಂತ ಅವಮಾನಿತನಾಗಿ ಈ ಚರ್ಚೆಯಲ್ಲಿ ಭಾಗವಹಿಸತಕ್ಕಂಥ ಪರಿಸ್ಥಿತಿ ಬಂದೊದಗಿದೆ ಎಂದು ತಮ್ಮ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಸತ್ತಿರತಕ್ಕಂಥವರು ಯಾರು ಎಂದರೆ, ಒಂದು ಕಡೆ ಸತ್ತಿರತಕ್ಕಂಥವನು ಕೇವಲ 200 ರೂಪಾಯಿ ವರೆಗೆ ದುಡಿದು ಜೀವನ ನಡೆಸುತ್ತಿರತಕ್ಕಂಥವನು, ಮತ್ತೊಂದು ಕಡೆ ಕೂಲಿ, ಕಾಳು ಇಲ್ಲದೆ ನಿರ್ಗತಿಕರಾಗಿರತಕ್ಕಂಥವರು, ಜೀವನ ನಡೆಸಬೇಕಿದ್ದರೆ ಅವರೆಲ್ಲರೂ ಬೆಳಿಗ್ಗೆಯಿಂದ ಸಂಜೆವರೆಗೆ ಕೂಲಿ ಮಾಡಿ ಬೆವರುಸುರಿಸಿ ದುಡಿದು ಜೀವನ ಮಾಡತಕ್ಕಂಥವರು. ಅವರೆಲ್ಲರೂ ಸಹ ಆರ್ಥಿಕವಾಗಿ ದುರ್ಬಲವರ್ಗಕ್ಕೆ ಸೇರಿರತಕ್ಕಂಥವರು. ಈ ದುರ್ಬಲ

ವರ್ಗದವರು ಯಾವ ವರ್ಗದ ಮೇಲೆ ಹೋರಾಟ ನಡೆಸಬೇಕಾಗಿತ್ತೋ ಆ ವರ್ಗದ ಆಲೋಚನೆ ಇಲ್ಲದೆಯೇ ತಮ್ಮ ತಮ್ಮಲ್ಲಿಯೇ ಹೋರಾಟವನ್ನು, ಪ್ರಾಣಾಂತಿಕ ಹಲ್ಲೆಯನ್ನು ನಡೆಸುವುದು, ಬರ್ಬರ ಕೃತ್ಯವನ್ನು ನಡೆಸುವಂಥದ್ದಕ್ಕೆ ಜನ ಮುಂದಾಗುತ್ತಾರೆ ಎನ್ನುವುದಾದರೆ ನಾವು ಎಂಥ ಪರಿಸ್ಥಿತಿಗೆ ಇಂದು ತಲುಪಿದ್ದೇವೆ, ಆ ವ್ಯವಸ್ಥೆಗೆ ಮೂಲ ಕಾರಣ ಏನು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಇಂಥ ದುರ್ವ್ಯವಸ್ಥೆಗೆ ಬಹಳ ವೇಗವಾಗಿ ನಾವು ಮುಂದಾಗುತ್ತಿದ್ದೇವೆ, ಇದು ಅತ್ಯಂತ ದುರಂತದ ಕಡೆಗೆ ನಾವು ಹೋಗುತ್ತಿದ್ದೇವೆ ಎಂದು ನಾವು ಯೋಚನೆ ಮಾಡಿದಾಗ ಮುಂದೆ ಏನಾಗಬಹುದು ಎನ್ನತಕ್ಕಂಥ ಭಯ ಕೂಡ ಉಂಟಾಗುತ್ತದೆ. ಇವತ್ತು ಈ ಘಟನೆ ನಡೆದಿದೆ. ಈ ಘಟನೆ ಬಗ್ಗೆ ಅನೇಕ ವಿಶ್ಲೇಷಣೆಗಳು, ವಿಚಾರಗಳು ಕೂಡ ಪ್ರಸ್ತಾಪ ಆಗಿವೆ ಮತ್ತು ಪತ್ರಿಕೆಗಳಲ್ಲಿ ಕೂಡ ಬಂದಿದೆ. ಇಲ್ಲಿ ಮಾತನಾಡಿದಂಥ ಮಾನ್ಯ ಸದಸ್ಯರುಗಳು ಕೂಡ ತಿಳಿಸಿದ್ದಾರೆ. ಇಂಥ ವಿಚಿತ್ರವಾದಂಥ ಪರಿಸ್ಥಿತಿ ಒಂದು ಕಡೆ ಆದರೆ ಆಡಳಿತ ನಡೆಸುತ್ತಿರತಕ್ಕಂಥ ಅವರ ವೈಫಲ್ಯತೆ, ಅದರಲ್ಲೂ ಕೂಡ ಕೆಳಮಟ್ಟದಲ್ಲಿ ಇರತಕ್ಕಂಥ ವೈಫಲ್ಯತೆ ಸಹ ಇದಕ್ಕೆ ಅತಿ ಮುಖ್ಯ ಕಾರಣ. ಹಾಗೆಯೇ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರುವ ಪೋಲೀಸ್ ಇಲಾಖೆಯ ಕೆಳ ಮಟ್ಟದಲ್ಲಿರುವ ಅಧಿಕಾರಿಗಳ ವೈಫಲ್ಯತೆಯೇ ಇದಕ್ಕೆ ಮೂಲ ಕಾರಣ. ಈ ಹಳ್ಳಿಯಲ್ಲಿ ಘರ್ಷಣೆಗಳು ನಡೆದಿರುವುದು ಇದೇ ಮೊದಲೇನಲ್ಲ. ಹಿಂದೆ ಕೂಡ ಘರ್ಷಣೆಗಳಾಗಿವೆ. ಆ ಹಳ್ಳಿಯಲ್ಲದೆ; ಆ ಪ್ರದೇಶದಲ್ಲೂ ಕೂಡ ಆಗಾಗ್ಗೆ ಘರ್ಷಣೆಗಳು ನಡೆದಿವೆ. ಹಿಂದೆ ಒಂದು ಸಾರಿ ಇದೇ ಹಳ್ಳಿಯಲ್ಲಿ ಒಂದು ಕೊಲೆಯಾಗಿದೆ. ಆ ಪೋಲೀಸ್ ಠಾಣಾ ವ್ಯಾಪ್ತಿಯಲ್ಲೂ ಕೂಡ ಹಿಂದೆ ಮೂರು ಜನ ಪೋಲೀಸರನ್ನು, ಒಬ್ಬ ಅಮಾಯಕನನ್ನು ಸಾಯಿಸಲಾಗಿದೆ. ಇಂಥ ಒಂದು ಪ್ರದೇಶದಲ್ಲಿ ಯಾವ ಮಟ್ಟದಲ್ಲಿ ಅಲ್ಲಿರುವ ಜನತೆಗೆ ರಕ್ಷಣೆ ಸಿಗಬೇಕಾಗಿತ್ತೋ, ಅದು ಅಲ್ಲಿ ಸಿಗಲಿಲ್ಲ. ಆ ಸೂಕ್ಷ್ಮತೆಯನ್ನು ಅರಿಯುವುದು, ಅದಕ್ಕೆ ತಕ್ಕಂತೆ ಪ್ರತಿಕ್ರಿಯೆ ವ್ಯಕ್ತಪಡಿಸಬೇಕಾಗಿರುವುದು ಸರ್ಕಾರದ ಮೂಲ ಕರ್ತವ್ಯ. ಆ ಕರ್ತವ್ಯದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಆ ವಿಫಲತೆಯನ್ನು ಸರ್ಕಾರ ಹೊರಲೇಬೇಕಾಗಿದೆ. ಇಲ್ಲದೇ ಹೋದರೆ ಸರ್ಕಾರ ಎನ್ನುವುದು ಏಕಿರಬೇಕು? ಎಲ್ಲಿ ಏನು ನಡೆಯುತ್ತದೆ, ಎಲ್ಲಿ ಏನಾಗಬಹುದು ಎಂಬುದನ್ನು ಆಲೋಚಿಸದಿದ್ದರೆ, ಆ ಆಲೋಚನೆಯನ್ನು ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಈ ಸರ್ಕಾರ ಎನ್ನುವ ವ್ಯವಸ್ಥೆ ಏಕಿರಬೇಕು? ಜನತೆಗೆ ರಕ್ಷಣೆ ಕೊಡದಿರುವ ಸರ್ಕಾರದ ಅವಶ್ಯಕತೆಯಾದರೂ ಏನಿದೆ? ಇದನ್ನು ಇವತ್ತಿನ ದಿವಸ ನಾವು ಯೋಚಿಸಬೇಕಾಗಿದೆ. ಸಣ್ಣಪುಟ್ಟ ಕಾರಣಗಳಿಗೋಸ್ಕರ ಇವತ್ತು ಎಂಟು ಜನ ಅಮಾಯಕರ ಬಲಿಯಾಗಿದೆ. ಇದು ಸಾಮಾನ್ಯವಾದ ವಿಚಾರವಂತೂ ಖಂಡಿತ ಅಲ್ಲ. ಕ್ಷುಲ್ಲಕ ವಿಚಾರಗಳಿಗಾಗಿ, ಅಲ್ಲಿನ ಪರಿಸ್ಥಿತಿಯನ್ನು ಗಮನಿಸಿ ಯಾವ ರೀತಿಯಾದ ರಕ್ಷಣೆ ಕೊಡಬೇಕು, ಯಾವ ರೀತಿಯಾಗಿ ಸರ್ಕಾರ ಮತ್ತು ಅಧಿಕಾರಿಗಳು ವರ್ತನೆ ಮಾಡಬೇಕು ಅದಕ್ಕೆ ಗಮನ

ಕೊಡಲಿಲ್ಲ. ಆ ರೀತಿಯಾದಂತಹ ಆಲೋಚನೆ ಅಲ್ಲಿ ನಡೆಯಲಿಲ್ಲ. ಅದಕ್ಕೆ ತದ್ವಿರುದ್ಧವಾದ ರೀತಿಯಾದಂತಹ ರಾಜಕೀಯ ಹಿತಾಸಕ್ತಿಗೆ ಬೆಲೆಕೊಟ್ಟು, ರಾಜಕೀಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಪ್ರಯತ್ನದಿಂದ ಇವತ್ತು ಅಮಾಯಕರ ಬಲಿಯಾಗಿದೆ. ಆ ಕ್ಷೇತ್ರದ ಶಾಸಕರಾಗಿರುವವರೂ ಹೇಳಿದ್ದಾರೆ. ಅಲ್ಲಿನ ಸಬ್-ಇನ್ಸ್‌ಪೆಕ್ಟರ್‌ನನ್ನು ಆರು ಬಾರಿ ಅಮಾನತ್ತಿನಲ್ಲಿಡಲಾಗಿದೆ. ಅವನು ಕೈಲಾಗದ ಅಧಿಕಾರಿ. ಅವನನ್ನು ಆ ಸ್ಥಳಕ್ಕೆ ಪೋಸ್ಟ್ ಮಾಡಬೇಕೆಂದರೆ, ಅದಕ್ಕೆ ಮಂತ್ರಿಗಳು ಇಂಥ ಅಧಿಕಾರಿಯನ್ನೇ ಇಲ್ಲಿ ವರ್ಗ ಮಾಡಬೇಕೆನ್ನುವುದಾದರೆ, ಇದಕ್ಕೇನು ಹೇಳಬೇಕು? ಮಂತ್ರಿಗಳಿಗೇನು ಬೇರೆ ಕೆಲಸವಿಲ್ಲವೆ? ಕೈಲಾಗದ, ಅದಕ್ಷ ಅಧಿಕಾರಿಯನ್ನು ಸೆನ್ಸಿಟೀವ್ ಆಗಿರುವ ಕಡೆಗೆ ವರ್ಗಾವಣೆ ಮಾಡಿಸುವುದೇ ಅವರ ಕ್ಷುಲ್ಲಕವಾದ ಸ್ಥಳೀಯ ಕಾರಣಗಳಿಗೋಸ್ಕರ ಇವತ್ತು ಅಮಾಯಕರ ಬಲಿಯಾಗಿದೆ. ಈ ಪರಿಸ್ಥಿತಿಯನ್ನು ಯಾರು ನಿರ್ಮಾಣ ಮಾಡಿದ್ದಾರೆ, ಅವರು ಇವತ್ತಿನ ದಿವಸ ಸಂಪೂರ್ಣವಾದ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಆ ಜವಾಬ್ದಾರಿಯನ್ನು ಹೊರುವುದಕ್ಕೋಸ್ಕರ ಈ ಸ್ಥಾನದಲ್ಲಿರುವುದು. ಆ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕಾರಣವೇನು ಎಂಬುದನ್ನು ನಾನು ಹೇಳಲೇಬೇಕಾಗಿದೆ. ಆ ಪ್ರದೇಶದಲ್ಲಿ ಇವತ್ತು ಆಡಳಿತ ಪಕ್ಷ ಅತ್ಯಂತ ಕೆಳಮಟ್ಟದಲ್ಲಿದೆ. ಕಾಂಗ್ರೆಸ್ ಪಕ್ಷ ಆ ಪ್ರದೇಶದಲ್ಲಿ ಇವತ್ತು ಬೆಂಬಲ ಕಳೆದುಕೊಂಡಿದೆ. ಬೆಂಬಲ ಕಳೆದುಕೊಂಡಿರುವುದರಿಂದ, ಯಾರ ಮೂಲಕ ಜನತೆಗೆ ಒಳ್ಳೆಯದನ್ನು ಮಾಡಿ, ಜನರ ಕಷ್ಟಸುಖಗಳಲ್ಲಿ ಭಾಗಿಯಾಗಿ, ಅವರ ಮನಸ್ಸನ್ನು ಒಲಿಸಿಕೊಂಡು, ಅವರ ಮೂಲಕ ಯಾರೇ ಆಗಲಿ ಬಲ ಪಡೆಯಬೇಕು. ಇವತ್ತಿನ ದಿವಸ ಅದನ್ನು ಬಿಟ್ಟು, ಅಧಿಕಾರಿಗಳ ಮೂಲಕ ಅಮಾಯಕರನ್ನು ಹೆದರಿಸುವುದು, ಬೆದರಿಸುವುದರ ಮೂಲಕ, ತನ್ನ ಬಲವನ್ನು ವೃದ್ಧಿ ಮಾಡುವ ಪ್ರಯತ್ನ ಅಲ್ಲಿ ನಡೆದಿದೆ. ಅದೇ ಈ ಘಟನೆಗೆ ಮೂಲ ಕಾರಣ. ಆ ಸಬ್-ಇನ್ಸ್‌ಪೆಕ್ಟರ್ ಆಗಿರುವವನು ಅದೇ ಸುತ್ತಮುತ್ತಲಿನ ಸ್ಥಳದವನು ಮತ್ತು ಮದುವೆಯಾಗಿರುವುದು ಆ ಊರಿನಲ್ಲೆ. ಅವನನ್ನು ಆರು ಬಾರಿ ಅಮಾನತ್ತಿನಲ್ಲಿಡಲಾಗಿದೆ. ಶುದ್ಧ ಕೈಲಾಗದ ವ್ಯಕ್ತಿ ಎಂಬುದು ಅಲ್ಲಿ ಸಾಬೀತಾಗಿದೆ. ಅಂಥವನನ್ನು ಅಲ್ಲಿ ಉಪಯೋಗಿಸಿಕೊಂಡು ಅಧಿಕಾರದ ಮೂಲಕ ಇವರ ಆಡಳಿತ ಬಲವನ್ನು ವೃದ್ಧಿಪಡಿಸಿಕೊಳ್ಳಬೇಕು. ಅಧಿಕಾರಿಗಳ ಮೂಲಕ ರಾಜಕೀಯ ಅಧಿಕಾರವನ್ನು, ರಾಜಕೀಯ ಪರಿಸ್ಥಿತಿಯನ್ನು ಸುಧಾರಣೆ ಮಾಡಿಕೊಳ್ಳಬೇಕೆನ್ನುವ ಕಾರಣವೇ ಇದಕ್ಕೆ ಮೂಲ ಕೇವಲ ಅಲ್ಲಿರುವ ಒಬ್ಬ ಅಧಿಕಾರಿ ಮಾತ್ರವಲ್ಲ, ಅವರನ್ನು ಕೈಗೊಂಬೆಯಾಗಿ ಬಳಸಿಕೊಳ್ಳುವುದು ಕೋಲಾರ ಜಿಲ್ಲೆಯಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಪೋಲೀಸರನ್ನು ಕೈಗೊಂಬೆಗಳನ್ನಾಗಿ ಬಳಸಿಕೊಳ್ಳುವ ಪ್ರಯತ್ನ ನಡೆದಿದೆ. ಒಂದು ಕಡೆ ಕೊಲೆ ನಡೆದಿಲ್ಲ, ಮುಖ್ಯಮಂತ್ರಿಗಳ ತಾಲ್ಲೂಕಿನಲ್ಲಿ ರಾಜಕೀಯ ಕಾರಣಗಳಿಂದ ಕೊಲೆ ನಡೆದಿದೆ. ಇವತ್ತಿನವರೆಗೂ ಒಬ್ಬರನ್ನೂ ಕೂಡ ಅಲ್ಲಿ ದಸ್ತಗಿರಿ ಮಾಡಿಲ್ಲ. ಸ್ಥಳೀಯ ಅಧಿಕಾರಿಗಳಿಗೂ, ಅದಕ್ಕೆ

ಇಂಥಿಂಥವರೇ ಈ ಘಟನೆಗೆ ಕಾರಣವೆಂದು ಗೊತ್ತಿದೆ. ಮದ್ದೂರು ತಾಲ್ಲೂಕಿನಲ್ಲಿ ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಗದ್ದೆಯ ಹತ್ತಿರ ಕೊಲೆಯಾಗಿದೆ. ಇಲ್ಲಿಯವರೆಗೂ ಕೂಡ ಒಬ್ಬರನ್ನೂ ಮುಟ್ಟುವ ಪ್ರಯತ್ನ ಸರ್ಕಾರದಿಂದ ಆಗಲಿಲ್ಲ. ಅಷ್ಟೇ ಅಲ್ಲ, ಚನ್ನಗರಿ ತಾಲೂಕಿನಲ್ಲಿ ಇದೇ ತರಹದ ಭೀಕರ ಕೊಲೆ ನಡೆದಿದೆ, ತರೀಕರೆ ತಾಲೂಕಿನಲ್ಲೂ ಇದೇ ತರಹದ ಪರಿಸ್ಥಿತಿ ಉಂಟಾಗಿದೆ, ಇಲ್ಲಿಯವರೆಗೂ ಏನೂ ಆಗಲಿಲ್ಲ. ಇವೆಲ್ಲ ರಾಜಕೀಯ ಕಾರಣಗಳಿಂದ ಆಗುತ್ತಿವೆ. ಅಧಿಕಾರಿಗಳನ್ನು, ಪೋಲೀಸರನ್ನು ಏಕಪಕ್ಷೀಯವಾಗಿ, ಅದೂ ಕಾಂಗ್ರೆಸ್ ಪಕ್ಷದ ರಕ್ಷಣೆಗಾಗಿಟ್ಟಿರುವ ಪೋಲೀಸರನ್ನಾಗಿ ಪರಿವರ್ತನೆಯಾಗಿರುವ ಕಾರಣ, ಇವತ್ತಿನ ದಿವಸ ಇದು ನಡೆಯುತ್ತಿದೆ. ನಾನು ಸರ್ಕಾರಕ್ಕೆ ಕೇಳುವುದಿಷ್ಟೆ, ಇದು ನಿಲ್ಲದಿದ್ದರೆ, ಪರಿಸ್ಥಿತಿ ಇದೇ ರೀತಿ ಮುಂದುವರಿದರೆ, ಕರ್ನಾಟಕ ರಾಜ್ಯವು ಬಿಹಾರ ರಾಜ್ಯಕ್ಕಿಂತ ಹೊಲಸಾಗುತ್ತಿದೆ. ಆಡಳಿತ ನಡೆಸುತ್ತಿರುವವರು ಇದನ್ನು ಅರ್ಥ ಮಾಡಿಕೊಳ್ಳಬೇಕು. ಬಿಹಾರ ರಾಜ್ಯದ ಪರಿಸ್ಥಿತಿಗಿಂತ ಮುಂದೆ ಹೋಗುವ ಪರಿಸ್ಥಿತಿ ಉದ್ಭವವಾಗಬಹುದು. ಇದಕ್ಕೆ ಕಾರಣವೇನು? ಆತ್ಮ ರಕ್ಷಣೆ ಎನ್ನುವುದು, ನಾನು ಬದುಕಬೇಕು ಎನ್ನುವುದು ಬಹಳ ಮುಖ್ಯ. ಆ ಪ್ರಶ್ನೆ ಬಂದಾಗ, ಯಾರೂ ಕೂಡ ಹಿಂದೆ ಬೀಳುವುದಿಲ್ಲ. ಆತ್ಮ ರಕ್ಷಣೆಗೋಸ್ಕರ ಯಾವುದೇ ಕೆಲಸವನ್ನು ಕೂಡ ಮಾಡುವುದಕ್ಕೆ ಮನುಷ್ಯ ಮುಂದಾಗುತ್ತಾನೆ. ಯಾರನ್ನೇ ಆಗಲಿ ಹತ್ಯೆ ಮಾಡುವುದಕ್ಕೆ ಮುಂದಾಗುವುದು ಇದು ಮನುಷ್ಯನ ಸ್ವಭಾವ, ಅದನ್ನು ಕೆರಳಿಸುವುದಕ್ಕೆ, ಅದಕ್ಕೆ ಅಡ್ಡಿಪಡಿಸುವುದಕ್ಕೆ ಘಟನೆಗಳು ನಡೆದರೆ, ಬಹಳ ದಿವಸ ಯಾರೂ ಕೂಡ ಸುಮ್ಮನೆ ಕೂರುವುದಕ್ಕೆ ಸಾಧ್ಯವಿಲ್ಲ. ನಾನು ಈಗಾಗಲೇ ಮುಖ್ಯಮಂತ್ರಿಗಳು ಕರೆದಿದ್ದ ಸಭೆಯಲ್ಲೂ ಕೂಡ ಹೇಳಿದ್ದೇನೆ. ಇವತ್ತು ಪೋಲೀಸರು ಏಕಪಕ್ಷೀಯವಾಗಿ ಎಲ್ಲ ಕಡೆ ವರ್ತಿಸುತ್ತಿದ್ದಾರೆ. ಅನೇಕ ಕಡೆ ಉದಾಹರಣೆಗಳ ಮೂಲಕ ನಾನು ಇವತ್ತಿನ ದಿವಸ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹಳ ವಿವರಗಳು ನನ್ನಲ್ಲಿವೆ. ಒಂದೇ ತರಹದ ಕೇಸ್, ಒಬ್ಬನ ತಲೆಗೆ ಏಟು ಬಿದ್ದಿದೆ, ಅದಕ್ಕೆ ಅವನು ನ್ಯೂರೋ ಸೆಂಟರ್‌ಗೆ ಬಂದು ಸೇರುತ್ತಾನೆ. ಅವನನ್ನು ಔಟ್‌ಪೇಷಂಟ್ ಆಗಿ ಹೊರಗಡೆ ಕಳುಹಿಸುತ್ತಾರೆ. ಅವನನ್ನು ಅಟೆಮ್ಪ್ಟ್ ಟುಂ ಮರ್ಡರ್ ಐಪಿಸಿ ಸೆಕ್ಷನ್ 307ರಡಿಯಲ್ಲಿ ಕೇಸ್ ಹಾಕಿ ಕಳುಹಿಸುತ್ತಾರೆ. ಒಂದೇ ಪೋಲೀಸ್ ಠಾಣೆ, ಒಂದೇ ಮೊಕದ್ದಮೆ. ಏಕೆ? ಒಬ್ಬ ಕಾಂಗ್ರೆಸ್‌ಗೆ ವಿರುದ್ಧವಾಗಿರುವವನು, ಇನ್ನೊಬ್ಬ ಪರವಾಗಿರುವವನು. ಅವೆಲ್ಲವನ್ನು ಸ್ಥಳೀಯ ಅಧಿಕಾರಿಗಳು ಗಮನಿಸಬೇಕಾಗುತ್ತದೆ. ಯಾರು ಹೇಳುತ್ತಾರೆ, ನಾನು ಹೇಳುತ್ತೇನೆಯೇ ಎಂಬುದನ್ನಲ್ಲ ಅವರು ಗಮನಿಸಬೇಕಾಗಿರುವುದು ಅಥವಾ ಆಡಳಿತ ಪಕ್ಷದವರು ಹೇಳುತ್ತಾರೆಯೇ ಅವರು ಶಿಫಾರಸು ಮಾಡುತ್ತಾರೆಯೋ ಎಂಬುದನ್ನಲ್ಲ ಅವರು ಗಮನಿಸಬೇಕಾಗಿರುವುದು. ಅಲ್ಲಿ ನಡೆದಿರುವ ಕೃತ್ಯವೇನು? ಆ ಕೃತ್ಯಕ್ಕೆ ಮಾತ್ರ ಅವರು ಬೆಲೆ ಕೊಡಬೇಕಾಗುತ್ತದೆ. ಅದಕ್ಕೆ ತಕ್ಕಂತೆ ಕಾನೂನಿದೆ, ಅದರ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಅದು

ಸಂಪೂರ್ಣವಾಗಿ ಮುರಿದುಬಿದ್ದಿದೆ. ಕಾನೂನು ಎನ್ನುವುದು ಕೇವಲ ಒಂದೇ ಪಕ್ಷಕ್ಕೆ ಅವರಿಗೆ ಸೀಮಿತವಾಗಿದೆ. ಅವರು ಹೇಳಿದ್ದೇ ಕಾನೂನು. ಕಾನೂನಿನ ಪುಸ್ತಕದಲ್ಲಿರುವುದು ಇವತ್ತು ಕಾನೂನಲ್ಲ. ಕಾಂಗ್ರೆಸ್‌ನವರು ಏನು ಹೇಳುತ್ತಾರೆ, ಅದೇ ಕಾನೂನು. ಅದರ ಪ್ರತಿಫಲವೇ ಈ ರೀತಿಯ ಘಟನೆಗಳು ನಡೆಯುವುದಕ್ಕೆ ಕಾರಣ. ಒಂದು ಕಡೆಯಲ್ಲ, ರಾಜ್ಯದ ಅನೇಕ ಕಡೆ ಈ ರೀತಿ ನಡೆಯುತ್ತಿದೆ. ಆದ್ದರಿಂದ, ಕಡೇಪಕ್ಷ ಕೋಲಾರ ಜಿಲ್ಲೆಯಲ್ಲಾದರೂ ನಿಮ್ಮ ಸರ್ಕಾರ ಬಂದ ನಂತರ, ಎಷ್ಟೆಷ್ಟು ಕಡೆ non-comliance report ಕೊಟ್ಟಿದ್ದೀರಿ ಎಂಬ ಅಂಕಿ-ಅಂಶ ಕೊಡಬೇಕಾಗುತ್ತದೆ. ಎಷ್ಟು ಕೇಸ್ ರಿಜಿಸ್ಟರ್ ಆಗಿದೆ? ರಿಜಿಸ್ಟರ್ ಆಗಿರುವ ಕೇಸ್‌ಗಳಲ್ಲಿ ಎನ್‌ಸಿಆರ್ ಕೊಡುವುದಕ್ಕೆ ಕಾರಣವೇನು? ಇವರ್‍ಯಾರಾದರೂ ಹೇಳಿದರೆ ಅದಕ್ಕೆ ಎನ್.ಸಿ.ಆರ್. ಯಾರು ಗತಿಯಿಲ್ಲದಿರತಕ್ಕಂಥ ದಿಕ್ಕಿಲ್ಲದವನು ಸಿಕ್ಕಿಬಿದ್ದರೆ ತಕ್ಷಣ ಅವನ ಮೇಲೆ ಇಲ್ಲದೇ ಇರತಕ್ಕಂಥ ಎಲ್ಲಾ ಕಲಂಗಳನ್ನು ಹಾಕಿ ಅವನನ್ನು ಜ್ಯುಡಿಷಿಯಲ್ ಕಸ್ಟಡಿಗೆ ಕಳುಹಿಸತಕ್ಕಂಥ ಪ್ರಯತ್ನ ಇವತ್ತು ನಡೆದಿದೆ. ಪುನಃ ನಾನು ಚಿಂತಾಮಣಿಯ ಘಟನೆ ಬಗ್ಗೆ ಹೇಳುವುದಾದರೆ ಇದು ಏಕಾಏಕಿ ನಡೆದಿದ್ದಲ್ಲ. ಹಿಂದಿನ ದಿವಸವೇ ಒಂದು ಘಟನೆ ನಡೆದಿದೆ, ಘಟನೆಯಲ್ಲಿ ಮೃತರಾಗಿರತಕ್ಕಂಥ ಶ್ರೀರಾಮಪ್ಪ ಎಂಬುವವನು ನನಗೆ ರಕ್ಷಣೆ ಕೊಡಿ ಎಂದು ಪೋಲೀಸ್‌ರಿಗೆ ದೂರು ಕೊಟ್ಟಿದ್ದಾನೆ. ಅವನಿಗೂ ರಕ್ಷಣೆ ಸಿಗಲಿಲ್ಲ. ಆ ದಿನ ಮಧ್ಯಾಹ್ನದವರೆವಿಗೂ ಸಿಆರ್‌ಪಿ ವ್ಯಾನ್ ಅಲ್ಲಿ ನಿಂತಿದ್ದು ನಂತರ ಹೊರಟು ಹೋಗುತ್ತದೆ ಇದಕ್ಕೇನು ಕಾರಣ? ಯಾರ ಶಿಫಾರಸ್ಸಿನ ಮೇಲೆ ಈ ಕೆಲಸ ನಡೆಯುತ್ತಿದೆ? ರಕ್ಷಣೆ ಬೇಕು ಎನ್ನುವ ಕಡೆ ರಕ್ಷಣೆ ಸಿಗಲಿಲ್ಲ. ಅಲ್ಲಿಗೆ ಇಬ್ಬರು ಪೋಲಿಸ್‌ರನ್ನು ಬಿಟ್ಟಿರುತ್ತಾರೆ ಅವರ ಕೈಯಲ್ಲಿ ಲಾಠಿ ಇಲ್ಲ ಬಂದೂಕೂ ಕೂಡ ಇಲ್ಲ, ಬರೀ ಕೈಯಲ್ಲಿ ಪೊಲೀಸ್‌ನವರು ನಿಂತಿರುತ್ತಾರೆ, ಘಟನೆ ಪ್ರಾರಂಭವಾದ ಕ್ಷಣವೇ ಪೋಲಿಸ್‌ನವರು ತಮ್ಮ ಪ್ರಾಣ ಭಯದಿಂದ ಅಲ್ಲಿಂದ ಪಲಾಯನ ಮಾಡುತ್ತಾರೆ. ಏಕೆಂದರೆ ಪೋಲಿಸ್‌ನವರು ಕೂಡ ತಮ್ಮ ಪ್ರಾಣ ರಕ್ಷಣೆ ಮಾಡಿಕೊಳ್ಳಬೇಕಾಗುತ್ತದೆ. ಅಲ್ಲಿರತಕ್ಕಂಥವರ ಪರಿಸ್ಥಿತಿ ಏನಾಗುತ್ತದೆಂದರೆ, ಎಲ್ಲರಿಗೂ ಕೂಡ ಮುಕ್ತವಾದಂಥ ಅವಕಾಶ ಸಿಗುತ್ತದೆ. ಯಾರು ಏನು ಬೇಕಾದರೂ ಮಾಡಿಕೊಳ್ಳಬಹುದು. ಇಂಥ ಪರಿಸ್ಥಿತಿ ಉಂಟಾಗುವುದಾದರೆ ಸರ್ಕಾರ ಏಕೆ ಇರಬೇಕು? ಯಾರು ಏನು ಬೇಕಾದರೂ ಮಾಡಿಕೊಳ್ಳಬಹುದು ಎಂದಾದರೆ ಸರ್ಕಾರ ಎಲ್ಲಿದೆ? ಸರ್ಕಾರ ಅಲ್ಲಿ ಇರಲಿಲ್ಲ, ಸರ್ಕಾರ ಅಲ್ಲಿದ್ದರೆ ಅಮಾಯಕನಿಗೆ ರಕ್ಷಣೆ ಸಿಗುತ್ತಿತ್ತು. ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಯಾರು ಇರಲಿಲ್ಲ ಇವರೆಲ್ಲರೂ ಎಲ್ಲಿಗೆ ಹೋಗಿದ್ದರು? ಯಾವುದೋ ಒಂದು ಗ್ರಾಮ ಪಂಚಾಯಿತಿ ಚುನಾವಣೆ ಸಂದರ್ಭದಲ್ಲಿ ನಡೆದಂಥ ಸಣ್ಣ ಘಟನೆಯ ಬಗ್ಗೆ ನೋಡುವುದಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಅಲ್ಲಿಗೆ ಹೋಗುತ್ತಾನೆ. ಒಬ್ಬ ದಲಿತ ನನಗೆ ರಕ್ಷಣೆ ಕೂಡಿ ಎಂದು ಬರವಣಿಗೆಯ ಮೂಲಕ ಆ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಬರೆದು ಕೊಟ್ಟರೆ ಅವನಿಗೆ ರಕ್ಷಣೆ ಕೊಡುವುದು ಬಿಟ್ಟು ಒಬ್ಬ ಕಾಂಗ್ರೆಸ್ ಮುಖಂಡ ಹೇಳಿದ

ತಕ್ಷಣವೇ ಅದೇ ತಾಲ್ಲೂಕಿನ ಮಡಬಳ್ಳಿ ಎನ್ನುವ ಊರಿಗೆ ಹೋಗುತ್ತಾನೆ. ಅಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ನಿಮ್ಮ ಪಕ್ಷದವರಿಗೆ ರಕ್ಷಣೆ ಕೊಡುವುದಕ್ಕೆ ಮುಂದಾಗುತ್ತಾನೆ. ಆದರೆ ಇಲ್ಲಿ ಆ ಊರಿನ ಜನರಿಗೆ ರಕ್ಷಣೆ ಕೊಡುವುದಕ್ಕೆ ಮುಂದಾಗಲಿಲ್ಲ. ಇದು ಇವತ್ತು ನಡೆಯತಕ್ಕಂಥ ಆಡಳಿತದ ವ್ಯವಸ್ಥೆ. ಇವತ್ತು ಕೆಳಹಂತದ ಪೋಲಿಸ್‌ನವರು ಕಾಂಗ್ರೆಸ್ ಪಕ್ಷದ ಬಾಗಿಲು ಕಾಯುವಂತಹ ಪರಿಸ್ಥಿತಿಗೆ ಬಂದಿದ್ದಾರೆ. ಮೇಲ್ಮಟ್ಟದಲ್ಲಿರತಕ್ಕಂಥ ಅಧಿಕಾರಿಗಳ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಇವರ್‍ಯಾರು ಇದನ್ನು ಗಮನಿಸುವುದಿಲ್ಲ. ಅವರು ಕೇವಲ ಅಲ್ಲಿ ನಡೆದಿರತಕ್ಕಂಥ ಕೃತ್ಯವವನ್ನು ಗಮನಿಸುತ್ತಾರೆಯೇ ವಿನಾ ಯಾವ ಪಕ್ಷದವರು ಎಂದು ಇವರ್‍ಯಾರು ಗಮನಿಸುವುದಿಲ್ಲ. ಅಪಾರವಾದ ಗೌರವಕ್ಕೆ ಒಳಪಡುವ ಅನೇಕ ಅಧಿಕಾರಿಗಳು ಸಹ ಇದ್ದಾರೆ. ನಮ್ಮ ಜಿಲ್ಲೆಯಲ್ಲೂ ಕೂಡ ಜಿಲ್ಲಾ ರಕ್ಷಣೆ ಅಧಿಕಾರಿಯಾಗಿರತಕ್ಕಂಥವನು ಸಹ ತನ್ನ ಕರ್ತವ್ಯವನ್ನು ಶಕ್ತಿ ಮೀರಿ ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡತಕ್ಕಂತಹ ಕೆಲಸವನ್ನು ಮಾಡಿದ್ದಾರೆ. ಇಂಥ ವ್ಯಕ್ತಿಯನ್ನು ನೀವು ಇವತ್ತು ವರ್ಗ ಮಾಡಿದ್ದೀರಿ. ವರ್ಗ ಮಾಡಿದಾಕ್ಷಣ ಆ ಅಧಿಕಾರಿ ಬೇರೆ ಕಡೆಗೆ ಹೋಗುತ್ತಾನೆ ಅವನಿಗೆ ಯಾರ ಭಯ ಇರುವುದಿಲ್ಲ. ನಿಷ್ಠೆಯಿಂದ ಕೆಲಸ ಮಾಡತಕ್ಕಂಥ ಅಧಿಕಾರಿಗಳನ್ನು ವರ್ಗ ಮಾಡುತ್ತಾ ಹೋದರೆ ಯಾವ ಅಧಿಕಾರಿಗೆ ತಾನೇ ಇವತ್ತು ಸರಿಯಾದ ಕೆಲಸ ಮಾಡಬೇಕು ಎನ್ನುವ ಮನಸ್ಸು ಬರುತ್ತದೆ? ಯಾವ ಧೈರ್ಯದಿಂದ ಅವರು ಕೆಲಸ ಮಾಡುತ್ತಾರೆ? ನಾನು ನಿಷ್ಠೆಯಿಂದ ಕೆಲಸ ಮಾಡಿದರೆ ಅವರು ನನಗೆ ವರ್ಗ ಮಾಡುತ್ತಾರೆ, ಆದರೆ ಅವರು ಹೇಳಿದ ಹಾಗೆ ಕೇಳಿದರೆ ನಾನು ಇಲ್ಲಿಯೇ ಗೂಟ ಹೊಡೆದುಕೊಂಡು ಇಲ್ಲಿಯೆಇರಬಹುದಲ್ಲ ಎಂದು ಯೋಚಿಸುತ್ತಾನೆ. ಈ ರೀತಿಯ ಅನೀತಿಯಾದಂಥ ಆಲೋಚನೆ ಪ್ರತಿ ಅಧಿಕಾರಿಗಳಲ್ಲಿ ಬರಬಹುದು. ಜಿಲ್ಲಾ ಪೋಲಿಸ್ ಅಧಿಕಾರಿಯಾಗಿರತಕ್ಕಂಥವರು ಅವರ ತಾಯಿಯ ಆಸ್ತಿ ವಿತರಣೆಗೋಸ್ಕರ ಅಂದು ರಜೆಯಲ್ಲಿದ್ದರು. ಸರ್ಕಾರದ ಒಪ್ಪಿಗೆಯನ್ನು ಪಡೆದು ಅವರು ಹೊರಗಡೆ ಹೋಗಿರುತ್ತಾರೆ. ಅಂಥ ಅಧಿಕಾರಿಯನ್ನು ಕೂಡ ವರ್ಗ ಮಾಡಿದ್ದಾರೆ. ನಾನು ಕೆಲವು ಪತ್ರಿಕೆಗಳಲ್ಲಿ ನೋಡಿದಾಗ ಜಿಲ್ಲಾಧಿಕಾರಿಯನ್ನು ಕೂಡ ವರ್ಗ ಮಾಡುವ ಪ್ರಯತ್ನವಿದೆ ಎನ್ನುವುದು ತಿಳಿದು ಬಂತು. ಜಿಲ್ಲಾಧಿಕಾರಿಗಳು, ಪೋಲೀಸ್ ರಕ್ಷಣಾಧಿಕಾರಿಗಳು ಅವರು ತಮ್ಮ ಶಕ್ತಿಮೀರಿ ಜಿಲ್ಲೆಯಲ್ಲಿ ಸುಖ, ಶಾಂತಿ, ಕಾಪಾಡತಕ್ಕಂಥ ಕೆಲಸವನ್ನು ಮಾಡಿದ್ದರು. ಇಂಥ ಅಧಿಕಾರಿಗಳಿಗೆ ನೀವು ಕೊಡತಕ್ಕಂಥ ಬಳುವಳಿ ಏನು ಎಂದರೆ ವರ್ಗಾವಣೆ ಈ ರೀತಿಯಾದರೆ ಇನ್ನುಮುಂದೆ ಯಾವ ಅಧಿಕಾರಿಯು ನಿಷ್ಠೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಏಕೆಂದರೆ ಅವರಿಗೆ ರಕ್ಷಣೆ ಇಲ್ಲ. ರಕ್ಷಣೆ ಇಲ್ಲದೆ ಹೋದರೆ ಅಧಿಕಾರಿಗಳಲ್ಲಿ ನನಗೇಕೆ ಬೇಕು ಹೇಗೊ ಕಾಲ ಕಳೆದರಾಯಿತು ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಗೃಹ ಸಚಿವರು ಈ ಸಂದರ್ಭದಲ್ಲಿ ಇಲ್ಲ, ಅವರು ವಿರೋಧ ಪಕ್ಷದ ನಾಯಕರು ಆಗಿರತಕ್ಕಂಥ ಸಂದರ್ಭದಲ್ಲಿ ಇದೇ ಸದನದಲ್ಲಿ

ಒಂದು ಮಾತನ್ನು ಹೇಳಿದ್ದಾರೆ. ಆ ನಡವಳಿಕೆಯ ಭಾಗ ಇನ್ನೂ ಅಚ್ಚು ಆಗದಿರುವ ಕಾರಣ ನಾನು ಓದುವುದಕ್ಕೆ ಹೋಗುವುದಿಲ್ಲ. ಹೊಸಕೋಟೆ ತಾಲ್ಲೂಕಿನಲ್ಲಿ ನಡೆದಂಥ ಘಟನೆಯ ಸಂದರ್ಭದಲ್ಲಿ ಜಿಲ್ಲಾ ರಕ್ಷಣಾಧಿಕಾರಿ ಮತ್ತು ಸಬ್ ಇನ್ಸ್‌ಪೆಕ್ಟರ್‌ರವರು ಒಂದು ಕೋಮಿಗೆ ಒಳಪಟ್ಟಿರುತ್ತಾರೆ. ಅಂದು ಮಾನ್ಯ ಗೃಹ ಸಚಿವರು ಏನುಹೇಳಿದ್ದರು ಅವರು ಉತ್ತರ ಕೊಡಬೇಕಾದಂಥ ಸಂದರ್ಭದಲ್ಲಿ ಹೇಳಬೇಕಾಗುತ್ತದೆ; ಅವತ್ತು ಅವರು ಏನು ಹೇಳಿದರು ಎಂದರೆ ''ಒಂದೇ ಜಾತಿಯ ಕೋಮಿಗೆ ಸೇರಿದರಾಗಿರುವುದರಿಂದ ಇವತ್ತು ಹೊಸಕೋಟೆಯಲ್ಲಿ ಇಂಥ ಘಟನೆ ನಡೆದಿದೆ'' ಎಂದು ಹೇಳಿದರು. ಇವತ್ತು ಏನಾಗಿದೆ? ಇಲ್ಲಿ ಐ.ಜಿ.ಪಿ., ಡಿ ವೈ ಎಸ್ ಪಿ, ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, above all, on the top of it, Hon'ble Home Minister, they are all belong to the same caste. ಎಲ್ಲರೂ ಕೂಡ ಒಂದೇ ಕೋಮಿಗೆ ಸೇರಿರತಕ್ಕಂಥವರು. ನೀವು ಇಷ್ಟೆಲ್ಲಾ ಸೇರಿಕೊಂಡು ಯಾರ ಹೆಸರನ್ನು ಹೇಳಿಕೊಂಡು ಅಧಿಕಾರಕ್ಕೆ ಬಂದಿದ್ದೀರೋ ಅವರಿಗೆ ರಕ್ಷಣೆ ನೀವು ಕೊಟ್ಟಿದ್ದೀರಾ? ನಿಮಗೆ ರಕ್ಷಣೆ ಸಿಕ್ಕಿದೆಯೇ? ನಿಮ್ಮ ಕಾಲದಲ್ಲಿಯೇ ಇವತ್ತು ಎಂಟು ಜನರ ಅಮಾಯಕರ ಸಜೀವ ದಹನವಾಯಿತು. ಅವರ ಹೆಸರುಗಳನ್ನು ಹೇಳಿಕೊಂಡು ನೀವು ಇಲ್ಲಿ ಅಧಿಕಾರದಲ್ಲಿ ಕುಳಿತಿದ್ದೀರಿ, ಮತ್ತು ಆ ವರ್ಗಕ್ಕೆ ಸಂಬಂಧಪಟ್ಟಿರತಕ್ಕಂಥವರೇ ಗೃಹ ಮಂತ್ರಿಗಳಾಗಿದ್ದಾರೆ. ಮೇಲ್ಮಟ್ಟದಿಂದ ಕೆಳಮಟ್ಟದವರೆವಿಗೂ ಆ ವರ್ಗಕ್ಕೆ ಸಂಬಂಧಿಸಿದ ಅಧಿಕಾರಿಗಳು ಇದ್ದರೂ ಕೂಡ ಆ ಒಂದು ವರ್ಗಕ್ಕೆ ಇವತ್ತು ರಕ್ಷಣೆ ಇಲ್ಲ. ಇವತ್ತು ಪೋಲೀಸ್ ಎನ್ನತಕ್ಕಂಥದ್ದು ಏಕಪಕ್ಷೀಯವಾಗಿ ಎಲ್ಲಾ ಕಡೆ ನಡೆಯುತ್ತಿದೆ. ಅದರಲ್ಲೂ ಸಹ ನಮ್ಮ ಜಿಲ್ಲೆಯ ಕೆಲವು ತಾಲ್ಲೂಕುಗಳಾದ ಶಿಡ್ಲಘಟ್ಟ ಇರಬಹುದು, ಬಂಗಾರ ಪೇಟೆ ಇರಬಹುದು,ಇಂಥ ತಾಲ್ಲೂಕುಗಳಲ್ಲಿ ಏನು ನಡೆಯುತ್ತಿದೆ ಎನ್ನತಕ್ಕಂಥದ್ದರ ಬಗ್ಗೆ ನನ್ನ ಹತ್ತಿರ ಒಂದು ದೊಡ್ಡ ಪಟ್ಟಿಯೇ ಇದೆ. ಇದನ್ನೆಲ್ಲಾ ಓದಬೇಕಾದರೆ ಬಹಳ ಸಮಯ ಬೇಕಾಗುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ಗಹನವಾಗಿ ಇದನ್ನು ಕೇಳುತ್ತಿರುವುದರಿಂದ ನಾನು ನಿಮಗೆ ಇದನ್ನು ಕಳುಹಿಸಿಕೊಡುತ್ತೇನೆ. ಪೋಲಿಸರು ನಾನು ಹೇಳಿದ ಹಾಗೆ ಅಥವಾ ಮತ್ತೊಬ್ಬರು ಹೇಳಿದ ಹಾಗೆ ಕೇಳುವುದಕ್ಕಲ್ಲ ಇರುವುದು. ಅವರ ಕರ್ತವ್ಯ ಬೇರೆಯೇ ಇದೆ. ಇದಕ್ಕೆಂದೇ ಕಾನೂನುಗಳು ಇವೆ, ಕಾನೂನುಗಳು ಹೇಗೆ ಹೇಳುತ್ತವೆ ಹಾಗೆ ಪೋಲಿಸ್‌ನವರು ಕೇಳಬೇಕಾಗುತ್ತದೆ. ನೀವು ಹೇಳಿದ ಹಾಗೆ, ನಾನು ಹೇಳಿದ ಹಾಗೆ, ಮತ್ತೊಬ್ಬರು ಹೇಳಿದ ಹಾಗೆ ಕೇಳುವುದಕ್ಕೆ ಪೋಲೀಸ್‌ನವರು ಇರುವುದಿಲ್ಲ. ಕಾನೂನು ಪುಸ್ತಕ ಏನು ಹೇಳುತ್ತದೆ ಅದರಂತೆ ಪೋಲಿಸ್‌ನವರು ಕೇಳಬೇಕಾಗುತ್ತದೆ, ಪೋಲಿಸ್‌ನವರಿಗೆ ಕಾನೂನು ಎಂಬುದು ಮಾಗದರ್ಶನ ಮಾಡುತ್ತದೆ. ಕಾನೂನನ್ನು ಪಾಲನೆ ಮಾಡುವುದಕೋಸ್ಕರವಾಗಿಯೇ ಪೋಲಿಸ್‌ನವರು ನೇಮಕವಾಗಿರುವುದು. ಇದನ್ನು ಬಿಟ್ಟು, ಯಾರು ಪ್ರವೇಶ ಮಾಡಬಾರದು ಎಂದು ಕೋರ್ಟಿನ

ಆಜ್ಞೆಯಾಗಿದ್ದರೂ ಅದಕ್ಕೆ ಬೆಲೆ ಇಲ್ಲ. ಏಕೆ ಈ ರೀತಿ ಆಯಿತು? ಯಾರೋ ಒಬ್ಬರು ಹೇಳಿದಾಕ್ಷಣ, ಕಾನೂನು ಇಲ್ಲ ಕಟ್ಲೆನೂ ಇಲ್ಲ, ನ್ಯಾಯಾಂಗದ ಆಜ್ಞೆಯು ಇಲ್ಲ, ಇವರು ಹೇಳಿದ್ದೇ ಕಾನೂನು. ಈ ರೀತಿ ಯಾವ ಕಾನೂನಿನ ಪುಸ್ತಕದಲ್ಲಿದೆ? ಈ ರೀತಿ ಮಾಡುತ್ತಾ ಹೋದರೆ ಇನ್ನು ಮುಂದೆ ಕಷ್ಟವಾಗುತ್ತದೆ. ಇದೇ ರೀತಿ ಮುಂದುವರಿದರೆ ಆಡಳಿತ ನಡೆಸುವುದಕ್ಕೆ ಸಾಧ್ಯವೇ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ಅನೇಕ ಘಟನೆಗಳು ಇವತ್ತಿನ ದಿವಸ ನಡೆದಿವೆ. ನಾನು ಆಗಲೇ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ, ಈಗ ಬಂದಿದ್ದಾರೆ, ತಮ್ಮ ತಾಲ್ಲೂಕಿನಲ್ಲಿ ನಡೆದಿರತಕ್ಕಂಥ ಕೊಲೆಯ ಬಗ್ಗೆ ನನ್ನ ಮಾಹಿತಿ ಪ್ರಕಾರ ಇಲ್ಲಿಯವರೆವಿಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ತಮಗೆ ಆಶ್ಚರ್ಯವಾಗಬಹುದು. ಕಿರುಗಾವಲು ಕ್ಷೇತ್ರದ ವ್ಯಾಪ್ತಿಗೆ ಒಳಪಡತಕ್ಕಂಥ ಎಡಗನ ಹಳ್ಳಿಯ ಲಿಂಗಣ್ಣ ಎನ್ನುವವರು ಬೆಳಿಗ್ಗೆ ಎಂಟು ಗಂಟೆಗೆ ಹೊರಗಡೆ ಹೋದಾಗ ಕೊಲೆಯಾಗುತ್ತದೆ. ಇಲ್ಲಿಯವರೆವಿಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಈ ರೀತಿ ನೀವು ಆಡಳಿತ ನಡೆಸಿಕೊಂಡು ಹೋಗುವುದಾದರೆ ಇದಕ್ಕೆ ಸರ್ಕಾರ ಎಂದು ಕರೆಯಬೇಕೆ? ಸರ್ಕಾರ ಎಂದು ಕರೆಯತಕ್ಕಂಥ ಅವಶ್ಯಕತೆಯೇ ಇಲ್ಲ. ಆದುದರಿಂದ, ಇನ್ನು ಮುಂದೆ ಅಧಿಕಾರಿಗಳಿಗೆ ಅದರಲ್ಲೂ ಪ್ರಮುಖವಾಗಿ ಪೋಲಿಸ್‌ನವರಿಗೆ ಕಾನೂನು ಪುಸ್ತಕ ಇದೆ ಅದನ್ನು ತಾವು ನೋಡಬೇಕು ಎಂದು ಅವರಿಗೆ ತಿಳಿಸಬೇಕಾಗಿದೆ. ಅದನ್ನು ಅವರು ಗಮನಿಸಬೇಕೆ ಹೊರತು, ನಾನು ಹೇಳಿದ ಹಾಗೆ ಮತ್ತೊಬ್ಬರು ಹೇಳಿದ ಹಾಗೆ ಪೋಲಿಸ್‌ನವರು ಕೇಳಬಾರದು. ಕಾನೂನು ಪುಸ್ತಕ ಏನು ಹೇಳುತ್ತದೆ ಅದರಂತೆ ಪೋಲಿಸ್‌ನವರು ನಡೆದುಕೊಳ್ಳಬೇಕು ಎಂದು ಒಂದಲ್ಲ ಹತ್ತು ಸಾರಿ ಪೋಲಿಸ್‌ನವರಿಗೆ ನೀವು ತಿಳಿಸಬೇಕಾಗುತ್ತದೆ. ಕಾನೂನನ್ನು ಯಾರು ಉಲ್ಲಂಘನೆ ಮಾಡುತ್ತಾರೋ, ಅಧಿಕಾರಿಯಾಗಿ ಯಾರು ಸರಿಯಾಗಿ ವರ್ತನೆ ಮಾಡುವುದಿಲ್ಲವೋ ಅಂಥವರ ಮೇಲೆ ನೀವು ಕ್ರಮ ತೆಗೆದುಕೊಳ್ಳುವುದಕ್ಕೆ ಮುಂದಾಗಬೇಕು.

4.20 ಪಿ.ಎಂ

ಚಿಂತಾಮಣಿಯಲ್ಲಿ ನಡೆದಂಥ ಘಟನೆ ಬಗ್ಗೆ ತಾವು ಕ್ರಮ ತೆಗೆದುಕೊಂಡಿದ್ದೀರೋ ಅಥವಾ ಇಲ್ಲವೋ ಒಟ್ಟಿನಲ್ಲಿ ನನ್ನ ಗಮನಕ್ಕೆ ಇದುವರೆಗೂ ಬಂದಿಲ್ಲ. ಒಬ್ಬ ಅಧಿಕಾರಿಯ ಮೇಲೆ ತಾವು ಚಕಾರ ಎತ್ತುವುದಕ್ಕೆ ತಯಾರಿಲ್ಲ ಎಂದ ಮೇಲೆ ಇಂಥ ಆಡಳಿತವನ್ನು ನಾವು ಏನೆಂದು ಹೇಳಬೇಕಾಗಿದೆ? ಅವರಿಗೂ ನಿಮಗೂ ಏನು ನಂಟಿದೆ? ಇವತ್ತು ಸರ್ಕಾರಕ್ಕೆ ನಿಜವಾಗಿ ಬೇಕಾಗಿರತಕ್ಕಂಥದು ಜನತೆಯ ಮುಲಾಜು, ಅಧಿಕಾರಿಗಳ ಮುಲಾಜು ಅಲ್ಲ. ಇಷ್ಟಾದರೂ ಅವರ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಸ್ಥಳೀಯ ಅಧಿಕಾರಿಗಳ ಬೇಜವಾಬ್ದಾರಿಯಿಂದ 8 ಜನ ಅಮಾಯಕರ ಕೊಲೆಯಾಗಿದೆ. ಇದಕ್ಕೆ ಹೊಣೆಯಾಗಿರತಕ್ಕಂಥ ಅಧಿಕಾರಿಗಳನ್ನು ಬಿಟ್ಟು

ಜಿಲ್ಲಾ ಮಟ್ಟದ ಅಧಿಕಾರಿಗಳಾದ ಎಸ್.ಪಿ.ಯರನ್ನು ವರ್ಗಾವಣೆ ಮಾಡಿದ್ದೀರಿ. ಈ ಘಟನೆ ನಡೆದಾಗ ಎಸ್.ಪಿ.ಯವರು ಊರಿನಲ್ಲಿರಲಿಲ್ಲ, ಅವರು ರಜೆಯ ಮೇಲೆ ತೆರಳಿದ್ದರು. ಇಂಥವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡತಕ್ಕಂಥ ಕೆಲಸವನ್ನು ಮಾಡಿದ್ದೀರಿ. ಅವರು ಒಂದಲ್ಲಾ ಒಂದು ಕಡೆ ಹೋಗುತ್ತಾರೆ. ಯಾವ ಅಧಿಕಾರಿ ನಿಷ್ಠೆಯಿಂದ ಕೆಲಸ ಮಾಡುತ್ತಾರೋ ಅಂಥವರಿಗೆ ಕಾನೂನಿನ ಪ್ರಕಾರ ರಕ್ಷಣೆ ಕೊಡಬೇಕಾಗುತ್ತದೆ. ಕಾನೂನನ್ನು ಹೊರತುಪಡಿಸಿ ರಕ್ಷಣೆ ಕೊಡಿ ಎಂದು ನಾನು ಹೇಳುವುದಿಲ್ಲ, ಕಾನೂನಿನ ಅಡಿಯಲ್ಲಿ ರಕ್ಷಣೆ ಕೊಡಬೇಕಾಗುತ್ತದೆ. ಈ ರೀತಿಯ ವ್ಯವಸ್ಥೆ ಇಲ್ಲದೇ ಹೋದರೆ ಅಧಿಕಾರಿಗಳು ಕಾನೂನು ಎಲ್ಲಿಗಾದರು ಹೋಗಲಿ ಮೊದಲು ನನ್ನ ರಕ್ಷಣೆ ಆದರೆ ಸಾಕೆಂದು ಇಷ್ಟಕ್ಕೆ ಸೀಮಿತರಾಗುತ್ತಾರೆ. ಇದನ್ನು ತಾವು ಗಮನಿಸಬೇಕೆಂದು ಹೇಳುತ್ತಾ, ಈಗಾಗಲೇ ಈ ವಿಚಾರಣೆ ಬಗ್ಗೆ ಸಿ.ಬಿ.ಐ. ತನಿಖೆಯಾಗಬೇಕೆಂದು ನಾವೆಲ್ಲರೂ ಕೂಡ ತೀರ್ಮಾನ ಮಾಡಿ ತಮಗೆ ಒತ್ತಾಯ ಕೂಡ ಮಾಡಿದ್ದೇವೆ. ಕಾರಣ ಏನೆಂದರೆ, ನಮ್ಮ ರಾಜ್ಯದಲ್ಲಿ ಈ ರೀತಿಯಾದ ಘಟನೆ ಎಲ್ಲೂ ಸಹ ನಡೆದಿರಲಿಲ್ಲ. ಈ ಘಟನೆ ಕೇವಲ ಸರ್ಕಾರಕ್ಕೆ ಮಾತ್ರವಲ್ಲದೇ ನಮ್ಮ ರಾಜ್ಯದ 5 ಕೋಟಿ ಜನತೆಗೆ ಇದೊಂದು ಕಪ್ಪು ಚುಕ್ಕೆಯಾಗಿದೆ. ಇಂಥ ಭೀಕರವಾದಂಥ ಕೃತ್ಯ ನಡೆದಿರತಕ್ಕಂಥ ಸಂದರ್ಭವಿರುವಾಗ ಇದನ್ನು ಈ ದೇಶದ ಅತ್ಯಂತ ಉನ್ನತ ಮಟ್ಟದಲ್ಲಿ ಇರತಕ್ಕಂಥ ಸಿ.ಬಿ.ಐ. ತಂಡಕ್ಕೆ ತನಿಖೆ ಮಾಡಲು ಒಪ್ಪಿಸಬೇಕಾಗಿರುವುದು ಅವಶ್ಯಕತೆ ಇದೆ ಎಂದು ಈ ಸಂದರ್ಭದಲ್ಲಿ ಹೇಳಿ ತಮಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಉಪಾಧ್ಯಕ್ಷರೆ, "prevention of crime in politics" ಬೆಳಿಗ್ಗೆಯಿಂದ ಸತತವಾಗಿ ಅವರ ಭಾಷಣದ ಶೈಲಿಯನ್ನು ಕೇಳಿದ್ದೇವೆ. How to prevent crime in politics: ಬಗ್ಗೆ ಅಮೂಲ್ಯವಾದ ಸಲಹೆಗಳನ್ನು ಕೊಟ್ಟರೆ ನಮ್ಮ ವಿರೋಧ ಪಕ್ಷದಲ್ಲಿನ ಮಿತ್ರರಿಗೆ ಹತ್ತು ನಮಸ್ಕಾರಗಳು. ದಯಮಾಡಿ ಅವರಿಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಶಿವಣ್ಣ: ಸಿ.ಬಿ.ಐ.ಗೆ ಕೊಟ್ಟರೆ ಗೊತ್ತಾಗುತ್ತದೆ.

\+ ಶ್ರೀ ಎ.ನಾರಾಯಣಸ್ವಾಮಿ (ಆನೇಕಲ್): ಮಾನ್ಯ ಉಪಾಧ್ಯಕ್ಷರೆ, ಕಂಬಾಲಪಲ್ಲಿಯಲ್ಲಿ ನಡೆದಂಥ ದಲಿತರ ಕಗ್ಗೊಲೆಯ ಬಗ್ಗೆ ಬಹಳ ಗಂಭೀರವಾಗಿ ಈ ಸದನದಲ್ಲಿ ಚರ್ಚೆಯಾಗುತ್ತಿದೆ. ಮೀಸಲು ಕ್ಷೇತ್ರದಿಂದ ನಾನೊಬ್ಬ ದಲಿತ ಶಾಸಕನಾಗಿ ಗೆದ್ದು ಬಂದು, ಸಮಾಜದ ರಕ್ಷಣೆ ಮತ್ತು ನಮ್ಮ ಜನಾಂಗದ ರಕ್ಷಣೆ ಮಾಡಬಹುದೆಂದು ಬಹಳ ಉತ್ಸಾಹದಿಂದ ಈ ಸಭೆಯಲ್ಲಿ ಭಾಗವಹಿಸಿದ್ದೇನೆ. ಇವತ್ತು ಬೆಳಿಗ್ಗೆ ಸಭೆ

ಪ್ರಾರಂಭವಾದಾಗ ನಮ್ಮ ನಾಯಕರು ಈ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡಿದಾಗ ಈ ಘಟನೆಯ ಬಗ್ಗೆ ನಮಗೂ ಬಹಳಷ್ಟು ನೋವಾಗುತ್ತದೆ. ಕಾರಣ ಏನೆಂದರೆ, ಕಂಬಾಲಪಲ್ಲಿಯಲ್ಲಿ ನಡೆದಿರುವ ಸಜೀವ ದಹನದ ಬಗ್ಗೆ ಇಡೀ ಸಮಾಜವನ್ನು ಜಾಗ್ರತೆಗೊಳಿಸಬೇಕೆಂಬ ಉದ್ದೇಶದಿಂದ ಚರ್ಚೆ ಬಹಳ ಗಂಭೀರವಾಗಿ ಆಗಬೇಕಾಗಿದೆ. ಆ ಗಂಭೀರತೆಯ ಬಗ್ಗೆಎಲ್ಲಾ ಸದಸ್ಯರಿಗೂ ಅರಿವು ಇರಬೇಕಾಗಿತ್ತು. ಈ ಸಮಯದಲ್ಲಿ ನಮ್ಮ ಅಧ್ಯಕ್ಷರು ಈ ನಿಲುವಳಿ ಸೂಚನೆಗೆ ಸಮಯವನ್ನು ನಿಗದಿ ಮಾಡುವುದಕ್ಕೆ ಹೊರಟಿದ್ದರು, ಈ ಸಮಯದಲ್ಲಿ ನನಗೆ ಬಹಳ ದುಃಖವಾಯಿತು. ದುಃಖ ಏಕಾಯಿತೆಂದರೆ, ದಲಿತರ ಕಗ್ಗೊಲೆಯಾಗಿದೆ, ಸಜೀವ ದಹನವಾಗಿದೆ, ಈ ಒಂದು ವಿಚಾರವನ್ನು ಸಭೆಯಲ್ಲಿ ಗಂಭೀರವಾಗಿ ಚರ್ಚೆ ಮಾಡಬೇಕಾದರೆ ಮಾನವೀಯತೆಯ ಮೌಲ್ಯಗಳ ಆಧಾರದ ಮೇಲೆ ಚರ್ಚೆ ಆಗಬೇಕಾಗಿದೆಯೆ ಹೊರತು ಕಾನೂನು ಚೌಕಟ್ಟಿನಲ್ಲಲ್ಲ. ಮಾನವೀಯತೆಯ ಮೌಲ್ಯಗಳು ಈ ಸದನದ ಆರಿಸಿ ಬಂದಂಥ ಎಲ್ಲಾ ಸದಸ್ಯರಿಗೂ ಇರಬೇಕಾಗುತ್ತದೆ. ಮಾನವೀಯತೆಯ ಮೌಲ್ಯಗಳ ಮೇಲೆ ತೀರ್ಮಾನ ತೆಗೆದುಕೊಳ್ಳ ಬೇಕಾಗುತ್ತದೆ. ಈ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ಅಥವಾ ಸಿ.ಒ.ಡಿ, ಸಿ.ಬಿ.ಐ. ತನಿಖೆ ಮಾಡಬೇಕೆ ಎಂದು ತೀರ್ಮಾನ ಮಾಡುವ ಮುಂಚೆ ಆ ಘಟನೆಯ ಹಿನ್ನಲೆಯ ಬಗ್ಗೆ ಬಹುಶಃ ನಾವೆಲ್ಲಾ ಚರ್ಚೆ ಮಾಡಬೇಕಾಗಿವೆ. ಬಹುತೇಕ ಸದಸ್ಯರು ಈ ವಿಷಯದ ಬಗ್ಗೆ ಇವತ್ತು ಮಾತನಾಡತಕ್ಕಂಥ ಸಂದರ್ಭದಲ್ಲಿ ಘಟನೆಯ ಹಿನ್ನೆಲೆಯ ಬಗ್ಗೆ ಮಾತನಾಡುತ್ತಿದ್ದರು. ಆದರೆ, ಘಟನೆ ಏಕೆ ನಡೆದಿದೆ? ಘಟನೆ ನಡೆಯುವುದಕ್ಕಿಂತ ಮುಂಚೆ ಇದರ ಹಿಂದೆ ಏನು ನಡೆದಿದೆ ಎಂಬುದರ ಗಾಂಭೀರ್ಯತೆಯ ಬಗ್ಗೆ ಯಾರು ಚರ್ಚೆ ಮಾಡಲಿಲ್ಲ. ಕಂಬಾಲಪಲ್ಲಿ ಗ್ರಾಮದಲ್ಲಿ ಹಿಂದೆ ಸರಣಿ ಕಗ್ಗೊಲೆ ನಡೆದಿವೆ. ಇದರ ಜೊತೆಗೆ ಘಟನೆಯ ಹಿನ್ನಲೆಯ ಬಗ್ಗೆ ಸರ್ಕಾರಿ ಅಧಿಕಾರಿಗಳಿಗೆ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಇದರ ಅರಿವು ಸಹ ಇತ್ತು. ಆ ಕ್ಷೇತ್ರದ ಶಾಸಕರಾದಂಥ ಮಾನ್ಯ ಚೌಡಾರೆಡ್ಡಿಯವರು ಮಾತನಾಡುತ್ತಾ, 10ನೇ ತಾರೀಖು ಸಣ್ಣ ಜಗಳ ನಡೆದಿದ್ದು, ಅದಕ್ಕೆ ಮೊದಲು ಡಿ.ಎಸ್.ಎಸ್.ರವರಿಂದ ಕಂಬಾಲಪಲ್ಲಿಯಲ್ಲಿ ಕಗ್ಗೊಲೆ ನಡೆಯುವುದಕ್ಕಿಂತ ಮುಂಚೆಯೆ, ಈ ಗ್ರಾಮದಲ್ಲಿ ಜಾತಿ ವೈಷಮ್ಯ ಮತ್ತು ಒಬ್ಬರಿಗೊಬ್ಬರಿಗೆ ಸೌಹಾರ್ದತೆ ಇಲ್ಲದೇ ಇರುವುದರಿಂದ ಈ ಗ್ರಾಮದ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕಾಗಿತ್ತೆಂದು ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಗೊತ್ತಿತ್ತೆಂದು ಈಗಾಗಲೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನನಗೆ ಇಲ್ಲೊಂದು ಅನುಮಾನ ಬರುತ್ತದೆ, ಅದೇನೆಂದರೆ, ಶುಕ್ರವಾರ 4 ಗಂಟೆಗೆ ಶ್ರೀರಾಮಪ್ಪ ಮತ್ತು ಸಂಗಡಿಗರು ಸಬ್‌ಇನ್ಸ್‌ಪೆಕ್ಟರ್‌ರವರಿಗೆ ದೂರನ್ನು ಸಲ್ಲಿಸಿದಂಥ ಸಂದರ್ಭದಲ್ಲಿ ಸಬ್‌ಇನ್ಸ್‌ಪೆಕ್ಟರವರು ಪರಿಪೂರ್ಣವಾದ ಜ್ಞಾನದ ಮುಖಾಂತರ ಇವರಿಗೆ ರೆಸ್ಪಾನ್ಸ್ ಮಾಡಲಿಲ್ಲ. ಈ ಒಂದು ದೂರನ್ನು ನಾವು ಪರಿಗಣಿಸಬೇಕಾಗಿದೆಯೆ? ಈ ಗ್ರಾಮ ಸೂಕ್ಷ್ಮ ಪ್ರದೇಶವೇ ಅಥವಾ

ಅಲ್ಲವೇ ಎಂಬುದನ್ನು ಅಥವಾ ಈ ಗ್ರಾಮದಲ್ಲಿ ಜಾತಿಯ ವೈಷಮ್ಯತೆ ಮತ್ತು ಸೌಹಾರ್ದತೆ ಇದೆಯೋ ಇಲ್ಲವೋ ಎಂಬುದರ ಬಗ್ಗೆ ಕಲ್ಪನೆಯೇ ಇಲ್ಲದೆ ದೂರನ್ನು ಪಡೆದು ಎನ್‌ಸಿ ಯನ್ನು ಕೊಡದೇ ನಿರ್ಲಕ್ಷ್ಯತೆ ಮಾಡಿದ್ದಾರೆ. ನಂತರ ಶನಿವಾರ 11 ಗಂಟೆಗೆ ಅದೇ ಗ್ರಾಮದ ಪರಿಶಿಷ್ಟ ಜಾತಿಯ ಯುವಕರು ನಮಗೆ ಇಲ್ಲಿ ರಕ್ಷಣೆ ಸಿಗುವುದಿಲ್ಲ, ನಮ್ಮ ಮೇಲೆ ಬಲತ್ಕಾರ ನಡೆಯಬಹುದು ಹಾಗು ನಮ್ಮ ಕಗ್ಗೊಲೆ ಆಗಬಹುದೆಂಬ ಅನುಮಾನದ ಮೇಲೆ ಸರ್ಕಲ್ ಇನ್‌ಸ್ಪೆಕ್ಟರ್ ಹತ್ತಿರ ಹೋಗಿ ದೂರನ್ನು ಸಲ್ಲಿಸಿದರು. 11 ಗಂಟೆಗೆ ದೂರನ್ನು ದಾಖಲು ಮಾಡಿಕೊಂಡು ಸರ್ಕಲ್ ಇನ್‌ಸ್ಪೆಕ್ಟರ್ ಆ ಗ್ರಾಮಕ್ಕೆ ಭೇಟಿ ನೀಡಬೇಕಾಗಿತ್ತು. ಅದನ್ನು ಬಿಟ್ಟು ಗ್ರಾಮದ ಬಗೆ ಪರಿಪೂರ್ಣವಾದ ಕಲ್ಪನೆ ಸರ್ಕಲ್ ಇನ್‌ಸ್ಪೆಕ್ಟರ್‌ಗೆ ಬರದೇ ಏಕಾಏಕಿಯಾಗಿ ಗ್ರಾಮದಲ್ಲಿ ನಿಯೋಜಿಸಲಾಗಿದ್ದ ಕೆ.ಎಸ್.ಆರ್.ಪಿ. ವ್ಯಾನ್‌ನನ್ನು ಯಾವ ಕಾರಣಕ್ಕೋಸ್ಕರ ಹಿಂದೆ ಪಡೆದರು? ಇದರ ಗಂಭೀರತೆಯನ್ನು ಸರ್ಕಾರ ನಡೆಸತಕ್ಕಂಥ ಮಾನ್ಯ ಸದಸ್ಯರು ಹಾಗೂ ಸಭಾನಾಯಕರು ಮತ್ತು ಮಾನ್ಯ ಗೃಹ ಮಂತ್ರಿಗಳು ಯೋಚನೆ ಮಾಡಬೇಕಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಒಂದು ತಿಂಗಳು ಅಥವಾ ಎರಡು ತಿಂಗಳಿಗೊಂದು ಸಾರಿ ಸಬ್ ಇನ್‌ಸ್ಪೆಕ್ಟರ್ ಬದಲಾವಣೆ ಮಾಡುತ್ತಿದ್ದೀರಿ ಹಾಗೆಯೆ, ಸರ್ಕಲ್ ಇನ್‌ಸ್ಪೆಕ್ಟರ್ ಮತ್ತು ಡಿವೈಎಸ್‌ಪಿ ಯವರನ್ನು ಒಂದು ವರ್ಷದ ನಂತರ ಬದಲಾವಣೆ ಮಾಡುವಂತಹ ಪ್ರವೃತಿಯನ್ನು ನಾನು ಇತಿಹಾಸದಲ್ಲಿಯೇ ನೋಡಿರಲಿಲ್ಲ. ಇಂಥ ಒಂದು ಪರಿಸ್ಥಿತಿಯಿಂದ ಇವತ್ತಿನ ದಿವಸ ಚಿಂತಾಮಣಿಯಲ್ಲಿ ಯಾವ ಅಧಿಕಾರಿಯು ನಿಷ್ಠೆಯಿಂದ ಕೆಲಸ ಮಾಡುತ್ತಿಲ್ಲ. ವರ್ಗಾವಣೆ ಮಾಡತಕ್ಕಂಥ ಅಧಿಕಾರವನ್ನು ಇವತ್ತಿನದಿವಸ ನೀವು ಅಧಿಕಾರಿಗಳಿಗೆ ಅಥವಾ ರಾಜಕಾರಣಿಗಳಿಗೆ ಅಥವಾ ಆಡಳಿತ ಪಕ್ಷದ ಮಂತ್ರಿಗಳು ವಹಿಸಿಕೊಂಡ್ಡಿದಾರೆಯೆ ಎಂಬ ಅನುಮಾನ ಬಹುತೇಕ ಎಲ್ಲಾ ಸದಸ್ಯರಿಗೆ ಬಂದಿದೆ. ಆದ್ದರಿಂದ ಇದರ ಬಗ್ಗೆ ಸದನದ ಮುಖಾಂತರ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಮಂತ್ರಿಗಳು ಸಮಂಜಸವಾದ ಉತ್ತರವನ್ನು ಕೊಡಬೇಕಾಗುತ್ತದೆ. ಒಂದು ತಿಂಗಳು ಅಥವಾ ಎರಡು ತಿಂಗಳಿಗೊಮ್ಮೆ ಸಬ್ ಇನ್‌ಸ್ಪೆಕ್ಟರ್‌ಗಳನ್ನು ಅಥವಾ ಸರ್ಕಲ್ ಇನ್‌ಸ್ಪೆಕ್ಟರ್, ಡಿವೈಎಸ್‌ಪಿ ಯವರನ್ನು ತಮ್ಮ ಸ್ವೇಚ್ಛಾನುಸಾರ ದೃಷ್ಟಿಯಿಂದ ವರ್ಗಾವಣೆ ಮಾಡುವುದರಿಂದ ಆ ಗ್ರಾಮಕ್ಕೆ ಮತ್ತು ಸಮಾಜಕ್ಕೆ ಹಾಗೂ ಈ ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಡಬಹುದೇ ಎಂಬುದರ ಬಗ್ಗೆ ತಾವು ದೃಢಸಂಕಲ್ಪವನ್ನು ಮಾಡಬೇಕಾಗಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕಂಬಾಲಪಲ್ಲಿಯಲ್ಲಿ ದಲಿತರ ಕಗ್ಗೊಲೆಯ ಜೊತೆಗೆ, ಒಂದು ತಿಂಗಳ ಹಿಂದೆ, ರಾಜಭವನದ ಮುಂದೆ ಡಿಎಸ್‌ಎಸ್ ಕಾರ್ಯಕರ್ತರು ಧರಣಿಯನ್ನು ಮಾಡಿದರು. ಹಾಗೆ ಧರಣಿಯನ್ನು ಮಾಡುವಂತಹ ಸಂದರ್ಭದಲ್ಲಿ ಅವರು ತುಪಾಕಿಗಳನ್ನಾಗಲಿ ಅಥವಾ ಎಕೆ-47 ಆಗಲಿ ಇಟ್ಟುಕೊಂಡು

ಬಂದಿರಲಿಲ್ಲ. ಅವರ ನೋವನ್ನ ಮತ್ತು ಅನಿಸಿಕೆಯನ್ನು ಸಮಾಜದ ಮುಖಾಂತರ ಈ ಧರಣಿಯ ಮುಖಾಂತರ ಪ್ರತಿಬಿಂಬಿಸಬೇಕೆನ್ನುವ ಏಕೈಕ ಕಾರಣದಿಂದ ಅವರು ರಾಜ್ಯಪಾಲರಲ್ಲಿ ಮನವಿಯನ್ನು ಸಲ್ಲಿಸಬೇಕೆನ್ನುವ ದೃಷ್ಟಿಯಿಂದ ಆ ಯುವಕರು ಪ್ರತಿಭಟನಾ ಚಳುವಳಿಗೆ ಬರುತ್ತಿದ್ದರು. ಹಿಂದಿನ ಕಂದಾಯ ಸಚಿವರಾದ ಶ್ರೀ ಸೋಮಶೇಖರ್‌ವರು ಹೇಳುತ್ತಿದ್ದರು. ಡಿಎಸ್‌ಎಸ್ ಕಾರ್ಯಕರ್ತರು ಇದ್ದದ್ದು ಕೇವಲ 60 ಜನ, ಪೋಲೀಸರು ಇದ್ದದದ್ದು 150 ಜನ. ನನಗೆ ಒಂದು ಅನುಮಾನ ಬರುತ್ತದೆ ಪೊಲೀಸರು ಲಾಠಿಯಿಂದ ಹೊಡೆದರೆ ಹಾರ್ಟ್‌ಅಟ್ಯಾಕ್ ಆಗುತ್ತದೆಯೇ? ಯಾವುದೇ ಪೊಲೀಸ್ ಸ್ಟೇಷನ್‌ಗೆ ಒಬ್ಬ ಪ್ರಾಮಾಣಿಕ ಕಾರ್ಯಕರ್ತನು ಹೋದರೆ ಅವನನ್ನು ರಾತ್ರಿ ಲಾಕಪ್‌ನಲ್ಲಿಟ್ಟರೆ ಅವನದು ಲಾಕಪ್‌ಡೆತ್ ಆಗುತ್ತದೆ. ಯಾಕಪ್ಪಾ ಲಾಕಪ್‌ಡೆತ್ ಆಯಿತು ಎಂದು ಕೇಳಿದರೆ, ಅವನು ಲಾಠಿ ಚಾರ್ಜನಲ್ಲಿ ಸತ್ತು ಹೋದನೆಂದು ಮತ್ತು ಹಾರ್ಟ್ ಅಟ್ಯಾಕ್ ಆಯಿತೆಂದು ಪೊಲೀಸರು ಹೇಳುತ್ತಾರೆ. ಲಾಠಿ ಏಟಿನಿಂದ ಹೊಡೆದರೆ ಹಾರ್ಟ್ ಅಟ್ಯಾಕ್ ಆಗುತ್ತದೆಯೇ? ಇದರ ಬಗ್ಗೆ ಎಲ್ಲರೂ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಪೊಲೀಸರು ಲಾಠಿಯನ್ನು ಎತ್ತಿಕೊಂಡರೆ ಹಾರ್ಟ್‌ಅಟ್ಯಾಕ್ ಆಗುತ್ತದೆಯೇ? ಪೊಲೀಸರ ಲಾಠಿಯಲ್ಲಿ ಏನಾದರೂ ಇದೆಯೇ? ಅಥವಾ ಆ ಪೊಲೀಸ್ ಸೆಲ್‌ಗಳಲ್ಲಿ ಹಾರ್ಟ್ ಅಟ್ಯಾಕ್ ಆಗುವಂಥ ಮೆಕ್ಯಾನಿಸಮ್ ಏನಾದರೂ ಇಟ್ಟಿದ್ದಾರೆಯೇ? ದಯವಿಟ್ಟು ಇದರ ಬಗ್ಗೆ ಚಿಂತನೆ ಮಾಡಬೇಕು. ಪ್ರಾಮಾಣಿಕವಾದಂತಹ ದಲಿತರ ಕಗ್ಗೊಲೆಯು ಪೋಲೀಸರ ಲಾಠಿ ಏಟಿನಿಂದ ಆದಾಗ ಮತ್ತು ಡಿಎಸ್‌ಎಸ್ ಕಾರ್ಯಕರ್ತನ ಕೊಲೆಯಾದಾಗ ಗಂಭೀರವಾಗಿ ಈ ಸದನ ಅದನ್ನು ಪರಿಗಣಿಸಬೇಕು. ಇಡೀ ನಾಗರೀಕ ಸಮಾಜ ತಲೆತಗ್ಗಿಸುವಂತಹ ಒಂದು ಪ್ರಸಂಗ ಇಡೀ ರಾಜ್ಯದಲ್ಲಿ ನಡೆಯುತ್ತದೆ ಎಂದು ಹೇಳಿದರೆ, ನಾವು ಚುನಾಯಿತ ಪ್ರತಿನಿಧಿಗಳಾಗಿ ಯಾವ ಕಾರಣಕ್ಕಾಗಿ ಈ ಸದನಕ್ಕೆ ಬರಬೇಕಾಗಿದೆ. ಈ ವಿಚಾರವನ್ನು ಗಂಭೀರವಾಗಿ ಎಲ್ಲ ಸದಸ್ಯರು ಇದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳಿ ಮನವಿ ಮಾಡುತ್ತೇನೆ. ಬಹುಶಃ ಕಂಬಾಲಪಲ್ಲಿಯ ಬಗ್ಗೆ ಹೇಳುವುದಾದರೆ ಕಂಬಾಲಪಲ್ಲಿಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಹೋಗಲಿಲ್ಲ, ಈ ರಾಜ್ಯದಲ್ಲಿ ಒಂದು ಪ್ರವೃತ್ತಿ ಇದೆ. ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ಗ್ರಾಮೀಣ ಪ್ರದೇಶಗಳಿಗೆ ಹೋಗಬೇಕು. ಸಮಸ್ಯೆಗಳು ಬಂದಾಗ ರಿಪೋರ್ಟಿಂಗ್ ಅಥಾರಿಟಿಯನ್ನು ತಹಶೀಲ್ದಾರ್ ಮತ್ತು ಎ.ಸಿ.ಯವರಿಗೆ ವಹಿಸಿ ಅವರಿಂದ ರಿಪೋರ್ಟನ್ನು ತರಿಸಿಕೊಳ್ಳುತ್ತಾರೆ. ಐಪಿಎಸ್ ಅಧಿಕಾರಿಗಳ ಕೆಲಸವೇನೆಂದರೆ ಸರ್ಕಲ್ ಇನ್ಸ್‌ಪೆಕ್ಟರ್, ಸಬ್‌ನ್ಸ್‌ಪೆಕ್ಟರ್, ಡಿವೈಎಸ್‌ಪಿಯವರಿಂದ ರಿಪೋರ್ಟನ್ನು ತರಿಸಿಕೊಳ್ಳುವುದು. ಆ ಅಧಿಕಾರಿಗಳೆಲ್ಲರೂ ಗ್ರಾಮೀಣ ಪ್ರದೇಶಗಳಿಗೆ ಹೋಗಿ ಅಲ್ಲಿಯ ನೈಜ ಪರಿಸ್ಥಿತಿ ಮತ್ತು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ಆ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವುದಕ್ಕೆ ಅವರಿಗೆ ಏನು ತೊಂದರೆಯಾಗಿದೆ? ಇವರು ಜಿಲ್ಲಾ ಕೇಂದ್ರಗಳಲ್ಲಿ ಕುಳಿತು ಕೇವಲ ರಿಪೋರ್ಟ್‌ಗಳನ್ನು ತರಿಸಿಕೊಂಡು

ಸರ್ಕಾರಕ್ಕೆ ರವಾನೆ ಮಾಡುವುದಾದರೆ ಐಪಿಎಸ್ ಮತ್ತು ಐಎಎಸ್ ಅಧಿಕಾರಿಗಳ ಅವಶ್ಯಕತೆ ಇದೆಯೇ? ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹಮಂತ್ರಿಗಳು ಹಾಗೂ ಎಲ್ಲ ಸದಸ್ಯರು ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಯಾವುದೇ ಐಎಎಸ್ ಅಧಿಕಾರಿ ಹಾಗೂ ಐಪಿಎಸ್ ಅಧಿಕಾರಿ ಗ್ರಾಮೀಣ ಪ್ರದೇಶದ ಜನರ ಮಧ್ಯೆದಲ್ಲಿ ಕುಳಿತು ಚರ್ಚೆ ಮಾಡುವುದಿಲ್ಲವೋ ಅವರ ಮನಸ್ಸುಗಳನ್ನು ಅರಿತುಕೊಳ್ಳುವ ಪ್ರಯತ್ನ ಮಾಡುವುದಿಲ್ಲವೋ ಅಂತಹ ಅಧಿಕಾರಿಗಳಿಂದ ನಾವು ಏನು ಅಪೇಕ್ಷೆಯನ್ನು ಪಡುವುದಕ್ಕಾಗುವುದಿಲ್ಲ. ಹಾಗಾದರೆ, ಅವರ ಜವಾಬ್ದಾರಿ ಏನು? ಕೇವಲ ಪುಸ್ತಕಗಳಲ್ಲಿ ಇರುವಂತಹ ಕಾನೂನನ್ನು ಜಾಗರಣೆ ಮಾಡುವುದಕ್ಕೆ ಕಾರು ಮತ್ತು ಬಂಗಲೆ ಬೇಕೇ ಅವರಿಗೆ ಕೇವಲ ಸಂಪೂರ್ಣವಾದ ಅಧಿಕಾರ ಬೇಕು ಎನ್ನುವುದಾದರೆ ಅವರ ಅವಶ್ಯಕತೆ ಇಲ್ಲವೆಂದು ನನ್ನ ಭಾವನೆಯಾಗಿದೆ. ಕೋಲಾರ ಜಿಲ್ಲೆಯ ಎಸ್ಪಿಯವರು ಹೋಗಿ ಮೂರು ವರ್ಷಗಳಿಂದ ನಡೆಯುತ್ತಿರುವ ಕಗ್ಗೊಲೆ ಹಾಗೂ ಜಾತಿ ವೈಷಮ್ಯದ ಬಗ್ಗೆ ಕೋಲಾರ ಜಿಲ್ಲೆಯ ಗ್ರಾಮೀಣ ಜನರಲ್ಲಿ ಅರಿವನ್ನು ಮೂಡಿಸಿದ್ದರೆ ಇಂದು ಕಂಬಾಲಪಲ್ಲಿಯಲ್ಲಿ ಇಂತಹ ಪರಿಸ್ಥಿತಿ ಆಗುತ್ತಿರಲಿಲ್ಲವೆಂದು ನನ್ನ ಭಾವನೆಯಾಗಿದೆ. ಈ ಬಗ್ಗೆ ಜವಾಬ್ದಾರಿಯನ್ನು ಹೊತ್ತಂತಹ ಸಮಾಜಕಲ್ಯಾಣ ಇಲಾಖೆ ಇದೆ; ಹಾಗೂ ವಾರ್ತಾ ಇಲಾಖೆಯೂ ಕೂಡ ಇದೆ. ಈ ಇಲಾಖೆಗಳ ಯಾವುದೇ ಅಧಿಕಾರಿಗಳು ಗ್ರಾಮೀಣ ಪ್ರದೇಶಗಳಿಗೆ ಹೋಗುತ್ತಿಲ್ಲ. ಸಮಾಜದ ಬಗ್ಗೆ ಸಾಮಾಜಿಕ ಸಮಸ್ಯೆಗಳ ಬಗ್ಗೆ ಜಾಗೃತಿಯನ್ನು ಮೂಡಿಸುವ ಪ್ರಯತ್ನ ಯಾರಿಂದಲೂ ಮಾಡುವುದಕ್ಕಾಗುತ್ತಿಲ್ಲ. ಇದರ ಜೊತೆಗೆ ಇನ್ನೆರಡು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಚಿಂತಾಮಣಿ ಶಾಸಕರು ಒಂದು ಪ್ರಸ್ತಾಪವನ್ನು ಮಾಡಿದರು. ನಾನು ನನ್ನ ತಾಲ್ಲೂಕಿನಲ್ಲಿ ಆಡಳಿತ ನಡೆಸುವ ಸಮಯದಲ್ಲಿ ಯಾವುದೇ ಅಧಿಕಾರಿಗೆ ನಾನು ಸೂಚನೆಯನ್ನು ಕೊಟ್ಟರೆ ಅವರು ನನ್ನ ಆದರ್ಶವನ್ನು ಪಾಲನೆ ಮಾಡುವುದಿಲ್ಲ. ಅವರು ನನ್ನ ಮನವಿಯನ್ನು ಪರಿಗಣಿಸುವುದಿಲ್ಲ. ನನ್ನ ಸೂಚನೆಯನ್ನು ತಿರಸ್ಕಾರ ಮಾಡುತ್ತಾರೆಂದು ಹೇಳಿದರು ಕೇವಲ ಇದು ಶ್ರೀ ಚೌಡರೆಡ್ಡಿಯವರ ಅನುಭವವಲ್ಲ. ವಿರೋದಪಕ್ಷದ ಬಹುತೇಕ ಶಾಸಕರ ಅನುಭವ ಕೂಡ ಇದೆ ಆಗಿದೆ. ಚುನಾಯಿತ ಪ್ರತಿನಿಧಿಗಳು ತಾಲ್ಲೂಕಿನ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಾಗ ಅವರ ಅನುಭವಗಳನ್ನು ಹಾಗೂ ಅಪೇಕ್ಷೆಗಳಿಗೆ ಯಾವ ಅಧಿಕಾರಿಗಳು ಸ್ಪಂದನೆ ಮಾಡುತ್ತಿಲ್ಲ. ಆ ಅಧಿಕಾರಿಗಳು ಯಾರಿಗೆ ಸ್ಪಂದನೆ ಮಾಡುತ್ತಾರೆಂದರೆ, ಆ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿ ಆಡಳತ ಪಕ್ಷದ ಶಾಸಕರ ಮತ್ತು ನಾಯಕರ ಮಾತಿಗೆ ಮಾತ್ರ ಬೆಲೆ ಕೊಡುತ್ತಾರೆಯೇ ವಿನಃ ವಿರೋಧಪಕ್ಷದ ಚುನಾಯಿತ ಪ್ರತಿನಿಧಿಗಳಿಗೆ ಆ ಅಧಿಕಾರಿಗಳು ಬೆಲೆಯನ್ನು ಕೊಡುತ್ತಿಲ್ಲ. ಈ ವ್ಯವಸ್ಥೆಯು ಮುಂದುವರಿದಿದ್ದೆ ಆದರೆ ಚುನಾಯಿತ ಪ್ರತಿನಿಧಿಗಳು ಯಾವ ರೀತಿಯಾಗಿ ಹೆಜ್ಜೆಯನ್ನು ಇಡಬೇಕು. ಜನಪ್ರತಿನಿಧಿಗಳನ್ನು ಆರಿಸಿ ಕಳುಹಿಸಿದಂತಹ ಆ ಜನತೆಗೆ ನಾವು ಯಾವ ರೀತಿಯಾದ ಉತ್ತರವನ್ನು ಕೊಡಬೇಕು?

ನಮ್ಮ ಅಧಿಕಾರಾವಧಿಯಲ್ಲಿ ನಾವು ಯಾವ ರೀತಿಯಾಗಿ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕು. ಅಧಿಕಾರಿಗಳು ಶಾಸಕರ ಮಾತನ್ನು ಯಾವ ರೀತಿಯಾಗಿ ಪಾಲನೆ ಮಾಡಬೇಕಾಗಿದೆ? ಅದರ ಬಗ್ಗೆ ಕಟ್ಟುನಿಟ್ಟಿನ ಆದೇಶವನ್ನು ಎಲ್ಲ ಅಧಿಕಾರಿಗಳಿಗೆ ಕಳುಹಿಸಿದರೆ ಸಮಂಜಸವಾಗುತ್ತದೆಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬಹುಶಃ 50 ವರ್ಷಗಳಿಂದ ದಲಿತವರ್ಗದ ಜನ ಕಾಂಗ್ರೆಸ್ ಪಕ್ಷಕ್ಕೆ ತಮ್ಮನ್ನು ಮೀಸಲಾಗಿಟ್ಟಿದ್ದಾರೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕೆಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದಾರೆಂದು ನನಗೆ ಒಬ್ಬ ಸಹೋದ್ಯೋಗಿ ಹೇಳುತ್ತಿದ್ದರು.

## 4. ಪ್ರಕಟಣೆ

MR.DEPUTY SPEAKER: There is an announcement. It is my privilege to bring to the notice of the House that Lt. Governor his Excellency Mr.Mark schewicker and fifteen members of the Delegation of pensylvani, USA are witnessinof the proceedings of the House in the officers gallery. On behalf of all the Members, I welcome them.

ಶ್ರೀ ಎ.ನಾರಾಯಣಸ್ವಾಮಿ: ನಮಗೆ ರಕ್ಷಣೆ ಕೊಡುವ ಏಕೈಕ ಪಕ್ಷ ಕಾಂಗ್ರೆಸ್ ಪಕ್ಷವೆಂದು ದಲಿತರ ಭಾವನೆಯಲ್ಲಿ ಬೇರೂರಿದೆ. ಅವರ ಒಂದು ಮತದಿಂದ ಇವತ್ತು ಅಧಿಕಾರವನ್ನು ಪಡೆದಂತಹ ತಾವು ದಲಿತರ ರಕ್ಷಣೆಯನ್ನು ಮಾಡಲಿಲ್ಲವೆಂದು ಹೇಳಿದರೆ ಮತ್ತೇ ಯಾರು ದಲಿತರ ರಕ್ಷಣೆಯನ್ನು ಮಾಡುತ್ತಾರೆ? ಇಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ದಲಿತರ ಮತಗಳ ಬಗ್ಗೆ ದೃಢವಾಗಿ ಹೇಳುವುದಾದರೆ 20 ಪರ್ಸೆಂಟ್ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರ್ಗದ ಜನ ಯಾವ ಪಕ್ಷಕ್ಕೆ ತಮ್ಮ ಮತವನ್ನು ಕೊಡುತ್ತಾರೆ, ಅದೆ ಪಕ್ಷ ಇವತ್ತು ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತದೆ. ಅವರ ಆಧಾರದ ಮೇಲೆ ಆಡಳಿತ ನಡೆಸತಕ್ಕಂತಹ ನಾವು ನೈತಿಕ ಹೊಣೆ ಮತ್ತು ಅವರಿಗೆ ರಕ್ಷಣೆಯನ್ನು ನೀಡುವ ಜವಾಬ್ದಾರಿ ನಮ್ಮ ಮೇಲಿದೆ. ನಾನು ಕಂಬಾಲಪಲ್ಲಿ ಗ್ರಾಮಕ್ಕೆ ಭೇಟಿ ನೀಡಿದ್ದೇನೆ. ಆ ಗ್ರಾಮದಲ್ಲಿ ಈ ರೀತಿಯ ವೈಷಮ್ಯ ಇರುವಾಗ ನೀವು ಯಾವ ರೀತಿಯಾಗಿ ಇಲ್ಲಿ ಜೀವನ ಮಾಡುತ್ತೀರೆಂದು ನಾನು ಅವರಿಗೆ ಪ್ರಶ್ನೆಯನ್ನು ಮಾಡಿದೆ. ಆಗ ಅವರು ಹೇಳಿದರು ಹಿಂದೆ ಒಂದು ಕಗ್ಗೊಲೆ ನಡೆದಾಗ ನಾವು ಈ ಊರನ್ನು ಬಿಟ್ಟುಹೋಗಿದ್ದೆವು. ಈ ಗ್ರಾಮಕ್ಕೆ ಮರಳಿ ಬರುವ

ಅವಶ್ಯಕತೆ ಇರಲಿಲ್ಲ. ಚುನಾವಣೆಗೆ ಮಾತ್ರ ನಮ್ಮನ್ನು ಕರೆದುಕೊಂಡು ಬಂದರು, ನಾವು ಕಳೆದ 20-30 ವರ್ಷಗಳಿಂದ ಯಾರು ಓಟು ಹಾಕಿರುವುದಿಲ್ಲ. ಅದು ವಿಧಾನಸಭೆಯ ಚನಾವಣೆ, ಪಾರ್ಲಿಮೆಂಟರಿ ಹಾಗೂ ಗ್ರಾಮಪಂಚಾಯಿತಿ ಚುನಾವಣೆಗಳು ಇರಬಹುದು. ಇಲ್ಲಿನ ಭಾಗದಲ್ಲಿ ಪರಿಶಿಷ್ಠ ಜಾತಿಗೆ ಸೇರಿದಂತಹ ನಾವು ಮತದಾನದ ಹಕ್ಕು ನಮಗೆ ಇಲ್ಲ. ನಾವು ಮತದಾನವನ್ನು ಮಾಡುತ್ತಿಲ್ಲ, ಸರ್ವಾಧಿಕಾರದ ಪ್ರವೃತ್ತಿ ನಮ್ಮ ಗ್ರಾಮದಲ್ಲಿದೆ. ಚುನಾವಣೆಗೆ ನಮ್ಮನ್ನು Boothಗೆ ಬಿಡದೆ ನಮ್ಮ ಓಟುಗಳನ್ನು ತಾವೇ ಹಾಕಿಕೊಳ್ಳುತ್ತಾರೆಂದು ಅವರು ನನ್ನಲ್ಲಿ ಹೇಳಿದರು.

ಶ್ರೀ ಬಿ.ಆರ್.ನೀಲಕಂಠಪ್ಪ: ಇವರು ಪಬ್ಲಿಕ್ ಭಾಷಣವನ್ನು ಮಾಡುತ್ತಿದ್ದಾರೆ, ದಯಮಾಡಿ ತಾವು ಅಮೂಲ್ಯವಾದ ಸಲಹೆಗಳನ್ನು ಕೊಟ್ಟು ಈ ಘಟನೆಯನ್ನು ತಡೆಹಿಡಿದರೆ ಆದಷ್ಟು ಅನುಕೂಲವಾಗುತ್ತದೆ.

ಉಪಾಧ್ಯಕ್ಷರು: ಈಗ ಅವರು ಸದ್ಯದಲ್ಲೇ ಭಾಷಣವನ್ನು ಮುಗಿಸುತ್ತಾರೆ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುವುದರಿಂದ ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಎ.ನಾರಾಯಣ ಸ್ವಾಮಿ: ಸನ್ಮಾನ್ಯ ಉಪಾಧ್ಯಕ್ಷರೆ, ಈ ಸದನದಲ್ಲಿ ಬಹತೇಕ ನನ್ನ ಸಹೋದರರಾದ ಶಾಸಕ ಮಿತ್ರರುಗಳು ಮಾತನಾಡಿದರು. ಅಸ್ಪಶ್ಯತೆಯ ನೋವಿನ ನೆರಳಿನಲ್ಲಿ, ಆ ನೋವನ್ನು ಅನುಭವಿಸಿದಂತಹ ಶಾಸಕರು ಬಹುತೇಕವಾಗಿ ಯಾರು ಮಾತನಾಡಲಿಲ್ಲ. ಅಸ್ಪ್ರಶ್ಯತೆಯನ್ನು ಮತ್ತು ಭಯಾನಕವಾದ ನೆರಳಿನಲ್ಲಿ ತಾವು ಜೀವನವನ್ನು ಮಾಡಿದ್ದರೆ ಆ ಅನುಭವ ಆಗಿದ್ದರೆ, ಇಲ್ಲಿ ಯಾರು ಆ ಬಗ್ಗೆ ವಿರೋಧವನ್ನು ವ್ಯಕ್ತಪಡಿಸುತ್ತಿರಲಿಲ್ಲ. ಆ ಅಸ್ಪ್ರಶ್ಯತೆಯ ನೋವನ್ನು ನಾವು ಅನುಭವಿಸಿದ್ದೇವೆ. ಅವರು ಆ ಮನೆಗೆ ಬೆಂಕಿಯನ್ನು ಹಾಕಿ ಸುಟ್ಟಾಗ, ಏನು ನೋವಾನ್ನು ಅವರು ಅನುಭವಿಸಿದ್ದಾರೆ. ಈ ಬಗ್ಗೆ ತಾವು ಆ ಸ್ಥಾನದಲ್ಲಿ ನಿಂತುಕೊಂಡು ಯೋಚನೆಯನ್ನು ಮಾಡುವುದಾದರೆ ನಮ್ಮ ಸಹದ್ಯೋಗಿಗಳಿಗೆ ಆ ದಲಿತರುಗಳ ನೋವು ಏನು ಎಂದು ಅರ್ಥವಾಗುತ್ತಿತ್ತು.

ಉಪಾಧ್ಯಕ್ಷರು: ಅವರು ಬೇರೆ ಏನು ಎಂದು ಹೇಳಲಿಲ್ಲ.

ಶ್ರೀ ಎ.ನಾರಾಯಣಸ್ವಾಮಿ: ಬಹುಶಃ ಅದರ ಗಂಭೀರತೆಯ ಬಗ್ಗೆ ಅವರು ಹೀಗೆ ಮಾತನಾಡುವ ಬಗ್ಗೆ ಯೋಚನೆ ಮಾಡಬೇಕಾಗಿದೆ. ನಾನು ಸಭಾನಾಯಕರಲ್ಲಿ ಮತ್ತು ಗೃಹ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಈ ಘಟನೆಯ ಹಿಂದುಗಡೆ ನಡೆದಂತಹ ಕೊಲೆಗಳ ಮತ್ತು ಘಟನಾವಳಿಗಳ ಹಿಂದೆ ರಾಜಕೀಯ ಕೈವಾಡವಿದೆ. ಈ ಕಗ್ಗೊಲೆಯನ್ನು ಮಾಡುವುದಕ್ಕೆ ಪೂರ್ವಭಾವಿಯಾಗಿ ಸಿದ್ದತೆಯಾಗಿತ್ತು. ಯಾವತ್ತು

ಕೆಎಸ್‌ಆರ್‌ಪಿ ವಾಹನವನ್ನು ಹಿಂದಕ್ಕೆ ಪಡೆದರೋ, ಆರು ಬಾರಿ ಅಮಾನತ್ತುಗೊಂಡಿರುವ ಒಬ್ಬ ಸಬ್‌ಇನ್ಸ್‌ಪೆಕ್ಟರ್‌ನ್ನು ಆ ಜಿಲ್ಲೆಯ ಎಸ್.ಪಿ.ಯವರು ಬೇಡವೆಂದು ಹೇಳಿದರೂ ಸಹ ಒತ್ತಾಯಪೂರ್ವಕವಾಗಿ ಅಲ್ಲಿಯೇ ನಿಯೋಜನೆ ಮಾಡಿದ್ದು, ಆ ಘಟನೆಯು ನಡೆದಾಗ ಸಬ್‌ಇನ್ಸ್‌ಪೆಕ್ಟರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಘಟನೆಯ ಅರಿವಿದ್ದರೂ ಸಹ ಆ ಗ್ರಾಮಕ್ಕೆ ಭೇಟಿಯನ್ನು ನೀಡದೆ ಇರುವುದು, ಇವೆಲ್ಲವನ್ನು ನೋಡಿದಾಗ ಇದರಲ್ಲಿ ರಾಜಕಾರಣದ ಕೈವಾಡವಿದೆ. ಬಹುತೇಕ ಜ್ಯುಡಿಷಿಯಲ್ ಎನ್‌ಕ್ವಯರಿಗಳು ವರದಿಗಳು ಈ ಸದನದಲ್ಲಿ ಮಂಡನೆಯಾಗಲಿಲ್ಲ; ಅದಕ್ಕೆ ಉತ್ತರವು ಸಹ ಸಿಗಲಿಲ್ಲ. ಈ ಸದನದ ಸದಸ್ಯರ ಅಭಿಪ್ರಾಯದಂತೆ ಈ ಒಂದು ಬರ್ಬರ ಕೃತ್ಯದ ಬಗ್ಗೆ ಸಿಬಿಐ ತನಿಖೆಯಾಗಲೇ ಬೇಕಾಗಿದೆ. ಆ ಹೊಣೆಗಾರಿಕೆಯನ್ನು ಜವಾಬ್ದಾರಿಯುತವಾದ ಆಡಳಿತ ಪಕ್ಷದ ಸದಸ್ಯರು ಹೊತ್ತು ರಾಜೀನಾಮೆಯನ್ನು ಕೊಟ್ಟಾಗ ಮಾತ್ರ ಈ ಸಮಾಜದ ಮತ್ತು ಕರ್ನಾಟಕದ ಜನತೆ ಸರ್ಕಾರದ ಮೇಲೆ ವಿಶ್ವಾಸವನ್ನು ಇಡುತ್ತಾರೆ, ಎಂದು ಹೇಳುತ್ತಾ ನನಗೆ ಎರಡು ಮಾತುಗಳನ್ನಾಡಲು ಅನುಮತಿಯನ್ನು ಕೊಟ್ಟ ಸನ್ಮಾನ್ಯ ಉಪಾಧ್ಯಕ್ಷರಿಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಕೊನೆಯದಾಗಿ ಶ್ರೀ ಕೆ.ಶ್ರೀನಿವಾಸಗೌಡರು ಮಾತನಾಡುವವರಿದ್ದಾರೆ. ಇದರ ಬಗ್ಗೆ ಸಾಕಷ್ಟು ಸದಸ್ಯರುಗಳು ಹಾಗೂ ಎಲ್ಲ ಪಕ್ಷದವರಿಗೂ ಸಹ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ಮುಂದೆ ಗೃಹ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಮಾತನಾಡುವವರಿದ್ದಾರೆ.

ಶ್ರೀ ಬಿ.ಹೆಚ್.ಬನ್ನಿಕೋಡ್: ನಿಲುವಳಿ ಸೂಚನೆಯ ಬಗ್ಗೆ ಮಾತನಾಡಲು ನಾವು ಸಹಿಹಾಕಿ ಮೊದಲು ಕಳುಹಿಸಿಕೊಟ್ಟಿದ್ದೇವೆ. ತಾವು ದಯವಿಟ್ಟು ಇದರ ಬಗ್ಗೆ ಪರಿಶೀಲನೆಯನ್ನು ಮಾಡಬೇಕು.

ಉಪಾಧ್ಯಕ್ಷರು: ಅವರಿಗೂ ಸಹ ಕೊಟ್ಟಿದ್ದೇವೆ. ನಿಲುವಳಿ ಸೂಚನೆಯು ಮೇರೆಗೆ ಮಾತನಾಡಲು 3 ಸದಸ್ಯರುಗಳು ಕೇಳಿದ್ದರು. ಅವರಲ್ಲಿ ಇಬ್ಬರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಸನ್ಮಾನ್ಯ ಉಪಾಧ್ಯಕ್ಷರೆ, ಸಭಾನಾಯಕರು ಈ ವಿಚಾರದಲ್ಲಿ ಸಂಪೂರ್ಣವಾಗಿ ಚರ್ಚೆಯನ್ನು ಮಾಡೋಣ, ಇದಕ್ಕೆ ಸಮಯದ ಲಿಮಿಟನ್ನು ಹಾಕತಕ್ಕಂತಹ ಅವಶ್ಯಕತೆ ಇಲ್ಲ. ಇಲ್ಲಿ ತಾವುಗಳು ಚರ್ಚೆ ಮಾಡಬಹುದು ಎಂದು ಸಭಾನಾಯಕರೆ ಒಪ್ಪಿದ್ದಾರೆ. ಆದುದರಿಂದ ದಯಮಾಡಿ ಸಂಬಂಧಪಟ್ಟ ಜಿಲ್ಲಾ ಶಾಸಕರುಗಳು ಇದ್ದಾರೆ. ಸಂಬಂಧಪಟ್ಟ ಶಾಸಕರುಗಳಿಗೆ ಮಾತನಾಡಲು ದಯವಿಟ್ಟು

ಕಾಲಾವಕಾಶವನ್ನು ಮಾಡಿಕೊಡಬೇಕೆಂದು ಹೇಳಿ ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ನಿಲುವಳಿ ಸೂಚನೆಯ ಬಗ್ಗೆ ಮಾತನಾಡಲು ಸಾಕಷ್ಟು ಕಾಲಾವಕಾಶವನ್ನು ಕೊಟ್ಟಿದ್ದೇವೆ.

ಶ್ರೀ ಬಿ.ಎನ್.ಬಚ್ಚೇಗೌಡ: ಇನ್ನು ಕೆಲವು ಶಾಸಕರು ಮಾತನಾಡುವವರಿದ್ದಾರೆ, ದಯಮಾಡಿ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನಾನು ಇವತ್ತು ಜೈಲಿನಲ್ಲಿ ಇರಬೇಕಾದ ಪರಿಸ್ಥಿತಿ ಇತ್ತು ಅದಕ್ಕಾಗಿ ನಾವು ಇಲ್ಲಿ ಆ ಘಟನೆಯ ಬಗ್ಗೆ ಖಂಡಿತವಾಗಿ ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು: ನಾಳೆಯಿಂದ 3 ದಿವಸಗಳವರೆಗೆ ರಜೆ ಇದೆ. ಅದು ತಮಗೆ ಗೊತ್ತೆ ಇದೆ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ಇವತ್ತು ರಾತ್ರಿ 8-9 ಗಂಟೆಯವರೆಗೆ ಚರ್ಚೆಯನ್ನು ನಡೆಸಲಿ ಏನು ಪರವಾಗಿಲ್ಲ. ನಮಗೆ ತಾವು ರಕ್ಷಣೆ ಕೊಡದಿದ್ದರೆ ಬೇರೆ ಯಾರು ಕೊಡಬೇಕು?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಸಭಾನಾಯಕರು ವಿಸ್ತೃತವಾದ ಚರ್ಚೆ ನಡೆಯಲಿ ಎಂದು ಹೇಳಿದ್ದು. ಎಲ್ಲರೂ ಮಾತನಾಡುತ್ತಾರೆ ಎಂದು ನಾನು ನೆನೆಸಿರಲಿಲ್ಲ. ಪ್ರತಿಯೊಂದು ರಾಜಕೀಯ ಪಕ್ಷದ ಪ್ರಾಥಮಿಕವಾಗಿ ಸಾಕಷ್ಟು ಸಂಖ್ಯೆಯಲ್ಲಿ ಚರ್ಚೆಯಲ್ಲಿ ಭಾಗವಹಿಸಿ ಘಟನೆಗಳ ಮೇಲೆ ಬೆಳಕು ಚೆಲ್ಲುವ ಮೂಲಕ ಸರ್ಕಾರಕ್ಕೆ ಮಾರ್ಗದರ್ಶನ ಮಾಡಬಹುದು: ಎನ್ನತಕ್ಕಂತಹ ನಿರೀಕ್ಷೆಯಿಂದ ನಾನು ಆ ಸೂಚನೆಯನ್ನು ಮಾಡಿದನೇ ಹೊರತು ಆ ಸೂಚನೆಯನ್ನು ನೀವು ಲಂಬಿಸಿ ಮಾನ್ಯ ಸದಸ್ಯರುಗಳು ಅರ್ಧರಾತ್ರಿಯವರೆಗೆ ಕುಳಿತುಕೊಳ್ಳೋಣ ತೊಂದರೆ ಏನೂ ಇಲ್ಲವೆಂದು ಹೇಳಿದರು. ಹಾಗಾದರೆ ಇಡೀ ರಾಜ್ಯದ ಬಗ್ಗೆ ನಾವು ಚರ್ಚೆಯನ್ನು ಮಾಡಬಹುದು. ನಮ್ಮ ಗೃಹಸಚಿವರು he will intervene in the discussion. In an adjournment motion, there is nothing like reply We are also going to participate in this Motion. ಮಾನ್ಯ ಉಪಾಧ್ಯಕ್ಷರೆ, ನಮ್ಮ ಗೃಹಸಚಿವರ intervention ತಾವು ಅವರನ್ನು ಕರೆಯಬಹುದು. ಆ ಮೇಲೆ ರಾತ್ರಿ 2 ಗಂಟೆಯವರೆಗೆ ಚರ್ಚೆಯನ್ನು ಮಾಡೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾವು ತಮ್ಮಿಂದ ಇಂತಹ ಮಾತನ್ನು ನಿರೀಕ್ಷೆ ಮಾಡಿರಲಿಲ್ಲ. ತಾವು ಇವತ್ತು ಬೆಳಿಗ್ಗೆ ಹೇಳಿದಂತಹ ಮಾತುಗಳು ವಿಷಯದ ಗಂಭೀರತೆಯನ್ನು ಅರಿತು ನಾವು ಇದರ ಬಗ್ಗೆ ರೆಸ್ಪಾಂಡ್ ಮಾಡಿದ್ದೇವೆ; ತಾವೇ ಹೇಳಿದ್ದೀರಿ. ಬಹುಶಃ ಇತ್ತೀಚಿನ ಸದನದ ಸಭಾನಾಯಕರಲ್ಲಿ ಇತಿಹಾಸದಲ್ಲಿ ಸಭಾನಾಯಕರಾಗಿರತಕ್ಕಂಥವರು ಒಂದು ನಿಲುವಳಿ ಸೂಚನೆಯ ಬಗ್ಗೆ ನಮ್ಮ ಕಡೆಯಿಂದ ಏನೂ ತಕರಾರು ಇಲ್ಲ., ಚರ್ಚೆ ನಡೆಯಲಿ ಎಂದು ಹೇಳಿರುವುದು ಮೊದಲನೆಯದು, ಇನ್ನು ನಾಲ್ಕೈದು ಜನರು ಮಾತ್ರ ಮಾತನಾಡುವವರಿದ್ದಾರೆ. ಆವರು ಏನು ಹೇಳುತ್ತಿದ್ದಾರೆಂದರೆ ಸ್ವಲ್ಪ ಸಮಯವನ್ನು ಮಾತನಾಡಲು ಸದಸ್ಯರಿಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಅದರಿಂದ ತಾವು ಸಿಟ್ಟು ಮಾಡಿಕೊಂಡರೆ ಹೇಗೆ?

ಶ್ರೀ ಎಸ್.ಎಂ.ಕೃಷ್ಣಾ: ಇವರ intervension ಆದ ಮೇಲೆ ಮಾತನಾಡಿ. ನನಗೆ ಸಿಟ್ಟೆ ಬರುವುದಿಲ್ಲ.

(ಗೊಂದಲ)

ಶ್ರೀ ಬಿ.ಹೆಚ್.ಬನ್ನಿಕೋಡ್: ಮಾನ್ಯ ಉಪಾಧ್ಯಕ್ಷರೆ, ನಾನು ನಿಲುವಳಿ ಸೂಚನೆಗೆ ಸಹಿ ಹಾಕಿದ್ದೇನೆ, ನೀವು ಮಾತನಾಡಲು ಅವಕಾಶ ಮಾಡಿಕೊಡುತ್ತೀರೆಂದು ನಾವು ಕಾದು ಕುಳಿತಿದ್ದೇವೆ. ಯಾರು ನಿಲುವಳಿ ಸೂಚನೆಯನ್ನು ಮೊದಲು ಕಳುಹಿಸಿಕೊಟ್ಟಿದ್ದಾರೆ ಅವರಿಗೆ ಮೊದಲು ಅವಕಾಶವನ್ನು ಮಾಡಿಕೊಡಬೇಕು. ಅನಂತರ ಬೇರೆಯವರಿಗೆ ಅವಕಾಶವನ್ನು ಮಾಡಿಕೊಡಿ. ಪ್ರೋಸಿಜರ್ ಪ್ರಕಾರ ಸಭೆ ನಡೆಯಲಿ.

ಉಪಾಧ್ಯಕ್ಷರು: ಮಾನ್ಯ ಗೃಹಮಂತ್ರಿಗಳ ರಿಪ್ಲೈ ಆದನಂತರ ಅದಕ್ಕೆ ಮರು ಉತ್ತರವನ್ನು ಕೇಳಬಹುದು.

ಶ್ರೀ ಬಿ.ಹೆಚ್.ಬನ್ನಿಕೋಡ್: ವಿಧಿವಿಧಾನಗಳ ಪ್ರಕಾರ ಈ ಒಂದು ಅಧಿವೇಶನ ನಡೆಯಲಿ ಎಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣಾ: ಮಾನ್ಯ ಉಪಾಧ್ಯಕ್ಷರೆ, ನಿಲುವಳಿ ಸೂಚನೆಗೆ ರಿಪ್ಲೈ ಇಲ್ಲ. ಓಟಿಂಗ್ ಮಾತ್ರ. ಸರ್ಕಾರ ಇಂಟರ್‌ವೇನ್ ಮಾಡಬಹುದು. and that is the right which we are seeking.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ವಿರೋಧಪಕ್ಷದ ನಾಯಕರೊಬ್ಬರನ್ನು ಬಿಟ್ಟರೆ ಸರ್ಕಾರದ ಆಂತರಿಕ ವ್ಯವಹಾರಗಳನ್ನು ತಿಳಿದುಕೊಳ್ಳುವುದಕ್ಕೆ ಮಾತ್ರ ಅವಕಾಶವಿರುತ್ತದೆ; ಕಾರಣ, ಅವರಿಗೆ ಸ್ವಲ್ಪ access ಇರುತ್ತದೆ. ಅವರು ಕರೆದರೆ ಬಂದು ಹೇಳುತ್ತಾರೆ. ಆದರೆ ನಮ್ಮ ಶಾಸಕರುಗಳು ಅವರ ಕ್ಷೇತ್ರದಲ್ಲಿ ಇದಕ್ಕೆ

ಸಂಬಂಧಪಟ್ಟಂತೆ ಆಡಳಿತ ಯಾವ ದಿಕ್ಕಿನಲ್ಲಿ ಹೋಗಿದೆ, ಏನಾಗಿದೆ, ಯಾವಕಾರಣಕ್ಕೆ ಇದು ಆಗಿದೆ. ಬೆಳಿಗ್ಗೆ ತಾವು ಏನು ಹೇಳಿದ್ದೀರಿ ಇಂತಹ ಘಟನೆಗಳು ಇಡೀ ರಾಜ್ಯದಲ್ಲಿ ಮರುಕಳಿಸಬಾರದು, ನಮ್ಮ ಮತ್ತು ನಿಮ್ಮ ಅಭಿಪ್ರಾಯ ಮತ್ತು ಕಾಳಜಿ ಎರಡು ಇದೆ. ಈಗ ಮರಣವನ್ನು ಹೊಂದಿ ಹೊರಟುಹೋಗಿದ್ದಾರೆ. ಅದಕ್ಕೆ ಜೀವವನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ನಮಗೂ ಹಾಗೂ ನಿಮಗೂ ಗೊತ್ತಿದೆ. ಇಂತಹ ಘಟನೆಗಳು ಮರುಕಳಿಸದಂತೆ ಆಗುವುದಕ್ಕೆ ಸರ್ಕಾರ ಏನು ಎಚ್ಚರಿಕೆ ತೆಗೆದುಕೊಳ್ಳಬೇಕು. ಇದರಲ್ಲಿ ನಮ್ಮದು ಜವಾಬ್ದಾರಿ ಇದೆ. ನಾವು ಒಂದು ಜವಾಬ್ದಾರಿಯುತ ಪಕ್ಷದಲ್ಲಿರತಕ್ಕಂಥವರು. ಅದಕ್ಕಾಗಿ ನಾವು ಏನು ಸಲಹೆಗಳನ್ನು ಕೊಡುತ್ತೇವೆ ಅದು ಆದನಂತರ ಮಾನ್ಯ ಗೃಹ ಮಂತ್ರಿಗಳು ಅದಕ್ಕೆ ಸಂಬಂಧಪಟ್ಟಂತೆ ವಿವರಣೆಗಳನ್ನು ಮತ್ತು ಸ್ಪಷ್ಟನೆಗಳನ್ನು ಕೊಡಲೆಂದು ನಮ್ಮ ಮನವಿ ಮಾತ್ರ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ತಾವು ಸಮಯವನ್ನು ನಿಗದಿಪಡಿಸಿ, ನಾವು ಅಷ್ಟರಲ್ಲಿಯೇ ಮಾತನಾಡಿ ಮುಗಿಸುತ್ತೇವೆ.

ಉಪಾಧ್ಯಕ್ಷರು: ಹೆಚ್ಚೆಗೆ ಅಂದರೆ 15 ನಿಮಿಷಗಳು ಮಾತ್ರ ಮಾತನಾಡಲು ಕೊಡಬಹುದು.

ಶ್ರೀ ಬಿ.ಹೆಚ್.ಬನ್ನಿಕೋಡ್: ಮೊದಲು ಸಹಿ ಹಾಕಿದವರಿಗೆ ಅವಕಾಶ ಮಾಡಿಕೊಡಿ. ಆ ಮೇಲೆ ತಾವು ಅಭಿಪ್ರಾಯಪಟ್ಟು ಬೇರೆಯವರಿಗೆ ಅವಕಾಶವನ್ನು ಮಾಡಿಕೊಡಿ.

ಉಪಾಧ್ಯಕ್ಷರು: ಮೊದಲು ಶ್ರೀನಿವಾಸಗೌಡರು 5 ನಿಮಿಷಗಳು ಮಾತನಾಡಲಿ.

+ ಶ್ರೀ ಕೆ.ಶ್ರೀನಿವಾಸಗೌಡ(ಕುಡುವನಹಳ್ಳಿ ಕೋಲಾರ): ಮಾನ್ಯ ಉಪಾಧ್ಯಕ್ಷರೆ, ಇವತ್ತು ಕಂಬಾಲಪಲ್ಲಿಯಲ್ಲಿ ಆಗಿರುವಂತಹ ಈ ಬರ್ಬರಕೃತ್ಯ ಏನಿದೆ ಎಂದರೆ ಇವತ್ತು ಎರಡೂ ಕಡೆ ಅನ್ಯಾಯಗಳು ಆಗಿವೆ. ಇವತ್ತು ನಾವು ಅಲ್ಲಿ ರಾಜಕೀಯ ಲಾಭಕ್ಕೆ ಯಾವುದೇ ಒಂದು ಉದ್ದೇಶವನ್ನು ಇಟ್ಟುಕೊಂಡು ಮಾತನಾಡುವುದು ಅಲ್ಲ. ಇವತ್ತು ಅಲ್ಲಿ ಆ ಎರಡು ಜಾತಿಗಳ ಮನಸ್ಸುಗಳು ಕದಡಿವೆ. ಆ ಎರಡು ಮನಸ್ಸುಗಳನ್ನು ನಾವು ಒಂದು ಮಾಡುವಂತಹ ಎಲ್ಲ ರಾಜಕೀಯ ಪಕ್ಷಗಳು ಇರಬೇಕಾದಂತಹ ಜವಾಬ್ದಾರಿ. ಈ ಜವಾಬ್ದಾರಿಯನ್ನು ಹೊತ್ತು ಈ ಘಟನೆಯನ್ನು ಬಹಳಷ್ಟು ವಿವರಣೆಯನ್ನು ಈಗಾಗಲೇ ಮೊದಲು ಮಾತನಾಡಿರುವವರು ಹೇಳಿದ್ದಾರೆ. ಇವತ್ತು ಕೃಷ್ಣಾರೆಡ್ಡಿಯವರು 11ನೇ ತಾರೀಖು ಸತ್ತ ಮೇಲೆ ಹರಿಜನರ ಮನೆಗೆ ಹುಲ್ಲು ಮೆದೆಯನ್ನು ಹಾಕಿ 7 ಜನ ದಲಿತರನ್ನುಸುಟ್ಟು ಹಾಕಿದ್ದಾರೆ. ಇವತ್ತು ನಾವು ಮಾಡಬೇಕಾದಂತಹ ಕೆಲಸವೆಂದರೆ ಅವರ ಕದಡಿದ ಮನಸ್ಸುಗಳನ್ನು ಒಂದು ಮಾಡಬೇಕಾದದ್ದು ನಮ್ಮೆಲ್ಲರ ಕರ್ತವ್ಯ.

4.50 ಪಿ.ಎಂ

ಇವತ್ತು ಯಾವುದೇ ರಾಜಕೀಯ ಲಾಭ ಪಡೆಯುವುದಕ್ಕೋಸ್ಕರ ನಿಲುವಳಿ ಸೂಚನೆಯನ್ನು ಮಂಡನೆ ಮಾಡಿಲ್ಲ. ಮೂಲಭೂತವಾಗಿ ಎರಡು ಅನುಭವಗಳನ್ನು ಕೊಡ ಬಹುದು. ಇದಕ್ಕಿಂತಲೂ ಹೆಚ್ಚಿನದಾದ ಘಟನೆ ನನ್ನ ಕ್ಷೇತ್ರದ ಅಲ್ಲಿಂದೂರು ಅಲ್ಲಿನ ಹರಿಜನರು ಅವರ ಎತ್ತು, ಕರು, ಹಸು ಎಮ್ಮೆಗಳನ್ನು ಹೊಡೆದುಕೊಂಡು ಜಿಲ್ಲಾಪರಿಷತ್ತಿನ ಮುಂದೆ ಬಂದಿದ್ದರು. ಆವೊತ್ತಿನ ಜಿಲ್ಲಾಡಳಿತ, ಜಿಲ್ಲಾಧಿಕಾರಿಗಳು ಮತ್ತು ಎಸ್‌ಪಿಯವರು ನಾನು ಎಲ್ಲರೂ ಸೇರಿ, ವಿಷಯ ಬಹಳ ಗಂಭೀರತೆಯಿಂದ ಇತ್ತು. ಆ ಊರಿಗೆ ಅಧಿಕಾರಿಗಳ ಜೊತೆಯಲ್ಲಿ ಹೋಗಿ ಎಲ್ಲರೂ ಸೇರಿ ಪಂಚಾಯಿತಿ ಮಾಡಿದೆವು. ಕಿತ್ತಾಟದಿಂದ ಅವರಮನಸ್ಸುಗಳು ಒಡೆದುಹೋಗಿತ್ತು. ಆ ಊರಿನಲ್ಲಿ ಶಾಂತಿಯನ್ನು ಕಾಪಾಡು (ಈ ಹಂತದಲ್ಲಿ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)ವುದರಲ್ಲಿ ಜಿಲ್ಲಾಧಿಕಾರಿಗಳವರು ಮತ್ತು ಎಸ್‌ಪಿಯವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆ ಕೆಲಸವನ್ನು ಕಂಬಾಲಪಲ್ಲಿಯಲ್ಲಿ ಮಾಡಬಹುದಾಗಿತ್ತು. ಅಚಾತುರ್ಯದಿಂದ ಈ ಕೆಲಸವಾಗಿದೆ, ಅದರ ಬಗ್ಗೆ ಬಹಳ ವಿವರವಾಗಿ ಎಲ್ಲರೂ ಹೇಳಿದ್ದಾರೆ. ಅಲ್ಲಿನ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ವರ್ತನೆ ಸರಿಯಿಲ್ಲ. ನಾನು ಮಾನ್ಯ ಸಚಿವರಾದ ಮುನಿಯಪ್ಪನವರಿಗೆ ಹೇಳಿದೆ, ಜಿಲ್ಲಾ ಉಸ್ತುವಾರಿ ಸಚಿವರು ಇಬ್ಬರು ಎಂದು. ಸಭಾಧ್ಯಕ್ಷರು ನಮ್ಮ ಜಿಲ್ಲೆಯವರೇ ಆಗಿರುವುದರಿಂದ ಇದು ನಿಮ್ಮ ಗಮನಕ್ಕೆ ಬಂದಿರುತ್ತದೆ. ಒಬ್ಬರು ಮಾನ್ಯ ಮುನಿಯಪ್ಪನವರು ಇನ್ನೊಬ್ಬರು ಲೋಕಸಭಾ ಸದಸ್ಯರು. ಇಬ್ಬರದೇ ಆಡಳಿತ. ನಮ್ಮ ಜಿಲ್ಲೆಯ ಎಲ್ಲಾ ಅಧಿಕಾರಿಗಳ ಹಸ್ತಾಂತರದಲ್ಲಿ ಹಸ್ತಕ್ಷೇಪ ಮಾಡುವುದರಿಂದ ನಮ್ಮ ಆಡಳಿತ ಪಕ್ಷದ ಶಾಸಕರದೇನು ನಡೆಯುವುದಿಲ್ಲ. ಹಸ್ತಕ್ಷೇಪ ಜಾಸ್ತಿಯಾಗಿದೆ, ನಮ್ಮ ಜಿಲ್ಲೆಗೆ ಇಬ್ಬರು ಉಸ್ತುವಾರಿ ಮಂತ್ರಿಗಳಾಗಿದ್ದಾರೆ. ಈಗಾಗಲೇ ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಹೇಳಿದ್ದಾರೆ ಇದು ನಿಲ್ಲಬೇಕು. ಈ ಲೋಕಸಭಾ ಸದಸ್ಯರು ಕಳೆದ ಚುನಾವಣೆಯಲ್ಲಿ ಚೌಡರೆಡ್ಡಿಯವರಿಗೆ ಸೀಟು ಕೊಡದಹಾಗೆ ಮಾಡಿದ ಹಿನ್ನೆಲೆಯಲ್ಲಿ ಇವತ್ತು ಅವರು ಪ್ರಭಾವಿ ರಾಜಕಾರಣಿಯಾಗಿ ಪ್ರತಿ ಕ್ಷೇತ್ರದಲ್ಲೂ ಅವರದೇ ಆದ ಗುಂಪುಗಳನ್ನು ಕಟ್ಟುವುದರ ಮೂಲಕ ಇವತ್ತು ಎಲ್ಲಾ ಹಂತದಲ್ಲೂ ಹಸ್ತಕ್ಷೇಪ ಮಾಡುತ್ತಿದ್ದಾರೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ.

ಶ್ರೀ ಕಾಗೋಡುತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾನ್ಯ ಲೋಕ ಸಭಾ ಸದಸ್ಯರ ಬಗ್ಗೆ ಹೇಳಿದರೆ ಇಲ್ಲಿ ಅವರು ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ (ಕುಡುವನಹಳ್ಳಿ): ನಾನು ಅದಕ್ಕಾಗಿಯೇ ಉಸ್ತುವಾರಿ ಮಂತ್ರಿಗಳಾದ ಮುನಿಯಪ್ಪನವರಿಗೆ ಹೇಳಿದ್ದೇನೆ. ಮಾನ್ಯ ಕಾಗೋಡುತಿಮ್ಮಪ್ಪನವರು

ಹಿರಿಯರು ಹೀಗೆ ಹೇಳಿದರೆ ಹೇಗೆ?

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಕಳೆದ ಐದು ವರ್ಷಗಳಲ್ಲಿ ಅವರೇನು ಪದ್ಧತಿಯನ್ನು ಅನುಸರಿಸಿದ್ದಾರೆ, ನಾವೇನು ಮಾಡಿದ್ದೇವೆ, ನೀವೇನು ಮಾಡಿದ್ದೀರಿ ಅದನ್ನು ವಿಚಾರ ಮಾಡೋಣ. ವಿಚಾರ ಬಹಳ ಗಂಭೀರವಾದುದು. ಇದರಲ್ಲಿ ಯಾರದು ಎಷ್ಟೆಷ್ಟು ಪಾತ್ರ ಅದನ್ನು ಗುಪ್ತವಾಗಿ ಮಾತನಾಡೋಣ. ದಯಮಾಡಿ ವಾಸ್ತವ ಸಂಗತಿಯ ಬಗ್ಗೆ ಮಾತನಾಡೋಣ. ಗಂಭೀರದ ವಿಷಯಕ್ಕೆ ರಾಜಕೀಯ ಬಣ್ಣ ಕಟ್ಟಿ ಯಾರನ್ನೂ ಗುರಿ ಮಾಡತಕ್ಕದ್ದು ಸರಿಯಲ್ಲ.

ಶ್ರೀ ಕೆ.ಶ್ರೀನಿವಾಸಗೌಡ (ಕುಡುವನಹಳ್ಳಿ): ಇವತ್ತು ಚಿಂತಾಮಣಿ ತಾಲ್ಲೂಕು ಕಂಬಾಲಪಲ್ಲಿಯಲ್ಲಿ ಮಾಡಿರತಕ್ಕದ್ದು ರಾಜಕಾರಣ ಅಲ್ಲವೆ? ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಆರು ಸಾರಿ ಸಸ್ಪೆಂಡ್ ಆದಂತಹ ಒಬ್ಬ ಸಬ್ ಇನ್ಸ್‌ಪೆಕ್ಟರ್‌ನ್ನು ಅಲ್ಲಿಗೆ ಹಾಕುವಂತಹ ಅಗತ್ಯವೇನಿತ್ತು? ಚೌಡರೆಡ್ಡಿಯವರದು ಅಲ್ಲಿ ಏನೂ ನಡೆಯಬಾರದೆಂದು ಮಾಡಿರುವುದು ಇದು ರಾಜಕಾರಣದ ಉದ್ದೇಶವಲ್ಲವೆ?

ಶ್ರೀ ವಿ.ಮುನಿಯಪ್ಪ: ಸಸ್ಪೆಂಡ್ ಆದ ಅಧಿಕಾರಿಗಳನ್ನು ಹಾಕುವುದು ಬೇಡವೆಂದು ಅವರು ತಡೆದಿದ್ದರೆ ಅದಕ್ಕೆ ನಾವೇನು ಅಡ್ಡ ಬರುತ್ತಿರಲಿಲ್ಲ. ಅದು ರೊಟೀನ್ ವರ್ಕ್ ಯಾರಾದರೂ ಬರುತ್ತಾರೆ, ಹೋಗುತ್ತಾರೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಸದಸ್ಯರು ಏನೋ ಹೇಳುತ್ತಿದ್ದಾರೆ. ಆದರೆ ಮಂತ್ರಿಗಳು ಅದಕ್ಕೆ ಡಿಸ್ಟರ್ಬ್ ಮಾಡುತ್ತಿದ್ದಾರೆ. ಅವರು ಏನು ಹೇಳುತ್ತಾರೆಂದು ಕೇಳೋಣ.

ಅಧ್ಯಕ್ಷರು: ಮಾನ್ಯ ಸುಬ್ಬಾರೆಡ್ಡಿಯವರೆ, ತಮ್ಮ ಹತ್ತಿರ ಇನ್‌ಫರ್ಮೇಶನ್ ಇರುವುದು ಈ ವಿಷಯಕ್ಕೆ ಸಂಬಂಧಪಟ್ಟಿದೆಯೆ? ಇಲ್ಲವೆಂದರೆ ನೀವು ಏಕೆ ಮಾತನಾಡುತ್ತೀರಿ?

ಶ್ರೀ ಕೆ.ಶ್ರೀನಿವಾಸಗೌಡ (ಕುಡುವನಹಳ್ಳಿ): ಇವತ್ತು ನಮ್ಮ ಜಿಲ್ಲೆಯಲ್ಲಿ ಬಹಳ ಸೂಕ್ಷ್ಮವಾದ ತಾಲ್ಲೂಕುಗಳು ಅಂದರೆ ಶ್ರೀನಿವಾಸಪುರ, ಚಿಂತಾಮಣಿ, ಶಿಡ್ಲಘಟ್ಟ. ಸಾಮಾನ್ಯವಾಗಿ ಈ ಸಭೆಯ ಅಧ್ಯಕ್ಷರಾದ ತಮಗೆ ಚೆನ್ನಾಗಿ ಗೊತ್ತಿದೆ. ಬೇರೆ ತಾಲ್ಲೂಕುಗಳಲ್ಲಿ ರಾಜಕೀಯ ಏನೂ ನಡೆಯುವುದಿಲ್ಲ. ಈ ಮೂರು ತಾಲ್ಲೂಕುಗಳಲ್ಲಿ ಏಕೋ ದುರಾದೃಷ್ಟವಶಾತ್ ರಾಜಕೀಯವಾಗಿ ಈ ಎಲ್ಲಾ ಘಟನೆಗಳು ನಡೆದಾಗ ಪೋಲೀಸ್ ಸ್ಟೇಷನ್ನಿಗೆ ಕಂಪ್ಲೈಂಟ್ ಕೊಡಲು ಹೋದರೆ ಈ ಮೂರು ತಾಲ್ಲೂಕುಗಳಲ್ಲಿ ರಾಜಕೀಯ ಹಿನ್ನೆಲೆಯಿಲ್ಲದೆ ಯಾವುದೇ ಪೋಲೀಸ್ ಕಂಪ್ಲೈಂಟ್

ತೆಗೆದುಕೊಳ್ಳುವುದಿಲ್ಲ.

ಶ್ರೀ ಸಿ.ವೆಂಕಟೇಶಪ್ಪ: ಕೋಲಾರದಲ್ಲಿ ಏನು ನಡೆದಿಲ್ಲ ಅದನ್ನು ಮಾಡಲು ಹೇಳಿ? ಅಲ್ಲಿ ನಡೆದಿರುವಂಥದ್ದು ಇನ್ನು ಎಲ್ಲೂ ನಡೆದಿಲ್ಲ. ರಾಜಕೀಯವಾಗಿ ಎಲ್ಲವನ್ನು ಏಕೆ ಮಾತನಾಡುತ್ತೀರಿ? ಈಗ ಚಿಂತಾಮಣಿ ತಾಲ್ಲೂಕಿನ ವಿಷಯವಾಗಿ ಮಾತನಾಡಿ. ಇಲ್ಲಿ ರಾಜಕೀಯ ಏಕೆ ತರುತ್ತೀರಿ? ತಮ್ಮ ಕ್ಷೇತ್ರದಲ್ಲಿ ಆಗಿರತಕ್ಕ ಕೇಸುಗಳನ್ನು ತಾವು ಹೇಳಿ ಗೊತ್ತಾಗುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ(ಕುಡುವನಹಳ್ಳಿ): ಮಾನ್ಯ ಅಧ್ಯಕ್ಷರೆ, ಈ ಮೂರು ತಾಲ್ಲೂಕುಗಳಲ್ಲಿ ಇವು ಸೆನ್ಸಿಟಿವ್ ತಾಲ್ಲೂಕುಗಳೆಂದು ಹೇಳಿದರೆ ತಪ್ಪಾಗಲಾರದು. ಅದರಲ್ಲೂ ಚಿಂತಾಮಣಿಯಲ್ಲಿ ಈಗಾಗಲೇ ಬಿಲ್ಲಾಂಡಹಳ್ಳಿಯಲ್ಲಿ ಆದಂತಹ ಹಿನ್ನಲೆಯಲ್ಲಿ ಪೋಲೀಸ್‌ನವರ ಮೇಲೆ ಯಾರೂ ಕೈಹಾಕಬಾರದು. ನನಗೆ ತಿಳಿದಮಟ್ಟಿಗೆ ಎಲ್ಲ ಅಧಿಕಾರವನ್ನು ಡಿಜಿಪಿಯವರ ಮೂಲಕ ಮಾಡಿಸುತ್ತೇವೆಂದು ಹೇಳುವುದಕ್ಕೆ ಬದಲಾಗಿ, ಸಬ್‌ಇನ್ಸ್‌ಪೆಕ್ಟರ್ ಇರಬಹುದು, ಪೋಲೀಸ್ ಕಾನ್‌ಸ್ಟೇಬಲ್ ಇರಬಹುದು ಅವರ ಮೂಲಕ ಆಪರೇಟ್ ಮಾಡಿದ್ದಿದ್ದರೆ 8ಜನರು ಸಾಯುವ ಕೆಲಸವಾಗುತ್ತಿರಲಿಲ್ಲ. ಇವತ್ತು 8ಜನ ಸತ್ತಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇವತ್ತು ಗೃಹಮಂತ್ರಿಗಳಾಗಿದ್ದಾರೆ. ಹಿಂದೆ ವಿದಾನಸಭೆಯ ವಿರೋಧಪಕ್ಷದ ನಾಯಕರಾಗಿದ್ದಾಗ ಶಿರಾದಲ್ಲಿ ಗೋಲಿಬಾರ್ ನಡೆದಂತಹ ವಿಷಯದಲ್ಲಿ ಕೆಲವು ಮಾತುಗಳನ್ನು ಆಡಿದ್ದಾರೆ. ನಾನು ಎರಡು ಮೂರು ವಾಕ್ಯಗಳ್ನು ಓದಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧಪಕ್ಷದ ನಾಯಕರಾಗಿದ್ದಾಗ ಹೇಳಿದಂತಹ ಮಾತುಗಳು. ದಿನಾಂಕ 29-10-98ರಲ್ಲಿ ಹೇಳಿದ್ದಾರೆ. ''ಇಂಥ ಒಂದು ಘಟನೆ ನಡೆಯಬೇಕಾದರೆ ಸರ್ಕಾರದ ಆಡಳಿತ ವೈಖರಿ ಹೇಗಿದೆ ಎಂದು ನೋಡಬೇಕಾಗುತ್ತದೆ. ಅಥವ ಸರ್ಕಾರಿ ಅಧಿಕಾರಿಗಳು ಮತ್ತು ಅಧಿಕಾರಿಗಳಷ್ಟೆ ಅಲ್ಲ, ಒಬ್ಬ ಮಂತ್ರಿಗಳೂ ಸಹ ವಾಚ್ ಮಾಡುವಾಗ ಇಂಥ ಪರಿಸ್ಥಿತಿ ಉಂಟಾಗುತ್ತದೆಂದರೆ ನಿಜವಾಗಲೂ ನಾವು ನಾಚಿಕೆಯಿಂದ ತಲೆ ತಗ್ಗಿಸಬೇಕಾಗುತ್ತದೆ.'' ಇದು ಅವರು ಹೇಳಿದಂತಹ ಮಾತು. ನೀವು ರೈತರ ಹೆಸರನ್ನು ಹೇಳಿಕೊಂಡು ಅಧಿಕಾರಕ್ಕೆ ಬಂದಿದ್ದೀರಿ. ''ರೈತರಿಗಾಗಿ ಬದುಕುತ್ತೇವೆ, ಬದುಕುತ್ತಿದ್ದೇವೆಂದು ಏನೇನು ಮಾಡಬೇಕೋ ಅದನ್ನೆಲ್ಲ ಮಾಡಿ ಮುಗಿಸಿದ್ದೀರಿ ರೈತರನ್ನು ಎಲ್ಲೆಲ್ಲಿ ಮಲಗಿಸಬೇಕು ಅಲ್ಲಿ ಅವರನ್ನು ಮಲಗಿಸಿ ಅವರ ಸಮಾಧಿಯ ಮೇಲೆ ಕುಳಿತಿದ್ದೀರಿ. ಯಾರು ತಮಗೆ ಅಧಿಕಾರವನ್ನು ಕೊಟ್ಟಿದ್ದಾರೋ ಅಂಥವರನ್ನು ಮುಗಿಸತಕ್ಕಂಥ ಒಂದು ವ್ಯವಸ್ಥೆ ಬಹಳ ಸಿಸ್ಟಮ್ ಆಗಿ ನಡೆಯುತ್ತಿದೆ.'' ''ಇವತ್ತು ಯಾವ ಜನಾಂಗದವರು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕಾದರೆ, ಪರಿಶಿಷ್ಟಜಾತಿ ಪರಿಶಿಷ್ಟಪಂಗಡ,

ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾಂತರಿಂದ ಇವತ್ತು ಈ ಸರ್ಕಾರ ಅಧಿಕಾರಕ್ಕೆ ಬಂದಿದೆ. ಅಂತಹವರ ಮಸಣದ ಮೇಲೆ ಇವತ್ತು ಆಡುತ್ತಿದ್ದೀರಿ.'' ಅವರು ನುಡಿದಂತಹ ಮಾತುಗಳನ್ನು ನಾಗು ಇಲ್ಲಿ ಹೇಳುತ್ತಿದ್ದೇನೆ. ವಿರೋಧಪಕ್ಷದ ನಾಯಕರಾಗಿ ಅವರು ಹೇಳಿದ ಮಾತುಗಳನ್ನು ಹೇಳುತ್ತಿದ್ದೇನೆ. ಮತ್ತೆ ಇನ್ನೊಂದು ವಿಷಯ ಅವರು ಹೇಳುತ್ತಾರೆ. ''ಯಾರು ತಾನೇ ಸರಿಯಾಗಿ ನಡೆದುಕೊಳ್ಳುತ್ತಾರೆ ಇವರೊಬ್ಬರೇನೆ ಎಂದು ತಾವು ಸಮರ್ಥನೆ ಮಾಡಿಕೊಳ್ಳುತ್ತೀರಿ. ಏಕೆಂದರೆ, ತಮ್ಮ ಮುಖಂಡತ್ವದಲ್ಲಿ ತಮ್ಮ ಕ್ಯಾಬಿನೆಟ್ ಮಂತ್ರಿಗಳನ್ನು ರಕ್ಷಣೆ ಮಾಡುವುದರಲ್ಲಿ ತಾವು ಸಮರ್ಥರಿದ್ದೀರಿ.'' ಎಂದು ಹೇಳಿದ್ದಾರೆ. ನಮ್ಮ ಸಭಾನಾಯಕರಿಗೆ ಈ ಮಾತನ್ನು ಹೇಳುತ್ತಿದ್ದೇನೆ. ಏಕೆಂದರೆ ವಿರೋಧಪಕ್ಷದ ನಾಯಕರು ಹೇಳಿದ ಆಗಿನ ಮಾತುಗಳನ್ನು ಮತ್ತೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅವರು ಎರಡುಮೂರು ಮಾತುಗಳನ್ನು ಹೇಳಿದ್ದಾರೆ. ಅದೇನೆಂದರೆ ''ಹಿಂದೆ ಮಾನ್ಯ ದೇವರಾಜ್ ಅರಸ್‌ರವರು, ನಿಜಲಿಂಗಪ್ಪನವರು, ವೀರೇಂದ್ರ ಪಾಟೀಲ್‌ರವರು ಅವರ ಆಡಳಿತವನ್ನು ತಾವು ನೋಡಿದ್ದೀರಿ. ಆ ಕಾಲದಲ್ಲಿ ಏನಾದರೂ ಆಪಾದನೆಗಳು ಬಂದರೆ ತಕ್ಷಣ ಕ್ರಮವನ್ನು ತೆಗದುಕೊಂಡಿರತಕ್ಕ ಉದಾಹರಣೆಗಳು ಇವೆ. ಶ್ರೀಮತಿ ರೇಣುಕಾರಾಜೇಂದ್ರ, ಮಾನ್ಯ ಆರ್.ಡಿ.ಕಿತ್ತೂರು, ಹಾಗೂ ದೇವೇಂದ್ರಪ್ಪಬಾಳಪ್ಪ ಅವರ ಉದಾಹರಣೆಗಳನ್ನು ಕೊಟ್ಟಿದ್ದಾರೆ. ''ಅದರ ಜೊತೆಯಲ್ಲಿ ಕಡೆಯಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಶಿರಾದ ಇನ್ಸಿಡೆಂಟ್ ಮೇಲೆ ಈ ಒಂದು ಮಾತನ್ನು ಹೇಳಿದ್ದಾರೆ. ''ಈ ಸರ್ಕಾರ ಒಂದು ದಿಕ್ಕಿನಲ್ಲಿ ಸಂಪೂರ್ಣವಾಗಿ ಆಡಳಿತ ನಡೆಸುವುದರಲ್ಲಿ ವಿಫಲವಾಗಿದೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಈವೊಂದು ಕಾರಣಕ್ಕಾದರೂ ತಾವು ದಯವಿಟ್ಟು ರಾಜೀನಾಮೆಯನ್ನು ಕೊಡಬೇಕೆಂದು ಹೇಳಿದ್ದಾರೆ.'' ಆಗ ಏನು ಶಿರಾದಲ್ಲಿ ಗೋಲಿಬಾರ್ ಆಯಿತು ಅದರ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈಗಿನ ಗೃಹಮಂತ್ರಿಗಳು ಅವರು ಮಾಡಿದಂತಹ ಆಪಾದನೆಯನ್ನು ಅನುಸರಿಸುತ್ತೀರೋ ಬಿಡುತ್ತೀರೋ ಅದು ಅವರಿಗೆ ಸೇರಿದಂತಹ ವಿಷಯವೆಂದು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದಿವಂಗತ ವೀರೇಂದ್ರಪಾಟೀಲರು ಹನ್ನೊಂದುವರೆ ತಿಂಗಳು ಮುಖ್ಯಮಂತ್ರಿಯಾಗಿ ಸರ್ಕಾರ ನಡೆಸಿದ್ದಾರೆ. ಅವರನ್ನು ನಾವೆಲ್ಲರೂ ಪ್ರಶಂಸಿಸಬೇಕು. ಅಂತಹ ಒಂದು ಆಡಳಿತವನ್ನು ಕೊಟ್ಟರು. ಆಗ ಮತೀಯ ಗಲಭೆಗಳಾದಾಗ ಅವರನ್ನು ಮುಖ್ಯಮಂತ್ರಿಸ್ಥಾನದಿಂದ ತೆಗೆದರು. ಇವತ್ತು ಅದೇ ದಿಕ್ಕಿನಲ್ಲಿ ಮಾನ್ಯ ಎಸ್.ಎಂ.ಕೃಷ್ಣಾರವರು ಮುಖ್ಯಮಂತ್ರಿಗಳಾಗಿ ಇನ್ನು ಆರೇಳು ತಿಂಗಳು ಆಗಿಲ್ಲ. ಅವರನ್ನು ಮುಖ್ಯ ಮಂತ್ರಿ ಸ್ಥಾನದಿಂದ ತೆಗೆಯುವಂತಹ ಕೆಲಸ ಇಂಥಿಂಥ ಕೃತ್ಯಗಳ ಮೂಲಕ ನಡೆಯುತ್ತದೆ ಎನ್ನುವ ಭಾವನೆ ನನ್ನಲ್ಲಿದೆಯೆಂದು ಈ ಸಮಯದಲ್ಲಿ ಹೇಳುತ್ತೇನೆ. ಇವತ್ತು ಕೋಲಾರದಲ್ಲಿ ಯುಟಿ ಕೇಸಸ್ ಇವೆ. ಬಹಳ ಹಳ್ಳಿಗಳಲ್ಲಿ ಯುಟಿ ಕೇಸಸ್‌ಗಳಿವೆ. ಊರಿನಲ್ಲಿರುವುದು ರಾಮೇಗೌಡ ಮತ್ತು ತಿಮ್ಮೇಗೌಡರ ಇಬ್ಬರ

ಜಗಳ. ದಲಿತರನ್ನು ಉಪಯೋಗಿಸಿಕೊಂಡು ನೂರಕ್ಕೆ ತೊಂಭತ್ತು ಭಾಗ ಬರೀ ರಾಮೇಗೌಡ ಮತ್ತು ತಿಮ್ಮೇಗೌಡರ ಜಗಳ. ದಲಿತರದು ಏನೂ ಇಲ್ಲ. ನೂರಕ್ಕೆ ನೂರರಷ್ಟು ಯುಟ ಕೇಸುಗಳು ಬಿದ್ದಿವೆ. ಇದರ ಬಗ್ಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಹಳ ಶ್ರಮವಹಿಸಿ ಇದನ್ನು ನಿಲ್ಲಿಸಬೇಕು. ಇದರ ಬಗ್ಗೆ ಅವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಚೌಡರೆಡ್ಡಿಯವರು ಮತ್ತು ಸಂಬಂಧಪಟ್ಟ ಮಂತ್ರಿಗಳು ಒಂದು ವಿಷಯ ಹೇಳಿದರು. ಈ ಸುಬ್ಬುಲಕ್ಷ್ಮಿ ಎನ್ನುವವರನ್ನು ವಸ್ತ್ರಾಪಹರಣ ಮಾಡಿದ್ದಕ್ಕೆ ತಾವು ಗಲಾಟೆ ಮಾಡಿದ ಮೇಲೆ ಸರ್ಕಲ್ ಇನ್‌ಸ್ಪೆಕ್ಟರ್ ಅವರು ಅವರ ಮೇಲೆ ಕಾನೂನಿನ ಕ್ರಮ ಜರುಗಿಸಿದರು ಎಂದರೆ ಇದು ನಿಜವಾಗಿಯೂ ನಾಚಿಕೆಗೇಡು. ಹೆಣ್ಣುಮಕ್ಕಳಿಗೆ ಇವತ್ತು ನಾವು 33 ಪರ್ಸೆಂಟ್ ಪ್ರಾತಿನಿಧ್ಯ ಕೊಡಬೇಕೆಂದು ಒತ್ತು ಕೊಡತಕ್ಕಂಥ ಸಂದರ್ಭದಲ್ಲಿ ಕೂಡ ಈ ಪರಿಸ್ಥಿತಿ ಒಬ್ಬ ಶಾಸಕರಿಗೆ ಆದರೆ ಇನ್ನು ಸಾಮಾನ್ಯ ಮನುಷ್ಯರಿಗೆ ಎಷ್ಟು ಆಗಬಹುದು ಎಂದು ಈ ಸಮಯದಲ್ಲಿ ಹೇಳಿ, ಇವತ್ತು ಮಾನ್ಯ ಖರ್ಗೆಯವರು ವಿರೋಧಪಕ್ಷದ ನಾಯಕರಾಗಿದ್ದಾಗ ಹೇಳಿದಹಾಗೆ ಅದೇತರಹ ತೀರ್ಮಾನ ತೆಗೆದುಕೊಳ್ಳುತ್ತಾರೋ ಅಥವಾ ಬೇರೆ ವಿಷಯ ಹೇಳುತ್ತಾರೋ, ಎನ್ನುವುದು ಅವರಿಗೇ ಬಿಟ್ಟಂಥ ವಿಷಯ ಎಂದು ಹೇಳಿ ನಮ್ಮ ನಾಯಕರು ಹೇಳಿದಹಾಗೆ ಸಿ.ಬಿ.ಐ. ಎನ್‌ಕ್ವೈರಿ ಆಗಬೇಕೆಂದು ನಾನು ಮತ್ತೊಮ್ಮೆ ಹೇಳಿ ಅವರ ಏನು ಕದಡಿದ ಮನಸ್ಸುಗಳನ್ನು ನಾವು ಒಗ್ಗೂಡಿಸುವ ಕೆಲಸ ಎಲ್ಲ ರಾಜಕಾರಣಿಗಳು, ರಾಜಕೀಯ ಪಕ್ಷಗಳು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

+ ಶ್ರೀ ಬಿ.ಎನ್.ಬಚ್ಚೇಗೌಡ (ಹೊಸಕೋಟೆ): ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸಭಾನಾಯಕರು ಈ ಒಂದು ನಿಲುವಳಿ ಸೂಚನೆಗೆ ಒಪ್ಪಿಗೆ ಕೊಟ್ಟು ಬೆಳಿಗ್ಗೆಯಿಂದ ಚರ್ಚೆಯಾಗುತ್ತಿದೆ. ಇದರ ಬಗ್ಗೆ ಚಿಂತಾಮಣಿಯ ಕಂಬಾಲಪಲ್ಲಿಯಲ್ಲಿ ಆದಂಥ ಈ ದುರ್ಘಟನೆ ಅಥವಾ ಈ ಬರ್ಬರ ಅಥವಾ ಹೀನಕೃತ್ಯ ಏನಿದೆ, ಇದು ನರಮೇಧವೆಂದು ಕರೆಯುವಂಥಾದ್ದು ನಾಗರಿಕ ಸಮಾಜದಲ್ಲಿ ತಲೆತಗ್ಗಿಸಬೇಕಾದಂಥ ಕೃತ್ಯ ಸ್ವಾಮಿ. ಇಂತಹ ಘಟನೆಗಳನ್ನು ನಾವು ಉತ್ತರ ಭಾರತದಲ್ಲಿ ಕಂಡಿದ್ದೆವು, ಕೇಳಿದ್ದೆವು. ಇದೇ ರೀತಿ ಪಕ್ಕದ ಆಂಧ್ರಪ್ರದೇಶದಲ್ಲಿ ಆಗಿರುವುದನ್ನು ಕೇಳಿದ್ದೆವು. ಇದೇ ಮೊದಲಬಾರಿಗೆ ಏಳು ಜನ ದಲಿತರ ನರಮೇಧ ಜೊತೆಗೆ ಒಬ್ಬ ಸವರ್ಣೀಯರ ಕೊಲೆ ಏನು ನಡೆದಿದೆ ಇದರ ಹಿನ್ನಲೆ, ಕಾರಣ ಏನು ಎನ್ನುವುದರ ಬಗ್ಗೆ ಸಾಕಷ್ಟು ಬೆಳಕನ್ನು ಸದನದಲ್ಲಿ ಚೆಲ್ಲಿದ್ದಾರೆ. ಪೊಲೀಸಿನವರ ನಿಷ್ಕ್ರಿಯೆ ಅಥವಾ ಅವರು ಸಮಯಕ್ಕೆ ಅನುಗುಣವಾಗಿ ತೆದುಕೊಳ್ಳಬೇಕಾದ ಪ್ರಜ್ಞೆಯನ್ನು ತೆಗೆದುಕೊಳ್ಳದೇ ಇರುವುದು ಇದಕ್ಕೆ ಕಾರಣ. ಹಿಂದಿನವರ್ಷ ಒಂದು ಘಟನೆಯಾದಮೇಲೆ ಸವರ್ಣೀಯರಿಗೂ ಮತ್ತು ಇದ್ದಂಥ ದಲಿತರಿಗೂ ಇದ್ದಂಥ ಘರ್ಷಣೆ, ಅಥವಾ ಜಾತಿದ್ವೇಷ ಅಥವಾ ಜಾತಿ

ವೈಷಮ್ಯ ಏನಿತ್ತು ಅದರ ಬಗ್ಗೆ ಕ್ರಮ ತೆಗೆದುಕೊಳ್ಳದೆ ಉದಾಸೀನ ಮಾಡಿದಂಥಾದ್ದು ಮತ್ತು ಈಗಾಗಲೇ ಮಾನ್ಯ ಚೌಡಾರೆಡ್ಡಿಯವರು ಈಗಾಗಲೇ ತಿಳಿಸಿದಹಾಗೆ ಅಲ್ಲಿ ಇದ್ದಂಥ ಸಬ್‌ಇನ್‌ಸ್ಪೆಕ್ಟರ್ ಅವರ ಕರ್ತವ್ಯ ವಿಫಲತೆ ಆಗಿರತಕ್ಕಂಥಾದ್ದು ಇದಕ್ಕೆಲ್ಲ ಕಾರಣ. ಮಾನ್ಯ ಖರ್ಗೆಯವರು ಅಧಿಕಾರ ವಹಿಸಿಕೊಂಡು ಐದಾರು ತಿಂಗಳಾಗಿದೆ. ಅವರು ದಲಿತರ ಒಬ್ಬ ದೊಡ್ಡ ಮುಖಂಡರು. ಹಿಂದೆ ಅನೇಕ ಉತ್ತಮ ಪೋರ್ಟ್‌ಫೋಲಿಯೊ ಹೊಂದಿ ಸಚಿವರಾಗಿ ಕೆಲಸ ಮಾಡಿದ್ದಾರೆ. ಇಲ್ಲಿ ಅವರಿಗೆ ಮನಸ್ಸು ಇದೆಯೋ ಇಲ್ಲವೋ ಗೊತ್ತಿಲ್ಲ. ಅವರೇನಾದರೂ ಒತ್ತಡಕ್ಕೆ ಮಣಿದು ಹೀಗೆ ಆಗಿದೆಯೋ ನನಗೆ ಅರ್ಥವಾಗಿಲ್ಲ. ಸಾಕಷ್ಟು ಪೊಲೀಸರನ್ನು ಮಾನ್ಯ ಸಿಂಧ್ಯಾರವರು ಹೇಳಿದಹಾಗೆ ಅವರು ಹಿಡಿತಕ್ಕೆ ತೆಗೆದುಕೊಂಡಿಲ್ಲ. ಇಲ್ಲಿ ವಿಪರೀತ ಹಸ್ತಕ್ಷೇಪ ನಡೆದಿದೆ. 'ನಮ್ಮದು ಸರ್ಕಾರ ಇದೆ, ನಮ್ಮದು ಸರ್ಕಾರ ಇದೆ' ಎಂದು ಹೇಳಿಕೊಂಡು ಸಾಕಷ್ಟು ಶಾಸಕರುಗಳ ಹಸ್ತಕ್ಷೇಪ ಆಗಿ ಇವತ್ತು ಇಂತಹ ಸಬ್‌ಇನ್‌ಸ್ಪೆಕ್ಟರ್‌ನ್ನು ಆ ಸ್ಟೇಶನ್‌ನಲ್ಲಿ ಹಾಕಿ ಇವರು ಬಚ್ಚೇಗೌಡರ ಕಡೆ ಇರುವ ಸಬ್ ಇನ್‌ಸ್ಪೆಕ್ಟರ್ ಅಥವಾ ಇವರು ಬಚ್ಚೇಗೌಡರ ಕಡೆ ಇರುವ ಸರ್ಕಲ್ ಇನ್‌ಸ್ಪೆಕ್ಟರ್ ಎಂದು ಹೇಳಿ ಇವರನ್ನು ತೆಗೆಯಬೇಕು, ಅವರನ್ನು ತೆಗೆಯಬೇಕು ಎಂದು ಹೇಳಿ ಎಲ್ಲ ಶಾಸಕರುಗಳ ಕ್ಷೇತ್ರಗಳಲ್ಲಿ ಇವತ್ತು ಹಸ್ತಕ್ಷೇಪ ನಡೆಯುತ್ತಿದೆ. ಆದ್ದರಿಂದಲೇ ಈ ವ್ಯವಸ್ಥೆ ಬಲಗುಂದಿದೆ ಇಲಾಖೆಯಲ್ಲಿ ಹೆಚ್ಚು ಪ್ರಮಾಣದಲ್ಲಿ ಹಸ್ತಕ್ಷೇಪ ನಾವು ಮಾಡಿರುವುದರಿಂದ ಇವತ್ತು ಇಲಾಖೆಯಲ್ಲಿ ಒಂದು ಧೈರ್ಯ ಕೊಡುವಂಥ, ಸ್ಥೈರ್ಯ ಕೊಡುವಂಥ ಕೆಲಸ ಆಗದೆ ವಿಫಲತೆಯುಂಟಾಗಿದೆ. ಅದಕ್ಕೇ ಈ ದೇಶದಲ್ಲಿ ಕಳೆದ ಆರು ತಿಂಗಳಿಂದ ನೋಡುತ್ತಿದ್ದೇವೆ. ಎಲ್ಲಿ ನೋಡಿದರೂ ಕೊಲೆ, ಸುಲಿಗೆ ಎಲ್ಲಿ ನೋಡಿದರೂ ದರೋಡೆ ನಡೆಯುತ್ತಿದೆ. ದರೋಡೆಯಂತೂ ದಿನನಿತ್ಯದ ಕೆಲಸವಾಗಿ ಬಿಟ್ಟಿದೆ. ಈಗ AntiDacoiti squad ಇದೆ. ಅವರು ಡಕಾಯಿತರನ್ನು ಹಿಡಿದದ್ದು ನಾವು ಕೇಳಿಲ್ಲ. ಏನೋ ಜನರೇ ಹಿಡಿದು ಕೊಟ್ಟರೆ ಅದು ಇವರೇ ಹಿಡಿದುಬಿಟ್ಟರು ಎಂದು ತಿಳಿಯಬೇಕು AntiDacoiti squad ಏನು ಮಾಡುತ್ತಾ ಇದೆ ಮತ್ತು ನಕ್ಸಲೈಟ್ಸ್‌ನವರ ಪ್ರಭಾವ ಇವತ್ತು ಏನು ಆಗುತ್ತಾ ಇದೆ. ಇತ್ತೀಚೆಗೆ ಪಾವಗಡದಲ್ಲಿ ನೋಡಿದ್ದೇವೆ. ಪಂಚಾಯತಿ ಸದಸ್ಯರನ್ನು ಬಾಂಬ್‌ಹಾಕಿ ಅಪಹರಣ ಮಾಡಿದ್ದಾರೆ. ಮತ್ತು ಬಾಗೇಪಲ್ಲಿಯಲ್ಲಿ, ಸಾತಪಲ್ಲಿಯಲ್ಲಿ ಗುಡಿಸಲುಗಳನ್ನು ಸುಟ್ಟಿದ್ದಾರೆ. ಕಂಬಾಲಪಲ್ಲಿಯಂತೆ ಪಕ್ಕದ ತಾಲ್ಲೂಕು ಬಾಗೇಪಲ್ಲಿಯಲ್ಲೂ ಕೂಡ ಹರಿಜನರು, ದಲಿತರ ಗುಡಿಸಲುಗಳನ್ನು ಸುಡುವಂಥ ಕೆಲಸವಾಗಿದೆ. ಹೀಗೆ ಪ್ರತಿನಿತ್ಯ ಕೊಲೆ, ಸುಲಿಗೆ, ದರೋಡೆ ನಡೆಯುತ್ತಿದೆ. ಜೊತೆಗೆ ಮೊನ್ನೆ ಡಿ.ಎಸ್.ಎಸ್. ಕಾರ್ಯಕರ್ತ ಹೊಗಲೂರು ನಾಗರಾಜ್ ಎನ್ನುವವನ ಮೇಲೆ ಹಲ್ಲೆ ಮಾಡಿ ಅವನು ತೀರಿಹೋದ ಎನ್ನುವಂಥಾದ್ದು. ಇದರಬಗ್ಗೆ ನಾರಾಯಣಸ್ವಾಮಿ ಮತ್ತು ಸೋಮಶೇಖರ್ ಅವರು ಮಾತನಾಡಿದರು. ಮತ್ತು ಮಣಿ ಎನ್ನುವವನನ್ನು ಕುಮಾರಸ್ವಾಮಿ ಬಡಾವಣೆಯಲ್ಲಿ ಹೊಯ್ಸಳ ವ್ಯಾನ್‌ನಲ್ಲಿ

ತೆಗೆದುಕೊಂಡು ಬಂದಂಥ ಪರಿಸ್ಥಿತಿಯಲ್ಲಿ ಆತ ಲಾಕಪ್‌ನಲ್ಲಿ ಸತ್ತು ಹೋದರೆ ಬಾಡಿಯನ್ನು ತೆಗೆದುಕೊಂಡುಹೋಗಿ ಪೋಸ್ಟ್‌ಮಾರ್ಟಮ್ ಮಾಡಿರುವಂಥಾದ್ದು ಅದು ಲಾಕ್‌ಅಪ್ ಡೆತ್ ಕೇಸ್ ಆಗುತ್ತದೆ. ಮತ್ತೆ ವ್ಯಕ್ತಿಗಳನ್ನು ಅಪಹರಣ ಮಾಡುವುದು, ಇದು ಕೂಡ ಶುರುವಾಗಿದೆ. ಇವತ್ತು ನಾವು ನೋಡುತ್ತಿದ್ದೇವೆ; ಭೂಗತ ದೊರೆಗಳ ಕಾರ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗುತ್ತಿರುವುದನ್ನು ಮಾನ್ಯ ಅಸ್ನೋಟಕರ್ ಅವರ ಕೊಲೆಗೆ ಸಂಬಂಧಪಟ್ಟಹಾಗೆ ಚರ್ಚೆಯನ್ನು ಸೋಮವಾರ ತೆಗೆದುಕೊಂಡಿದ್ದೇವೆ, ಅವತ್ತು ನಾನು ಅದರ ಬಗ್ಗೆ ಮಾತನಾಡುತ್ತೇನೆ. ಇವತ್ತು ಉಡುಪಿಯಲ್ಲಿ ಮಾನ್ಯ ಸಭಾಪತಿಯವರ ಕ್ಷೇತ್ರದಲ್ಲಿ ರೌಡಿರೌಡಿಗಳು ಜಗಳವಾಡಿ ಅಲ್ಲಿ ಕೊಲೆಗಳು ಆಗತಕ್ಕಂಥಾದ್ದು ದಿನನಿತ್ಯ ಜಾಸ್ತಿಯಾಗುತ್ತಿದೆ. ಇದನ್ನು ನಿಯಂತ್ರಣ ಮಾಡಬೇಕು. 'ಮಾನ್ಯ ಖರ್ಗೆಯವರು ಹಿರಿಯ ಸಚಿವರಿದ್ದಾರೆ. ಇವತ್ತು ದಲಿತರ ಜೊತೆಗೆ ಶ್ರೀಸಾಮಾನ್ಯನಿಗೆ ಅಥವಾ ನಾಗರಿಕರಿಗೆ ರಕ್ಷಣೆ ಕೊಡುವುದರಲ್ಲಿ ವಿಫಲರಾದರೆ ಸರ್ಕಾರ ಸಂಪೂರ್ಣವಾಗಿ ವಿಫಲವಾದಹಾಗೆ. ಇವತ್ತುಮಾನ್ಯ ಸಭಾನಾಯಕರು ಇದ್ದಾರೆ, ಮಾನ್ಯ ಖರ್ಗೆಯವರೂ ಇದ್ದಾರೆ. ಇದರ ಬಗ್ಗೆ ತೀವ್ರ ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕು. ಇವತ್ತು ನನ್ನ ಕ್ಷೇತ್ರಕ್ಕೆ ಮಾನ್ಯ ಘೋರ್ಪಡೆಯವರು ದಯಮಾಡಿ ಬರಬೇಕು. ನನ್ನ ಕ್ಷೇತ್ರದಲ್ಲಿ ಪಂಚಾಯಿತಿ ಚುನಾವಣೆಯಾಯಿತು. ಒಂಬತ್ತು ಕ್ಷೇತ್ರಗಳಲ್ಲಿ 150 ಜನ ಅವಿರೋಧವಾಗಿ ಆಯ್ಕೆಯಾದರು. ಇದಕ್ಕೆ ಏನು ಕತೆ ಕಟ್ಟಿದರು ಎಂದರೆ, ಮಾನ್ಯ ಸಚಿವರಾದ ಶ್ರೀ ಎ.ಕೃಷ್ಣಪ್ಪನವರು ಇಲ್ಲಿ ಕುಳಿತಿದ್ದಾರೆ. ನಮ್ಮ ಹೊಸಕೋಟೆ ತಾಲ್ಲೂಕನ್ನು ** ನೋಡಿಕೊಳ್ಳುತ್ತೇವೆ ಎಂದು ಹೇಳಿಕೊಳ್ಳುವಂಥವರು. ನಾನು ಏನು ಮಾಡಿದೆ ಎಂದರೆ ಯಾರನ್ನೂ ಅರ್ಜಿ ಹಾಕಲಿಕ್ಕೆ ಬಿಡದೆ ನಿಲ್ಲಿಸಿ ನಾವು ಒಂಬತ್ತು ಪಂಚಾಯಿತಿಗಳಲ್ಲಿ 150 ಸ್ಥಾನ ಗೆದ್ದುಬಿಟ್ಟೆವು. ಅಂತ ಹೇಳಿ ಸಾಕಷ್ಟು ಅಲ್ಲಿರುವ ತಹಸೀಲ್ದಾರರಿಗೆ ಹೇಳಿ ದಿನನಿತ್ಯ ಫೋನ್ ಮಾಡುವುದು, ಸರ್ಕಾರ ನಮ್ಮದು ಇದೆ, ಶಾಸಕರು ನಾಲ್ಕನೇ ಬಾರಿಗೆ ಆರಿಸಿ ಬಂದಿದ್ದಾರೆ, ಅವರು ಹೇಳಿದ್ದು ಮಾಡಿ. ಎಂದು ಹೇಳಿ voter's listನಲ್ಲಿ ದಿನನಿತ್ಯ ಸೇರಿಸುವಂಥಾದ್ದು ಇದೆಯಲ್ಲ...

ಅಧ್ಯಕ್ಷರು: ಗೌಡರೇ, ಒಂದು ನಿಮಿಷ. ಪಂಚಾಯಿತಿ ಚುನಾವಣೆಗೂ ಇದಕ್ಕೂ ಏನು ಸಂಬಂಧ ಇದೆ?

ಶ್ರೀ ಬಿ.ಎನ್.ಬಚ್ಚೇಗೌಡ: ಕಾನೂನು ಸುವ್ಯವಸ್ಥೆ ಏನಾಗಿದೆ ಎನ್ನುವುದಕ್ಕೆ ನಾನು ಹೇಳುತ್ತಿದ್ದೇನೆ.

(ಗೊಂದಲ)

** ಈ ಪದಗಳನ್ನು ಅಧ್ಯಕ್ಷರು ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿ): ಇದು ನಿಲುವಳಿ ಸೂಚನೆ. ಮಾನ್ಯ ಸಿಂಧ್ಯರವರು ಹೇಳಿದಂತೆ ಗಂಭೀರವಾಗಿ ಇದನ್ನು ನಾವು ಚಿಂತನೆ ಮಾಡಬೇಕು, ಚಿಂತಾಮಣಿಯ ಉದ್ವಿಘ್ನ ಪರಿಸ್ಥಿತಿಯನ್ನು ತಿಳಿಗೊಳಿಸುವ ಪ್ರಯತ್ನ ಮಾಡಬೇಕು ಎನ್ನತಕ್ಕದ್ದು ಒಟ್ಟಾರೆ ಸದನದ ಅಭಿಪ್ರಾಯ. ಈಗ ಚಿಂತಾಮಣಿಗೂ, ಹೊಸಕೋಟೆಗೂ ಎಷ್ಟು ದೂರ, ಏನು ಕತೆ? ಮಾನ್ಯ ಸಿಂಧ್ಯಾರವರು, ಮಾನ್ಯ ಬೈರೇಗೌಡರೂ ಒಪ್ಪಿದರೆ ನಾನು ಒಪ್ಪಿ ಕುಳಿತುಕೊಳ್ಳುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಸಭಾನಾಯಕರೇ, ನಾನು ಮಾತನಾಡುವುದಿಲ್ಲ.

ಅಧ್ಯಕ್ಷರು: ಹಾಗಲ್ಲ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುವ ಸಮಯದಲ್ಲಿ ನೀವು ಅದೆಲ್ಲ ಮಾತನಾಡಿ.

ಶ್ರೀ ಬಿ.ಎನ್.ಬಚ್ಚೇಗೌಡ: ನಾನು ವಿಷಯದ ಗಂಭೀರತೆಯನ್ನು ಡೈಲ್ಯೂಟ್ ಮಾಡುತ್ತಿಲ್ಲ.

ಶ್ರೀ ಎ.ಕೃಷ್ಣಪ್ಪ: ಒಂದು ನಿಮಿಷ. ನೀವು ಮಾತನಾಡಿದ್ದರಿಂದ ನಾನೂ ಮಾತನಾಡಬೇಕಾಗುತ್ತದೆ. ನೀವು ಮಾತನಾಡುವಾಗ ನನ್ನ ಹೆಸರನ್ನು ಹೇಳಿದ್ದಕ್ಕಾಗಿ ನಾನು ಉತ್ತರ ಕೊಡಲೇಬೇಕಾಗುತ್ತದೆ. ನೀವು ನನ್ನ ಹೆಸರನ್ನು ಹೇಳಿದ್ದೀರಿ.

ಶ್ರೀ ಬಿ.ಎನ್.ಬಚ್ಚೇಗೌಡ: ಸ್ವಾಮಿ ನಿಯಮ 329ರಲ್ಲಿ ನಾನು ನೋಟೀಸ್ ಕೊಡುತ್ತೇನೆ.

ಶ್ರೀ ಎ.ಕೃಷ್ಣಪ್ಪ: ಇಲ್ಲಿ ಅವರು ನಮ್ಮ ಹೆಸರನ್ನು ಗುರುತು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಅದಕ್ಕಾಗಿ ನನಗೆ ಉತ್ತರ ಕೊಡುವುದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು: ಮಾನ್ಯ ಶ್ರೀ ಎ.ಕೃಷ್ಣಪ್ಪನವರು ಹೊಸಕೋಟೆಯನ್ನು ದತ್ತುತೆಗೆದುಕೊಂಡಿದ್ದಾರೆ ಎನ್ನುವ ಪ್ರಶ್ನೆ ಇಲ್ಲಿ ಏಕೆ ಬರಬೇಕಿತ್ತು? ಅದು ಬರಬೇಕಾಗಿರಲಿಲ್ಲ.

ಶ್ರೀ ಎ.ಕೃಷ್ಣಪ್ಪ: ಅಧ್ಯಕ್ಷರೇ, ನನಗೆ ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು: ನೋಡಿ ಅವರು ಏನು ಹೇಳಿದ್ದಾರಲ್ಲ ದತ್ತು ತೆಗೆದುಕೊಂಡಿದ್ದಾರೆ ಎಂದು ಅದನ್ನು ಕಡತದಿಂದ ತೆಗೆಯಿರಿ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ನನಗೂ ಪ್ರೊಸೀಜರ್ ಗೊತ್ತಿದೆ.

ಅಧ್ಯಕ್ಷರು: ಅದು ಮುಗಿಯಿತು ಬಿಡಿ.

ಶ್ರೀ ಬಿ.ಎನ್.ಬಚ್ಚೇಗೌಡ: ಅವರು ಮಾಡಿದ ಅನಾಹುತಗಳೇನು ಅಂತ ಸ್ವಲ್ಪ ಚರ್ಚೆ ಮಾಡೋಣ.

ಶ್ರೀ ಎ.ಕೃಷ್ಣಪ್ಪ: ನಿಮ್ಮಷ್ಟು ಅನಾಹುತವನ್ನು ಏನೂ ಮಾಡುವುದಕ್ಕೆ ನಾವು ಹೋಗಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ:ನಾನು ನೋಟೀಸ್ ಕೊಡುತ್ತೇನೆ. ಅವರು ಅದಕ್ಕೆ ರಿಪ್ಲೈ ಕೊಡಲಿ.

ಶ್ರೀ ಪಿ.ಮುನಿಯಪ್ಪ: ಒಂದು ವಿಚಾರ. ಅವರವರು ತಮ್ಮ ಆತ್ಮ ಮುಟ್ಟಿ ಹೇಳಲಿ. ಅಧಿಕಾರ ಇದ್ದಾಗ ಯಾರ್ಯಾರು ಎಷ್ಟೆಷ್ಟು ಇನ್ವಾಲ್ವ್ ಆಗಿದ್ದರು ಎಂಬುದು ದಯವಿಟ್ಟು ಅವರ ಆತ್ಮ ಮುಟ್ಟಿಕೊಂಡು ಮಾತನಾಡಬೇಕು. ಯಾರು ಯಾರು ಯಾವ ಯಾವ ಹಂತದಲ್ಲಿ ಅಧಿಕಾರವನ್ನು ದುರುಪಯೋಗ ಮಾಡಿದ್ದಾರೆ, ದಬ್ಬಾಳಿಕೆ ಮಾಡಿದ್ದಾರೆ, ಪಾಳೆಯಗಾರಿಕೆ ಮಾಡಿದ್ದಾರೆ ಎಂಬುದನ್ನು ಅವರ ಆತ್ಮ ಮುಟ್ಟಿ ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು: ಬಚ್ಚೇಗೌಡರೇ, ನೀವು ವಿಷಯಕ್ಕೆ ಬನ್ನಿ.

ಶ್ರೀ ಬಿ.ಎನ್.ಬಚ್ಚೇಗೌಡ: ಸರ್ಕಾರ ನಡೆಸುವ ಮಂತ್ರಿಗಳು ದಯವಿಟ್ಟು ಕೇಳಬೇಕು. ಮಾನ್ಯ ಮುನಿಯಪ್ಪನವರಾಗಲೀ, ಮಾನ್ಯ ಕೃಷ್ಣಪ್ಪನವರಾಗಲೀ, ನಮಗೂ ಪ್ರೊಸೀಜರ್ ಗೊತ್ತಿದೆ. ನಾನು ಅಲ್ಲಿದ್ದು ಕೆಲಸ ಮಾಡಿದವನು. I will give notice under sec.329. Let him reply to the notice.

ಅಧ್ಯಕ್ಷರು: ಆಗಲಿ, ವಿಷಯಕ್ಕೆ ಬನ್ನಿ.

ಶ್ರೀ ಬಿ.ಎನ್.ಬಚ್ಚೇಗೌಡ: ಸನ್ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಸಮಯ ಮಾತನಾಡದೆ ಒಂದು ಮಾತು ಹೇಳುತ್ತೇನೆ. ನಾವು ಐದು ವರ್ಷ ಆಡಳಿತ ಮಾಡಿದ್ದೆವು. ಯಾವತ್ತೂ ರಾಜ್ಯದಲ್ಲಿ ಇಂಥಾದ್ದಕ್ಕೆ ಅವಕಾಶ ಮಾಡಿಕೊಟ್ಟಿರಲಿಲ್ಲ. ಇಂತಹ ಒಂದು ದುರ್ಘಟನೆ ಆಗಿರಲಿಲ್ಲ. ಇದನ್ನು ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೇವೆ. ನಾವೂ ಐದು ವರ್ಷ ಸರ್ಕಾರ ನಡೆಸಿದ್ದೆವು....

(ಗೊಂದಲ)

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ನಿಮ್ಮ ಕಾಲದಲ್ಲೂ ಸಹ ನಡೆದಿದೆ.

ಶ್ರೀ ಎ.ಕೃಷ್ಣಪ್ಪ: ನಿಮ್ಮ ಕಾಲದಲ್ಲಿ ನಡೆದಿಲ್ಲವೇನು?

ಒಬ್ಬರು ಮಾನ್ಯ ಸದಸ್ಯರು: ರಾಮನಗರದಲ್ಲಿ ನೀವು ಪೊಲೀಸರಿಂದಲೇ ಗೋಲಿಬಾರ್ ಮಾಡಿಸಿದಿರಿ. ಜನರನ್ನು ನೀವು ಸಾಯಿಸಲಿಲ್ಲಾ?

ಶ್ರೀ ಬಿ.ಎನ್.ಬಚ್ಚೇಗೌಡ: ಸ್ವಾಮಿ, ನಾನು ಇದರಲ್ಲಿ ಇಷ್ಟೆ ಹೇಳುವುದು. ಪೋಲೀಸ್ ಇಲಾಖೆ ಈಗ ರಾಜ್ಯದಲ್ಲಿ ಡಿ-ಮಾರಲೈಸ್ ಆಗಿದೆ. ಇದರಿಂದ ಅವರು ನೈತಿಕತೆ ಕಳೆದುಕೊಂಡಿದ್ದಾರೆ. ಆ ನೈತಿಕತೆಯನ್ನು ತುಂಬುವಂಥ ಕಾರ್ಯ ಆಗಬೇಕು. ಅದರ ಜೊತೆಯಲ್ಲಿ ಇವತ್ತು ಸವರ್ಣೀಯರು ಮತ್ತು ದಲಿತರು ಇವರುಗಳ ನಡುವೆ ಆತಂಕಕಾರಿಯಾದ ಬೆಳವಣಿಗೆ ನಡೆಯುತ್ತಾ ಇದೆ. ಅದನ್ನು ಮಾನ್ಯ ಸದಸ್ಯರಾದ ಶ್ರೀನಿವಾಸಗೌಡರು ಹೇಳಿ ತಪ್ಪಿಸಬೇಕು. ಅವರಿಬ್ಬರ ನಡುವೆ ಸಾಮರಸ್ಯವನ್ನು ತರುವ ಕಾರ್ಯ ಆಗಬೇಕು. ಆತಂಕಕಾರಿಯಾಗಿ ಹೋಗುವಂಥ ಬೆಳವಣಿಗೆ ತಪ್ಪುವಂಥ ಕಾರ್ಯ ಆಗಬೇಕು. ಸಮಗ್ರವಾಗಿ ಕಂಬಾಲಪಲ್ಲಿಯಲ್ಲಿ ಆದಂತ ದುರಂತ ಮತ್ತು ಇತರ ಘಟನೆಗಳ ಬಗ್ಗೆ ನಾನು ಪ್ರಸ್ತಾಪ ಮಾಡಿದೆ. ಮಾನ್ಯ ಸಭಾ ನಾಯಕರು ಅದೊಂದಕ್ಕೆ ಕನ್‌ಫೈನ್ ಆಗಿ ಎಂದು ತಿಳಿಸಿದ್ದರಿಂದ, ಇದನ್ನು ಸಂಪೂರ್ಣ ಸಿ.ಬಿ.ಐ. ತನಿಖೆಗೆ ಒಳಪಡಿಸಬೇಕು ಮತ್ತು ಮಾನ್ಯ ಖರ್ಗೆಯವರ ರಾಜೀನಾಮೆ ಕೇಳುವುದಕ್ಕೆ ಹೋಗುವುದಿಲ್ಲ ಮತ್ತು ಸರ್ಕಾರ ರಾಜೀನಾಮೆ ಕೊಡಿ ಎಂದೂ ನಾನು ಹೇಳುವುದಿಲ್ಲ. ಅವರೇ ನೈತಿಕವಾಗಿ ಆ ಹೊಣೆಗಾರಿಕೆಯನ್ನು ತೆಗೆದುಕೊಂಡು ಮಾಡುವುದಾದರೆ ಆಗಬಹುದು. ಇಷ್ಟು ತಿಳಿಸಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ): ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಎಲ್ಲಾ ನಾಯಕರೂ ಮಾತನಾಡಿದ್ದಾರೆ. ಅವರು ಮಾತನಾಡಿರತಕ್ಕ ವಿಷಯಗಳನ್ನು ಮತ್ತೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಶಾಸಕಮಿತ್ರರು ಕೆಲವರು ಇದಕ್ಕೆ ಏನು ಮಾಡಬೇಕು, ಸಲಹೆ ಹೇಳಿ ಎಂದರು. ಇದು ಮುಂದೆ ಆಗದಂತೆ ನೋಡಿಕೊಳ್ಳಬೇಕು. ಇವತ್ತು ಸತ್ತವರು ಮತ್ತೆ ಬರುವುದಿಲ್ಲ. ಇವತ್ತು ಅವರ ಕುಟುಂಬಗಳಿಗೆ ಒಂದು ಲಕ್ಷ ಕೊಟ್ಟೆವು, ಅಲ್ಲಿ ಹೋಗಿ ಅವರ ಜೊತೆಯಲ್ಲಿ ಮಾತನಾಡಿದೆವು ಎಂದರೂ ಕೂಡ ಆದದ್ದು ಆಗಿಹೋಗಿದೆ. ಆದರೆ, ಆಗದ ಹಾಗೆ ನೋಡಿಕೊಳ್ಳತಕ್ಕಂಥದಕ್ಕೆ ಏನು ಮಾಡಬೇಕೆಂಬುದು ಕೂಡ ಇವತ್ತು ನಮ್ಮ ಮುಂದಿರತಕ್ಕ ಸಮಸ್ಯೆ. ನಮ್ಮ ನಾಯಕರು ಮಾತನಾಡುವಾಗ ಬಹಶಃ ಕಾಂಗ್ರೆಸ್ ಸರ್ಕಾರ ಬಂದಮೇಲೆ ಈ ದಾಂಧಲೆ ಜಾಸ್ತಿಯಾಗುತ್ತಾ ಇದೆ ಎಂದು ಹೇಳಿದರು ಇದಕ್ಕೆ ಕಾರಣಗಳೇನು? ಇದಕ್ಕೂ ಕೂಡ ನಾವು ಇವತ್ತು ಕಾರಣಗಳನ್ನು

ಹುಡುಕಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ವಿಷಯವನ್ನು ಬಿಟ್ಟು ಹೋದರೆ ಇದೇ ರೀತಿಯಾಗುವುದು.

ಶ್ರೀ ವಿಜಯಕುಮಾರಶೆಟ್ಟಿ: ಮಾನ್ಯ ಅಧ್ಯಕ್ಷರೇ, ಇಷ್ಟರವರೆಗೆ ಮಾತನಾಡಿದವರೆಲ್ಲಾ ರಾಜಕೀಯ ದುರುದ್ದೇಶದಿಂದ ಮಾತನಾಡಿದರೇ ಹೊರತು, ನಿಜವಾಗಿಯೂ ಆ ಘಟನೆ ಬಗೆ ಕಳಕಳಿಯಿಂದ ಒಬ್ಬರೂ ಮಾತನಾಡುತ್ತಿಲ್ಲ. ಅದಕ್ಕೆ ಬೇಕಾಗಿರತಕ್ಕ ಪರಿಹಾರ ಏನು ಮುಂದಕ್ಕೆ ಯಾವತರಹ ಪರಿಹಾರ ಕೈಗೊಳ್ಳಬೇಕೆಂಬ ಬಗ್ಗೆ ಯಾರೂ ಮಾತನಾಡುತ್ತಾ ಇಲ್ಲ. ಬರೀ ರಾಜಕೀಯ ದುರುದ್ದೇಶ, ರಾಜೀನಾಮೆ, ರಾಜೀನಾಮೆ ಎಂದು ಹೇಳುತ್ತಾರೆಯೇ ಹೊರತು ಇದರಿಂದ ನಿಜವಾಗಿಯೂ ಅವರಲ್ಲಿ ಇದರ ಬಗ್ಗೆ ಎಷ್ಟು ಕಳಕಳಿ ಇದೆಯೆಂದು ಅರ್ಥವಾಗುತ್ತದೆ..

(ಗೊಂದಲ)

ಅಧ್ಯಕ್ಷರು: ನೀವು ವಿಷಯದ ಮೇಲೆ ಮಾತನಾಡಿ. ವಿಷಯ ಬಿಟ್ಟುಹೋದರೆ ಇದೇ ರೀತಿ ಆಗುವುದು. ದಯವಿಟ್ಟು ವಿಷಯದ ಮೇಲೆ ಮಾತನಾಡಿ.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೆ ಕೇವಲ ರಾಜಕೀಯ ದುರುದ್ದೇಶದಿಂದ ಕಾಂಗ್ರೆಸ್, ಕಾಂಗ್ರೆಸ್ ಎಂದು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಮಾತನಾಡಿಕೊಂಡು ಹೊಗುತ್ತಿದ್ದಾರೆ. ಆದರೆ, ನಿಜವಾಗಿಯೂ ಏನು ಆಗಬೇಕು, ಮುಂದಕ್ಕೆ ಏನು ಮಾಡಬೇಕು ಎಂಬುದನ್ನು ಮಾತ್ರ ಯಾರೂ ಹೇಳುತ್ತಾ ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಮಾತು ಏಕೆ ಹೇಳುತ್ತೇನೆ ಎಂದರೆ, ಇವತ್ತು ನನ್ನದೇ ಉದಾಹರಣೆ ಹೇಳುತ್ತೇನೆ. ಬದಲಿಯವರನ್ನು ಹೇಳುವುದಿಲ್ಲ.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು: ಅವರು ಈಲ್ಡ್ ಆಗಿಲ್ಲ, ನೀವೇಕೆ ಮಾತನಾಡುತ್ತೀರಿ? ಅವರು ಯೀಲ್ಡ್ ಆದರೆ ನನ್ನದೇನೂ ಅಬ್ಜಕ್ಷನ್ ಇಲ್ಲ. ನೀವು ಏನಾದರೂ ಹೇಳಿದರೆ ಅದಕ್ಕೆ ಉತ್ತರ ಇವರು ಏನಾದರೂ ಹೇಳಿದರೆ ಅದಕ್ಕೆ ಉತ್ತರ, ಇದಕ್ಕೆ ಕೊನೆ ಎಲ್ಲಿ ಮೊದಲು ಎಲ್ಲಿ. ನೀಲಕಂಠಪ್ಪನವರೇ ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಆರ್.ನೀಲಕಂಠಪ್ಪ: ಈ ಎಲ್ಲಾ ಕಾರಣ ವಿರೋಧ ಪಕ್ಷದವರದೇ ಹೊರತು

ನಮ್ಮದಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಮುಂದೆ ಆಗದ ಹಾಗೆ ನೋಡಿಕೊಳ್ಳಬೇಕಾದರೆ ರಾಜ್ಯದಲ್ಲಿ ಸವರ್ಣೀಯರಿಗೆ ನ್ಯಾಯ ಹಚ್ಚುವುದನ್ನು ನಾವು ಕಡಿಮೆ ಮಾಡಬೇಕಾಗುತ್ತದೆ. ಅವರು ಯಾವುದೇ ಪಕ್ಷದವರು ಇರಲಿ. ಇವತ್ತು ನಾವು ನೋಡಿದ್ದೇವೆ. ಅಲ್ಲಲ್ಲಿ ಏನು ಮಾಡುತ್ತಾರೆಂದರೆ ಅಟ್ರಾಸಿಟಿ ಕಲಂನ್ನು ಉಪಯೋಗಿಸಿಕೊಂಡು, ಸುಮ್ಮನೇ ಯಾರೋ ಒಬ್ಬರು ಹರಿಜನರನ್ನು ಹಿಡಿದುಕೊಂಡು ಬಂದು, ಒಬ್ಬರ ಮೇಲೆ ಫಿರ್ಯಾದಿ ಕೊಟ್ಟು ಜೈಲಿಗೆ ಹಾಕಿಸುತ್ತಾರೆ. ಅವರು ಇರಬಹುದು, ನಾವು ಇರಬಹುದು. ಯಾರಿದ್ದರೂ ಇಂಥಾದ್ದನ್ನು ತಡೆ ಹಿಡಿಯಬೇಕು. ಇದನ್ನು ತಡೆಹಿಡಿಯಸಬೇಕು. ಈ ಅನ್ಯಾಯ ಹೋಗದೇ ಇದ್ದರೆ ಖಂಡಿತವಾಗಿಯೂ ಇದು ದಂಧೆಯಾಗುತ್ತದೆ. ರಾಜ್ಯದಲ್ಲಿ ಕ್ಷೋಭೆಯಾಗುತ್ತದೆ. ಇವತ್ತು ನಾನು ಇದನ್ನು ಏಕೆ ಹೇಳುತ್ತೇನೆ. ಎಂದರೆ ನಾನೇ ಜೈಲಿನಲ್ಲಿರಬೇಕಾಗಿತ್ತು, ಇವತ್ತು ಇಲ್ಲಿ ಬಂದು ನಿಂತಿದ್ದೇನೆ. ಹೋದವಾರ ನಮ್ಮಕ್ಷೇತ್ರದಲ್ಲಿ ಆದಂಥ ಘಟನೆಯನ್ನು ತಮ್ಮ ಮುಂದೆ ಇಡುತ್ತೇನೆ. ಅಧ್ಯಕ್ಷರೇ, ನಮ್ಮ ರಕ್ಷಣೆಗೆ ತಾವು ಬರಬೇಕಾಗುತ್ತದೆ. ಅಲ್ಲದೇ ವಿರೋಧ ಪಕ್ಷದವರ ರಕ್ಷಣೆಯನ್ನು ತಾವು ಮಾಡದೇ ಇನ್ಯಾರು ಮಾಡಬೇಕು? ಇವತ್ತು ನನ್ನದೇ ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಆದ ಘಟನೆಯನ್ನು ಹೇಳುತ್ತೇನೆ.

ಗೊಂದಲ

ಈ ತರಹ ಆದರೆ ಹೊಡೆದಾಟವಾಗುತ್ತದೆ. ಕಾನೂನು ವ್ಯವಸ್ಥೆ ಹದಗೆಡುತ್ತದೆ. ಒಬ್ಬ ಶಾಸಕರ ಮೇಲೆ ಆಗುತ್ತಿದೆ, ಕಾನೂನು ವ್ಯವಸ್ಥೆ ಬಗ್ಗೆ ಮಾತನಾಡುತ್ತಿದ್ದಾರೆ. ಚಿಂತಾಮಣಿ ಒಂದೇ ಅಲ್ಲ. ಈ ಕಾನೂನು ವ್ಯವಸ್ಥೆ ಮೇಲೆ ನಾನು ಮಾತನಾಡುತ್ತಿದ್ದೇನೆ. ಚಿಂತಾಮಣಿಯಲ್ಲಿ ಆದ ಹಾಗೆ, ಇವತ್ತು ನಮ್ಮ ಕ್ಷೇತ್ರದಲ್ಲಿಯೂ ಈ ಘಟನೆ ನಡೆದಿದೆ. ಇದು ಮರಕಳಿಸುವುದರಿಂದ ರಾಜ್ಯಾದ್ಯಂತ ಇದು ಆಗುತ್ತದೆ ಎಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಾ ಇದ್ದೇನೆ. ನಾನು ಕಾನೂನು ವ್ಯವಸ್ಥೆ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು: ತಾವು ವಿಷಯ ಬಿಟ್ಟು ಹೋದರೆ ಹೀಗೆಯೇ ಆಗುವುದು. ಇಲ್ಲಿರುವುದು ಚಿಂತಾಮಣಿ ವಿಷಯ ನೀವು ಬೇರೆ ಬೇರೆ ವಿಷಯ ಮಾತನಾಡಿಕೊಂಡು ಹೋದರೆ.

ಶ್ರೀ ಎಸ್.ಎಸ್.ಪಾಟೀಲ್: ಚಿಂತಾಮಣಿ ವಿಷಯ ಆಗಲಿಕ್ಕೆ ಇಂತಹ ಕಾರಣಗಳು ಎನ್ನುವುದಕ್ಕೆ ಈ ಎಲ್ಲಾ ಉದಾಹರಣೆಗಳನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು: ಬೇರೆಯವರೆಲ್ಲಾ ಮಾತನಾಡಿದ್ದಾರೆ, ನೀವು ರಿಪೀಟ್ ಮಾಡಬೇಡಿ. ನಿಮಗೆ ಕೊಟ್ಟಿರುವುದು 5 ನಿಮಿಷ, ಬೇಗನೆ ಮುಗಿಸಿಬೇಡಿ.

ಶ್ರೀ ಎಸ್.ಎಸ್.ಪಾಟೀಲ್: ನನ್ನಲ್ಲಿ ಆದಂಥ ಘಟನೆಯನ್ನು ಹೇಳುತ್ತಿದ್ದೇನೆ. ಪೋಲೀಸ್ ಸಿಬ್ಬಂದಿಯ ಮೇಲೆ ಯಾವರೀತಿಯ ಪ್ರಷರ್ ತರುತ್ತಾರೆ ಎನ್ನುವುದನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು: ರಾಜ್ಯಪಾಲರ ಭಾಷಣ ಬರುತ್ತೆ, ಆಗ ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್: ಹೋದವಾರ ನನ್ನ ಕ್ಷೇತ್ರದಲ್ಲಿ ಒಂದು ಘಟನೆ ನಡೆಯಿತು....

ಅಧ್ಯಕ್ಷರು: ಈ ವಿಚಾರವನ್ನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ...

ಶ್ರೀ ಎಸ್.ಎಸ್.ಪಾಟೀಲ್: ಸಭಾನಾಯಕರು ಮತ್ತು ತಮ್ಮ ಆದೇಶದ ಮೇರೆಗೆ ಈ ವಿಚಾರವನ್ನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತೇನೆ. ಇವತ್ತು ಏನಾಗಿದೆ ಎಂದರೆ, ಕೃಷ್ಣಾರೆಡ್ಡಿ ಎಂಬುವರ ಕೊಲೆಯಾಗಿದೆ. ಆ ಕೊಲೆಯಾಗುವುದಕ್ಕೆ ಕಾರಣರು ಯಾರು ಎಂಬುದನ್ನು ಮೊದಲು ಹುಡುಕಬೇಕಾಗುತ್ತದೆ. ಸುಮ್ಮನೆ ನಿರಪರಾಧಿಗಳ ಮೇಲೆ ಅದು ಹೋಗಿದೆ. ಈ ಕೊಲೆಗೆ ಯಾರು ಕಾರಣರು ಎಂಬುದನ್ನು ನಾವು ಹುಡುಕದೇ ಹೋದರೆ, ಖಂಡಿತವಾಗಿಯೂ ಇನ್ನಷ್ಟು ಬೆಳೆಯುತ್ತದೆ. ಈ ಕಾರಣದಿಂದ ಸನ್ಮಾನ್ಯ ಗೃಹಸಚಿವರನ್ನು ನಾನು ಕೇಳುತ್ತೇನೆ. ಮೊದಲನೆಯದಾಗಿ ಕೃಷ್ಣಾರೆಡ್ಡಿ ಕೊಲೆಯಾಗುವುದಕ್ಕೆ ಏನು ಕಾರಣ ಎಂಬುದನ್ನು ಹುಡುಕಿ ತೆಗೆಯಬೇಕು ಆಮೇಲೆ ಇವತ್ತು ಏಳು ಜನ ಅಮಾಯಕರು ಸತ್ತರು. ಒಬ್ಬರು ಅಪರಾಧ ಮಾಡಿದ್ದರೆ, ಇವತ್ತು ಏಳು ಜನ ಬೆಂಕಿಯಲ್ಲಿ ಸುಟ್ಟು ನಂದಿ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಯಿತು. ಆ ಕಾರಣದಿಂದ ನಾನೇನು ಹೇಳುತ್ತೇನೆಂದರೆ, ಇವತ್ತು ಹೆಚ್ಚು ಮಾತನಾಡುವುದಕ್ಕೆ ಟೈಮ್ ಇಲ್ಲ. ಬಹುಶಃ ನಮ್ಮ ಮುನಿಯಪ್ಪನವರು ಜಿಲ್ಲಾ ಪಾಲಕ ಮಂತ್ರಿಗಳು ಎಂದರೆ, ಆ ಜಿಲ್ಲೆಯ ಪಾಲನೆ ಮಾಡುವವರು. ಇವತ್ತು ಭೈರೇಗೌಡರೇನಾದರೂ ನಿಮ್ಮಜಾಗದಲ್ಲಿ ಇದ್ದರೆ ಅವರು ಎಷ್ಟು ಸಲ ರಾಜೀನಾಮೆ ಕೇಳುತ್ತಿದ್ದರೋ? ಇದರಲ್ಲಿ ಜಿಲ್ಲಾ ಪಾಲಕ ಸಚಿವರೂ ನೈತಿಕ ಹೊಣೆಯನ್ನು ಹೊರಬೇಕಾಗುತ್ತದೆ. ಏಕೋ ತಾವು ಕಲ್ಲುಕೂತಹಾಗೆ ಕುಳಿತುಬಿಟ್ಟಿದ್ದೀರಿ. ಮುಂದೆ ಉತ್ತರವನ್ನು ಕೊಡುತ್ತಾರೋ ಗೊತ್ತಿಲ್ಲ. ದಯಪಿಟ್ಟು ನಾನು ಹೇಳುತ್ತೇನೆ. ಇವತ್ತು ಎಷ್ಟು ಜವಾಬ್ದಾರಿ ಮಾನ್ಯ ಖರ್ಗೆಯವರ ಮೇಲಿದೆಯೋ ಅಷ್ಟೇ ಜವಾಬ್ದಾರಿ ಈ ಜಿಲ್ಲಾ ಉಸ್ತುವಾರಿ ಸಚಿವರ ಮೇಲೆಯೂ ಇದೆ. ತಮ್ಮನ್ನು ಆ ಜಿಲ್ಲೆಯ ಪಾಲಕ ಮಂತ್ರಿಗಳು ಎಂದು ಹೇಳುತ್ತಾರೆ. ಈ 5 ತಿಂಗಳಲ್ಲಿ ಇಂತಹ ಘಟನೆಗಳು ಆಗದಹಾಗೆ ನೋಡಿಕೊಂಡಿದ್ದರೆ, ಅದೂ ಕೂಡ ಇವತ್ತು

ನಿಲ್ಲಿಸುವುದಕ್ಕೆ ಸಾಧ್ಯವಿತ್ತು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ತಾವು ಇವತ್ತೇ ನಮ್ಮನ್ನು ರಾಜಿನಾಮೆ ಕೇಳುತ್ತಿದ್ದಿರಿ. ಆದರೆ, ನಿಮ್ಮನ್ನು ನಾವೇನೂ ರಾಜೀನಾಮೆ ಕೇಳುವುದಿಲ್ಲ. ನೀವೇ ನೈತಿಕ ಹೊಣೆ ಹೊತ್ತು ಕೊಟ್ಟರೆ ಕೊಡಿ, ಬಿಟ್ಟರೆ ಬಿಡಿ. ಮುಂದೆ ಏನಾಗುತ್ತದೋ ನೋಡೋಣ. ಆದರೆ, ಇವತ್ತು ನಾನು ಹೇಳುತ್ತಾ ಇರುವುದೇನೆಂದರೆ, ಇದು ಸಿ.ಬಿ.ಐ. ತನಿಖೆ ಆಗಬೇಕಾದ ಅವಶ್ಯಕತೆ ಇದೆ. ಇದನ್ನು ತನಿಖೆ ಮಾಡುವಂಥ, ಯೋಗ್ಯತೆ ಇರುವ ಪೋಲೀಸರು ನಮ್ಮಲ್ಲಿ ಇದ್ದಾರೆ. ಆದರೆ, ಅವರ ಮೇಲೆ ಹಸ್ತಕ್ಷೇಪ ಬರುವುದರಿಂದ, ಅವರಿಂದ ನಿಜವಾದ ತನಿಖೆಯಾಗುವುದಿಲ್ಲವೆಂದು ನಮ್ಮ ಭಾವನೆ. ಆ ಒಂದು ಹಿನ್ನೆಲೆಯಲ್ಲಿ ಇವತ್ತು ತಾವು ಸಿ.ಬಿ.ಐ.ತನಿಖೆಗೆ ಒಪ್ಪಿಕೊಳ್ಳಬೇಕು. ಅದರಿಂದ ಖಂಡಿತವಾಗಿಯೂ ನ್ಯಾಯದಾನ ಒದಗುತ್ತದೆಂದು ಹೇಳಿ, ಈ ರಾಜ್ಯದಲ್ಲಿ ಏಕೆ ಈ ಬಡಿದಾಟವಾಗುತ್ತವೆ ಎಂಬುದಕ್ಕೆ ಉದಾಹರಣೆಗಳನ್ನು ಹೇಳಬೇಕಾಗುತ್ತದೆ. ಆದರೆ ಈಗ ಟೈಮ್ ಇಲ್ಲ ಮುಂದೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳಿ ಎಂದು ಹೇಳಿದ್ದೀರಿ. ಆಗ, ಆ ವಿಷಯಗಳನ್ನೆಲ್ಲಾ ಮಾತನಾಡುತ್ತೇನೆ. ನಿಜವಾಗಿಯೂ ಇವತ್ತು ನಮ್ಮ ಶಾಸಕ ಮಿತ್ರರಾದಂಥ ಸೋಮಶೇಖರ್‌ರವರನ್ನು ನಾವು ಆದರ್ಶವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಹಿಂದೆ ನೀವು ರಾಜೀನಾಮೆ ಕೊಡಬೇಡಿ ಎಂದು ನಾವೆಲ್ಲರೂ ಹೇಳಿದೆವು. ಆದರೆ, ಅವರೇನು ಮಾಡಿದರು ನೈತಿಕ ಹೊಣೆ ಹೊತ್ತು, ನಾನು ಕಾಪಿ ಮಾಡಿದ್ದೇನೆಂದು ಹೇಳಿದ್ದಾರೆ, ಇದು ಸಿದ್ದವಾಗುವವರೆಗೆ ನಾನು ಇಲ್ಲಿರುವುದಿಲ್ಲವೆಂದು ಹೇಳಿ ರಾಜೀನಾಮೆ ಕೊಟ್ಟರು. ಹಾಗೆಯೇ ಇವತ್ತು ಕೂಡ ಸನ್ಮಾನ್ಯ ಖರ್ಗೆಯವರು ಒಬ್ಬನಾಯಕರು. 7 ಸಲ ಆರಿಸಿ ಬಂದಿದ್ದಾರೆ, ಜನಪ್ರಿಯ ನಾಯಕರು. ಅದರ ಬಗ್ಗೆ ಎರಡುಮಾತೇ ಇಲ್ಲ ಬಹುಶಃ ಈ ಸದನದಲ್ಲಿ ಕೆಲವೇ ಜನ ಜನಪ್ರಿಯತೆಯಿಂದ 7 ಸಲ ಆರಿಸಿ ಬಂದಿರುವವರು ಒಬ್ಬರು ಅಥವಾ ಇಬ್ಬರು ಇರಬಹುದು. ಈ ದೃಷ್ಟಿಯಿಂದ ಇವತ್ತು ನಾನು ಹೇಳುತ್ತೇನೆ. ನಿಜವಾಗಿಯೂ ಒಬ್ಬ ದಲಿತ ನಾಯಕರು ಇವತ್ತು ಗೃಹಮಂತ್ರಿಯಾದಾಗ, ಅವರಿಗೆ ಆದಂಥ ವಿಚಾರ ನೋಡಿದರೆ ಖಂಡಿತವಾಗಿಯೂ ಅವರು ನೈತಿಕ ಹೊಣೆ ಹೊರಬೇಕಾಗುತ್ತದೆ.

5.20 ಪಿ.ಎಂ

ಅದೇ ರೀತಿ ಇವತ್ತು ದುರ್ದೈವದಿಂದ ಸಂಗತಿ ಎಂದರೆ ಪಾರ್ಲಿಮೆಂಟ್‌ನಲ್ಲಿ ಇದರ ಬಗ್ಗೆ ಚರ್ಚೆಯಾಗಿ ನಮ್ಮ ಮುಖ್ಯಮಂತ್ರಿಯಿಂದ ರಾಜೀನಾಮೆ ತೆಗೆದುಕೊಳ್ಳಿ ಎಂದು ಹೇಳುವಂಥ ಸ್ಥಿತಿ ನಿರ್ಮಾಣವಾಗಿದೆ. ಇಡೀ ದೇಶ ಕರ್ನಾಟಕದ ಬಗ್ಗೆ ನೋಡತಕ್ಕ ಪರಿಸ್ಥಿತಿ ನಿರ್ಮಾಣವಾಯಿತು. ಇವೆಲ್ಲದರ ನೈತಿಕವಾದ ಹೊರೆಯನ್ನು ಯಾರು ಹೊರಬೇಕೋ ಅವರು ತಮ್ಮ ಆತ್ಮಸಾಕ್ಷಿಯಗಿ ಇದನ್ನು ಹೊರಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಕೆ.ಎನ್.ಸುಬ್ಬಾರೆಡ್ಡಿಯವರು ಇದರ ಬಗ್ಗೆ ಮಾತನಾಡುವ ಕಡೆಯ ಸದಸ್ಯರು. ತಾವು ಮಾತನಾಡಿ. ಎರಡು ಮೂರು ನಿಮಿಷದಲ್ಲಿ ತಾವು ಮಾತನಾಡಿ ಮುಗಿಸಬೇಕು.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಈ ಘಟನೆಯ ಗಾಂಭೀರ್ಯತೆಯನ್ನು ನೋಡುವುದಾದರೆ ಇತಿಹಾಸದಲ್ಲೇ ಇಂಥ ಒಂದು ಘಟನೆಯಾಗಿಲ್ಲ. ಕೇವಲ ಗೋಲೀಬಾರ್ ಆಗಿ ಒಂದೆರಡು ಕೊಲೆಗಳಾದ ಸಂದರ್ಭಗಳಲ್ಲಿ ದಿನಗಟ್ಟಲೆ, ರಾತ್ರಿಗಟ್ಟಲೆ ಚರ್ಚೆ ಮಾಡಿರುವುದನ್ನು ಅನೇಕ ಸಂದರ್ಭಗಳಲ್ಲಿ ನೋಡಿದ್ದೇವೆ, ಅಂಥ ಅನೇಕ ನಿದರ್ಶನಗಳಿವೆ ಇವತ್ತು ಎಂಟು ಜನರ ಸಜೀವ ದಹನವಾಗಿದೆ, ಎಲ್ಲರು ನಾಚಿಕೆಪಡತಕ್ಕ ವಿಚಾರವಾಗಿದೆ, ಇದನ್ನು ಬಹಳ ಲಘುವಾಗಿ ಮುಖ್ಯಮಂತ್ರಿಯವರಿಂದ ಹಿಡಿದು ಎಲ್ಲ ಮಂತ್ರಿಗಳು ಪರಿಗಣಿಸುವುದಾದರೆ ಹೇಗೆ?

(ಗೊಂದಲ)

ಶ್ರೀ ಕೆ.ಹೆಚ್.ರಂಗನಾಥ್ : ಇದು ಸರಿಯಲ್ಲ. ಇದು ಕಡತಕ್ಕೆ ಹೋಗಬಾರದು.

(ಗೊಂದಲ)

ಶ್ರೀ ಬಿ.ಸೋಮಶೇಖರ್: ದಯಮಾಡಿ ತಾವು ಕುಳಿತುಕೊಳ್ಳಿ. ಇದರಿಂದ ನಮಗೆ ಬಹಳ ನೋವಾಗುತ್ತಿದೆ. ನಾನು ಮಾತನಾಡಿದಮೇಲೆ ತಾವು ಮಾತನಾಡಿ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಮುಖ್ಯಮಂತ್ರಿಯವರು ಇದನ್ನು ಬಹಳ ಹಗುರವಾಗಿ ತೆಗೆದುಕೊಂಡಿಲ್ಲ.

ಶ್ರೀ ಬಿ.ಸೋಮಶೇಖರ್: ತಾವು ಹಿರಿಯರು, ತಾವು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದೀರಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸೋಮಶೇಖರ್‌ರವರೆ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹಗುರವಾಗಿ ತೆಗೆದುಕೊಂಡಿದ್ದರೆ, ಅವರು ಬೆಳಿಗ್ಗೆ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದರೇ? ಜೊತೆಗೆ ಎಷ್ಟು ಹೊತ್ತಾದರೂ ಇದರ ಬಗ್ಗೆ ಮಾತನಾಡಿ ಎಂದು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಹೀಗಿರುವಾಗ ತಾವೇಕೆ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಹಗುರವಾಗಿ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತೀರಿ ಕಳೆದ 25 ವರ್ಷಗಳಿಂದ ನಿಲುವಳಿ ಸೂಚನೆ ಇಲ್ಲಿ ಚರ್ಚೆಗೆ ಅಡ್ಮಿಟ್ಟೇ ಆಗಿಲ್ಲ.

ಶ್ರೀ ಬಿ.ಸೋಮಶೇಖರ್: ಮಾನ್ಯ ಮುಖ್ಯಮಂತ್ರಿಯವರು ಆ ರೀತಿ ಹೇಳಿದ್ದಕ್ಕೆ ನಾವು ಸ್ವಾಗತ ಮಾಡಿದೆವು.

ಒಬ್ಬ ಮಾನ್ಯ ಸದಸ್ಯರು: ತಮ್ಮ ಸರ್ಕಾರವಿದ್ದಾಗ ಇದೇ ರೀತಿ ಪಾವಗಡದಲ್ಲಿ ಘಟನೆಯಾಗಿ ನೂರಾರು ದಲಿತರ ಮನೆಗಳು ಸುಟ್ಟು ಭಸ್ಮವಾಯಿತು. ಆಗ ತಾವು ಏನು ಮಾಡಿದ್ದೀರಿ? ತಾವು ಏನು ಮಾಡಿದ್ದೀರಿ ಅದರ ಬಗ್ಗೆ ಮೊದಲು ಹೇಳಿ. ಆಗ ಅನ್ಯಾಯವಾಗಿರಲಿಲ್ಲವೆ? ಮನೆಗಳ ಭಸ್ಮವಾಗಲು ತಮ್ಮ ಸರ್ಕಾರ ಕಾರಣವಾಗಿರಲಿಲ್ಲವೆ? ಆಗ ತಾವು ಎಲ್ಲಿದ್ದಿರಿ? ಏನು ಮಾಡಿದ್ದಿರಿ?

ಶ್ರೀ ಬಿ.ಸೋಮಶೇಖರ್: ಆಗ ಅದರ ಬಗ್ಗೆ ದಿನಗಟ್ಟಲೆ ಚರ್ಚೆಯಾಗಿದೆ. ನಾನು ಮಾತನಾಡಿದ ಮೇಲೆ ಅವರು ಮಾತನಾಡಲಿ.

(ಗೊಂದಲ)

ಪ್ರತಿಯೊಬ್ಬರ ಹೃದಯವನ್ನು ಕುಕ್ಕತಕ್ಕ ವಿಚಾರ ಇದಾಗಿದೆ. ಇಡೀ ದೇಶದಲ್ಲಿ, ಲೋಕಸಭೆ, ರಾಜ್ಯಸಭೆಗಳಲ್ಲಿ ಈ ವಿಚಾರ ಬಗ್ಗೆ ಧ್ವನಿಗೂಡಿಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಲೋಕಸಭೆ, ರಾಜ್ಯಸಭೆಗಳಲ್ಲಿ ಚರ್ಚೆಯಾಗುತ್ತಿರುವಾಗ, ಕರ್ನಾಟಕ ರಾಜ್ಯದ ಜನರು ಇವತ್ತು ನಮ್ಮನ್ನು ನೋಡುತ್ತಿದ್ದಾರೆ, 7-8 ಜನರ ಸಜೀವ ದಹನವಾಗಿದೆ, ಅದು ಯಾವ ಸರ್ಕಾರದಲ್ಲಾಗಲಿ ಆಗಿರಲಿ, ಯಾವುದೇ ಸಂದರ್ಭದಲ್ಲಾಗಿರಲಿ, ಆ ವಿಚಾರವನ್ನು ಬಹಳ ಹಗುರವಾಗಿ ಪರಿಗಣಿಸಿ ಇದರ ಬಗ್ಗೆ ಎರಡೇ ನಿಮಿಷ, ಮೂರೇ ನಿಮಿಷ ಮಾತನಾಡಿ ಎಂದರೆ ಹೇಗೆ? ಇದರ ಬಗ್ಗೆ ಚರ್ಚೆಯನ್ನು ಒಂದೆರಡು ದಿವಸ ಮುಂದಕ್ಕೆ ಹಾಕಿ. ಬಹಳ ಹಗುರವಾಗಿ ತೆಗೆದುಕೊಳ್ಳುವ ವಿಚಾರ ಇದಾಗಿಲ್ಲ.

ಅಧ್ಯಕ್ಷರು: ಯಾರೂ ಹಗುರವಾಗಿ ತೆಗೆದುಕೊಂಡಿಲ್ಲ.

ಶ್ರೀ ಬಿ.ಹೆಚ್.ಬನ್ನಿಕೋಡ್ : ಮಾನ್ಯ ಸೋಮಶೇಖರ್‌ರವರು ಹೇಳಿದಂತೆ ಇದರ ಬಗ್ಗೆ ಮಾತನಾಡಲು ಸಾಕಷ್ಟು ಅವಕಾಶ ಕೊಡಿ. ಇಲ್ಲಿ ಶಾಂತಿಪಾಲನೆಯ ವಿಚಾರ ಇದೆ, ನಾವುಗಳೆಲ್ಲ ಮಾತನಾಡಲು ಸಹಿ ಹಾಕಿದ್ದೇವೆ, ನಮಗೆ ಅವಕಾಶ ಕೊಡುವುದಾಗಿ ಅಧ್ಯಕ್ಷರು ಹೇಳಿದ್ದಾರೆ, ಈ ಸದನದ ನೀತಿ ನಿಯಮವನ್ನು ಅನುಸರಿಸಿ, ಅದರಂತೆ ಸದನ ನಡೆಯಲಿ, ಯಾರನ್ನೋ ಕರೆದು ಭಾಷಣ ಮಾಡಿ ಎಂದು ಹೇಳುವ ವಿಚಾರ ಇದಾಗಿಲ್ಲ. ವಿಧಾನಸಭೆಯ ಅಧ್ಯಕ್ಷರು ಕಾನೂನಿನ ಪ್ರಕಾರ, ಸದನದ ನೀತಿ ನಿಯಮದ ಪ್ರಕಾರ ಸದನ ನಡೆಯಬೇಕು. ಯಾರ್‍ಯಾರನ್ನೊ ಕರೆದು ಮಾತನಾಡಲು ಅವಕಾಶ ಕೊಟ್ಟು ಸಹಿ ಮಾಡಿದ್ದ ನಮಗೆ ಅವಕಾಶ ಕೊಡಲು ಬೆಳಿಗ್ಗೆಯಿಂದ ಸಂಜೆಯವರೆಗೆ ನಾವು

ಕಾದುಕುಳಿತುಕೊಳ್ಳುವುದು ಸರಿಯಲ್ಲ. ಈ ಸದನದ ಕಾನೂನಿನ ಪುಟಗಳನ್ನು ತೆಗೆದುನೋಡಿ. ಅದರಂತೆ ಸಭೆಯನ್ನು ನಡೆಸಿ.

ಅಧ್ಯಕ್ಷರು: ತಾವು ಸಹ ಮಾತನಾಡಿ.

ಶ್ರೀ ಬಿ.ಸೋಮಶೇಖರ್: ಎಲ್ಲರಿಗೂ ಮುಕ್ತವಾಗಿ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ಜಗದೀಶ್‌ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇವತ್ತು ಗಂಭೀರವಾದ ವಿಚಾರದ ಬಗ್ಗೆ ಚರ್ಚೆಯಾಗುತ್ತಿದೆ. ಏಳು ಜನ ದಲಿತರು ಸಜೀವವಾಗಿ ದಹನವಾಗಿರತಕ್ಕ ಸಂದರ್ಭದಲ್ಲಿ, ಇತಿಹಾಸದಲ್ಲಿ ಈ ರೀತಿಯಾದ ಘಟನೆ ಎಂದೂ ಆಗಿಲ್ಲ. ಇದರ ಬಗ್ಗೆ ಇನ್ನು ಅನೇಕ ಸದಸ್ಯರುಗಳು ಅವರವರ ಭಾವನೆಯನ್ನು ವ್ಯಕ್ತಪಡಿಸಬೇಕಾಗಿದೆ. ದಯಮಾಡಿ ಅವರುಗಳಿಗೆಲ್ಲ ಅವಕಾಶ ಮಾಡಿಕೊಡಬೇಕು. ಬೇಕಾದರೆ ಸೋಮವಾರದವರೆಗೆ ಇದರ ಬಗ್ಗೆ ಚರ್ಚೆಯಾಗಲಿ. ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಗೃಹ ಸಚಿವರು ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಲಿ. ಈ ಹಿಂದೆ ಕೆಲವೊಂದು ವಿಚಾರಗಳ ಬಗ್ಗೆ ರಾತ್ರಿ ಏಂಟು ಒಂಭತ್ತು ಗಂಟೆಯವರೆಗೆ ಚರ್ಚೆಯಾಗಿದೆ. ಇದು ಗಂಭೀರವಾದ ವಿಚಾರ. ಹೆಚ್ಚಿನ ಸಮಯವನ್ನು ಕೊಟ್ಟು ಎಲ್ಲರಿಗೂ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು: ಇದನ್ನು ಇವತ್ತೇ ಮುಗಿಸಬೇಕಾಗಿದೆ. ಮುಂದೂಡಲು ಆಗುವುದಿಲ್ಲ. ಮಾತನಾಡತಕ್ಕವರು ಮಾತನಾಡಲಿ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯ ವಿಚಾರದಲ್ಲಿ ಒಂದುವಾರದವರೆಗೆ ಚರ್ಚೆಯಾಗಿರುವ ನಿದರ್ಶನವಿದೆ. ಆ ನಿಲುವಳಿ ಸೂಚನೆ ಗಾಂಭಿರ್ಯತೆಯನ್ನು ಹೊಂದಿತ್ತು. ಆದರೆ ಈ ನಿಲುವಳಿ ಸೂಚನೆ ಗಾಂಭೀರ್ಯತೆಯನ್ನು ಹೊಂದಿಲ್ಲವೆ? ಇದು ಒಂದೇ ದಿನದಲ್ಲಿ ಮುಗಿಯುವ ವಿಚಾರವೆ?

ಅಧ್ಯಕ್ಷರು: ಇಲ್ಲ ಯಾವಾಗಲೂ ಆ ರೀತಿಯಾಗಿಲ್ಲ. ಯಾವತ್ತೂ ಎರಡು ಮೂರು ದಿವಸ ಆಗಿಲ್ಲ. There is an answer for Mr.somashekar. Practice and procedure of Parliament.

"The House may however adjourn for lunch as usual for a brief interval. The motion has to be disposed of before the House adjourned for the day."

ಶ್ರೀ ಬಿ.ಸೋಮಶೇಖರ್: ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ವಿಚಾರದ ಗಾಂಭೀರ್ಯತೆಯನ್ನು ಸಹ ನೋಡಬೇಕಾಗುತ್ತದೆ. ಮಾತನಾಡಲು ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು: ಮಾತನಾಡಲು ಅವಕಾಶ ಕೊಡುತ್ತೇವೆ. ಸುಬ್ಬಾರೆಡ್ಡಿಯವರೆ ತಾವು ಮಾತನಾಡಿ. ಅನಂತರ ಬನ್ನಿಕೋಡ್‌ರವರು ಮಾತನಾಡಲಿ.

+ ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಏಳು ಜನ ದಲಿತರ ಸಜೀವ ದಹನವನ್ನು ಕೇಳಿ ಕರ್ನಾಟಕ ವಕೀಲರ ಒಕ್ಕೂಟದ ಸುಮಾರು 60 ಜನ ವಕೀಲರು ಚಿಂತಾಮಣಿಯ ಕಂಬಾಲಪಲ್ಲಿಗೆ ಹೋಗಬೇಕಾಯಿತು. ಆ ರೀತಿ ಹೋದಾಗ ಇಡೀ ಗ್ರಾಮದಲ್ಲಿ ಓಡಾಡಿಬಂದು ಯಾವ ರೀತಿಯಲ್ಲಿ ಒಳ್ಳೆಯ ಕಾರ್ಯಕ್ರಮ ಮಾಡಬೇಕು ಎಂಬ ಬಗ್ಗೆ ನಾವು ಯೋಚನೆ ಮಾಡಿದೆವು. ಸಮಾಜಕಲ್ಯಾಣ ಸಚಿವರಾದ ಕಾಗೋಡುತಿಮ್ಮಪ್ಪನವರು ಅಲ್ಲಿ ಅನ್ನ ಛತ್ರವನ್ನು ಮಾಡಿಸಿದ್ದಾರೆ. ಅದನ್ನು ಸಹ ನಾವು ಹೋಗಿ ನೋಡಿದೆವು. ಅದರಿಂದ ಬಹಳ ಒಳ್ಳೆಯ ಅನುಕೂಲವಾಗಿದೆ. ಒಳ್ಳೆಯ ಉದ್ದೇಶದಿಂದ ಅದನ್ನು ಪ್ರಾರಂಭ ಮಾಡಿದ್ದಾರೆ. ಅಲ್ಲಿ ದೀನದಲಿತರಿಗೆ, ವಸತಿ ಇಲ್ಲದಿರುವ, ಊಟ ಇಲ್ಲದಿರುವವರಿಗೆ ಈ ಅನ್ನಛತ್ರ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ನಾವುಗಳು ಏನಾದರು ಸೇವೆ ಮಾಡಬೇಕು ಎಂಬ ಉದ್ದೇಶದಿಂದ ಅಲ್ಲಿಗೆ ಹೋಗಿದ್ದೆವು. ಅನೇಕ ವಕೀಲರು ಆ ದೀನದಲಿತರಿಗೆ ಯಾವ ರೀತಿಯಲ್ಲಿ ಸಹಾಯ ಮಾಡಬಹುದು ಎಂಬ ಬಗ್ಗೆ ಯೋಚನೆ ಮಾಡಿದರು. ಅಲ್ಲಿನ ಅಸಿಸ್ಟೆಂಟ್ ಕಮೀಷನರ್‌ರವರು, ಕೃಷ್ಣಾರೆಡ್ಡಿಯವರು, ಅನೇಕ ಪ್ರಮುಖರು ನಾವು ಬೆಂಗಳೂರಿನಿಂದ 50-60 ಜನ ವಕೀಲರು ಚಿಂತಾಮಣಿ ಬಾರ್ ಅಸೋಸಿಯೇಷನ್‌ನ 10 ಜನ ಒಟ್ಟು 70 ಮಂದಿ ವಕೀಲರೇನು ಹಳ್ಳಿಗೆ ಹೋಗಿದ್ದೆವೋ ನಮಗೆ ಘಟನೆ ಬಗ್ಗೆ ವಿವರಣೆಯನ್ನು ಕೊಟ್ಟರು. ಅನಂತರ ನಾವು ಎಫ್.ಐ.ಆರ್.ನಲ್ಲಿ ಏನಿದೆ, ಯಾರ್‍ಯಾರು ತಪ್ಪಿತಸ್ಥರು ಎಂದು ವಿಚಾರ ಮಾಡಿದೆವು. ನಮ್ಮ ಜೊತೆ ಕ್ರಿಮಿನಲ್ ಸೈಡ್ ಪ್ರಾಕ್ಟೀಸ್ ಮಾಡುವ ಅನೇಕ ವಕೀಲರು ಬಂದಿದ್ದರು.ಇದರಲ್ಲಿ ಎಷ್ಟು ಜನರನ್ನು ತಪ್ಪಿತಸ್ಥರು ಎಂದು ಎಫ್‌ಐರ್‌ನಲ್ಲಿ ಮಾಡಿದ್ದೀರಿ ಎಂದು ಕೇಳಿದಾಗ, ಎಫ್‌ಐಆರ್‌ನಲ್ಲಿ ಹೆಸರುಗಳೆಲ್ಲವನ್ನು ಹಾಕಿಲ್ಲ, ಕೆಲವರ ಹೆಸರುಗಳನ್ನು ಮಾತ್ರ ಹಾಕಿದ್ದೇವೆ ಎಂದು ಹೇಳಿದರು. ಅಂಥವರು ಯಾರು? ಎಂದು ಕೇಳಿದಾಗ, ಅನೇಕರು ಸತ್ತವರನ್ನು ನೋಡುವುದಕ್ಕೆ ಏನು ಬಂದಿದ್ದರು ಅಂಥವಾ ಹೆಸರುಗಳನ್ನು ಕೂಡ ಎಫ್‌ಐಆರ್‌ನಲ್ಲಿ ಹಾಕಿದ್ದಾರೆ ಎಂದು ಹೇಳಿದರು. ದಲಿತರ ಸಜೀವ ದಹನ ಆಗಿರುವುದನ್ನು ನೋಡುವುದಕ್ಕೆಂದು ನಾವು ಬಂದರೆ, ನಮ್ಮನ್ನು ಕೂಡ ಪೋಲೀಸರು ಕರೆದುಕೊಂಡು ಹೋಗಿದ್ದಾರೆ ಎಂದರು. ಕೃಷ್ಣಾರೆಡ್ಡಿಯವರನ್ನು ನೋಡುವುದಕ್ಕೆ ಬಂದಾಗಲೂ ಕೂಡ

ಬಂದವರ ಅನೇಕರ ಹೆಸರನ್ನು ಎಫ್‌ಐಆರ್‌ನಲ್ಲಿ ಹಾಕಿದ್ದಾರೆ. ಇಂಥ ಘಟನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಎಷ್ಟು ಹೊತ್ತಾದರೂ ಮಾತನಾಡಿ ಎಂದು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅದು ಬಹಳ ಒಳ್ಳೆಯ ಸಂಪ್ರದಾಯ ಹಾಕಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಆಡಳಿತದಲ್ಲಿ ಪಾರದರ್ಶಕತೆಯ ಬಗ್ಗೆ ನಮ್ಮ ಮುಖ್ಯಮಂತ್ರಿಯವರು ಬಹಳ ಹೋರಾಟವನ್ನು ಮಾಡುತ್ತಾ ಇದ್ದಾರೆ. ಹಾಗೆಂದ ಮೇಲೆ ಇದನ್ನು ಸಿಬಿಐಗೆ ಕೊಡುವುದರಲ್ಲಿ ತಪ್ಪೇನಿದೆ? ಅಂತೆಯೇ ಪ್ರಕರಣದಲ್ಲಿ ಯಾರೇ ತಪ್ಪಿತಸ್ಥರು ಇದ್ದರೂ ಕೂಡ ಅಂಥವರ ಮೇಲೆ ಕ್ರಮ ಜರುಗಿಸುವುದಾಗಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಇದು ಬಹಳ ಸಂತೋಷಕರವಾದುದು. ಈ ಘಟನೆಯಲ್ಲಿ ಪಾಲ್ಗೊಂಡ ತಪ್ಪಿತಸ್ಥರುಗಳನ್ನು ಯಾರೇ ಇದ್ದರೂ ಅವರನ್ನು ನಾವು ಬಿಡಬಾರದು ಎಂಬ ಅವರು ನಿಲುವು ಸೂಕ್ತವಾದುದು. ಇಂದಿನ ಚರ್ಚೆಯಲ್ಲಿ ಅನೇಕ ವಿಷಯಗಳನ್ನು ನಾವು ನೋಡಿದ್ದೇವೆ. ಮಾನ್ಯ ಗೃಹಸಚಿವರಾದ ಖರ್ಗೆಯವರು ಏನಾದರೂ ಮಾಡಿ ಅವರನ್ನು ಸ್ಥಳಾಂತರ ಮಾಡುವುದರ ಬಗ್ಗೆ ಯೋಜನೆ ಮಾಡಿರುವುದಾಗಿ ಹೇಳಿದರು. ಹೀಗೆ ಸ್ಥಳಾಂತರ ಮಾಡುವುದರಿಂದ ಯಾವುದೇ ಪರಿಸ್ಥಿತಿಯ ಬದಲಾವಣೆಯು ಅಷ್ಟಾಗಿ ಆಗುವುದಿಲ್ಲ ಮತ್ತು ಅದರಿಂದ ಅಷ್ಟು ಪ್ರಯೋಜನವೂ ಆಗುವುದಿಲ್ಲ. ಸ್ಥಳಾಂತರ ಮಾಡಿದರೆ ಪುನಃ ದ್ವೇಷ ಸಾಧನೆಗಾಗಿ ಇದ್ದಲ್ಲಿಗೆ ಹೋಗಿ ಸಾಧಿಸುತ್ತಾರೆ. ಆದ್ದರಿಂದ ಆ ವಿಚಾರದ ಬದಲು ಅವರಿಬ್ಬರನ್ನೂ ಸೇರಿಸಿ ಆ ಊರಿನಲ್ಲಿಯೇ ಸೌಹಾರ್ದಯುತವಾಗಿ ಜೀವನ ಮಾಡುವ ಹಾಗೆ ಮಾಡಿದರೆ ಒಳ್ಳೆಯದಾಗುತ್ತದೆ. ಕೋಮು ಗಲಭೆಗಳು ಉಂಟಾದಾಗ ಸ್ಥಳಾಂತರವನ್ನು ಮಾಡುತ್ತಿದ್ದಾರೆ. ಹಾಗೆ ಮಾಡಬಾರದು. ಇಬ್ಬರನ್ನೂ ಸೇರಿಸಿ ಒಂದಾಗಿ ಬಾಳುವ ರೀತಿಯಲ್ಲಿ ನಾವೆಲ್ಲರೂ ಸೇರಿ ಮಾಡಬೇಕಾದುದು ಅತಿ ಮುಖ್ಯವಾದುದು. ಅವರಿಗೆ ಆ ರೀತಿಯ ಮಾರ್ಗದರ್ಶನವನ್ನು ನಾವು ಮಾಡಿಕೊಡಬೇಕು. ಆ ದಿಕ್ಕಿನಲ್ಲಿ ಮಾನ್ಯ ಖರ್ಗೆಯವರು, ಮಾನ್ಯ ಮುಖ್ಯಮಂತ್ರಿಯವರು, ಯೋಚನೆ ಮಾಡಿ ಕೆಲಸ ಮಾಡಬೇಕಾಗಿದೆ. ಕೋಲಾರ ಜಿಲ್ಲಾ ಉಸ್ತುವಾರಿ ಮಂತ್ರಿಯವರಾಗಿ ಮಾನ್ಯ ಮುನಿಯಪ್ಪನವರು ಇದ್ದಾರೆ. ಈ ಘಟನೆ ಆದ ನಂತರ ಅಸಿಸ್ಟಂಟ್ ಕಮಿಶನರ್‌ರವರು, ಪೋಲೀಸರು, ಮುಂತಾಗಿ ಎಲ್ಲರೂ ಅಲ್ಲಿಯೇ ಇದ್ದಾರೆ. ಮಾನ್ಯ ಮುನಿಯಪ್ಪನವರು ಕಂಬಾಲಪಲ್ಲಿಗೆ ಹೋಗಿ ಬಂದಿದ್ದಾರೆ. ಆದರೆ ಅಲ್ಲಿಯೇ ಇದ್ದು ಇಬ್ಬರನ್ನು ಸೇರಿಸಿ, ಒಳ್ಳೆಯ ಉದ್ದೇಶದಿಂದ ಇಬ್ಬರಿಗೂ ಸಮಾಧಾನ ಮಾಡಿದರೆ ಮಹತ್ತರವಾದ ಶ್ರೇಯಸ್ಸು ಆಗುತ್ತದೆ ಎಂದು ನಾನು ಭಾವಿಸುತ್ತೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಅಲ್ಲಿಗೆ ಎರಡು ಸಲ ಹೋಗಿ ಬಂದಿದ್ದಾರೆ. ಯಾರೇ ಆಗಲಿ ಅಲ್ಲಿಗೆ ಹೋಗಿ ಬಂದರೆ ಅದರಿಂದ ಏನೂ ಸಾಧಿಸುವುದಿಲ್ಲ, ಅದರ ಬದಲು ಅಲ್ಲಿಯೇ ಇದ್ದು ಇಬ್ಬರನ್ನು ಒಂದುಗೂಡಿಸುವ ಕೆಲಸವನ್ನು ಮಾಡಲೇ ಬೇಕಾಗಿದೆ. ಈಗಾಗಲೇ ಬಹಳ ಜನ ಮಾನ್ಯ ಸ್ನೇಹಿತ ಸದಸ್ಯರುಗಳು ಮಾತನಾಡಿದ್ದಾರೆ. ಮಾನ್ಯ ಸಿಂಧ್ಯಾರವರು,

ಬೈರೇಗೌಡರು, ಚೌಡರೆಡ್ಡಿಯವರು, ಮಾತನಾಡಿದ್ದಾರೆ. ಮಾನ್ಯ ಚೌಡರೆಡ್ಡಿಯವರು ಚಿಂತಾಮಣಿ ಕ್ಷೇತ್ರದ ಶಾಸಕರು. ಅಲ್ಲಿಯ ಡಿ.ಸಿ.ಯವರು ಎಸ್.ಪಿ.ಯವರು ಅವರನ್ನು ಕರೆಯದೇ ಇದ್ದುದು ದುರಾದೃಷ್ಟಕರವಾದ ವಿಚಾರವಾಗಿದೆ. ಶ್ರೀ ಚೌಡರೆಡ್ಡಿಯವರು ಕೂಡ ಕಾಂಗ್ರೆಸ್ ಪಕ್ಷದಲ್ಲಿದ್ದವರು. ಅವರನ್ನು ಬಿಟ್ಟ ಮಾನ್ಯ ಮುನಿಯಪ್ಪನವರು ಮತ್ತಿತರರು ಹೋಗುವುದೆಂದರೆ ಅದು ದುರಾದೃಷ್ಟಕರ. ನಿಜವಾಗಿಯೂ ಕೂಡ ಇದು ಸರಿಯಾದುದು ಅಲ್ಲ. ಸ್ಥಳೀಯ ಶಾಸಕರು ಅಂದರೆ, ಅಲ್ಲಿನ ಆಗುಹೋಗುಗಳಿಗೆ ಭಾಗವಹಿಸ ಬೇಕಾದಂಥವರು. ಅಂಥವರನ್ನು ಡಿಸಿ.ಯವರು ಮತ್ತು ಎಸ್.ಪಿ.ಯವರು ಸ್ಥಳೀಯ ಶಾಸಕರನ್ನು ಗಮನಿಸಿಲ್ಲ. ಇನ್ನೊಂದು ಬಹಳ ದುಃಖಕರವಾದಂಥ ಸಂಗತಿ ಇದೆ. ಅದೇನೆಂದರೆ ಅಲ್ಲಿ ನೀವು ಹಾಕಿದ ಪೋಲೀಸ್ ಇನ್ಸ್‌ಪೆಕ್ಟರ್ ಆರು ಸಲ ಸಸ್ಪೆಂಡ್ ಆಗಿರತಕ್ಕಂಥವರು ಎಂದು ಇದೆ. ಸಾಮಾನ್ಯವಾಗಿ ಬಾವಿಗೆ ಹಾರಿದರೆ ಗಂಗಾಮಾತೆಯು ಮೂರು ಸಲ ಎಬ್ಬಿಸುತ್ತಾರೆ. ಹಾಗೇಯೇ ಒಂದೆರಡು ಮೂರು ಸಾರಿ ಸಸ್ಪೆಂಡ್ ಆಗಿರುವುದು ಪೋಲೀಸ್ ಇಲಾಖೆಯಲ್ಲಿ ಸಾಮಾನ್ಯ. ಯಾರೂ ಕೂಡ ಭ್ರಷ್ಟಾಚಾರದ ಪ್ರಕರಣದಲ್ಲಿ ಸಿಕ್ಕಿಲ್ಲ ಎಂದು ಹೇಳುವುದೇ ಕಷ್ಟ. ಹಾಗೆ ಅಂಥವರೇನಾದರೂ ಇದ್ದರೆ ನಮ್ಮ ಡಿಜಿಪಿ ಶ್ರೀನಿವಾಸಲು ಅವರು ಹೇಳಬೇಕಾಗುತ್ತದೆ. ಅವರು ಇಂಥ ವಿಚಾರಗಳನ್ನು ತಮ್ಮ ದೀರ್ಘ ಕಾಲಾವಧಿಯಲ್ಲಿ ಸೇವೆಯಲ್ಲಿ ನೋಡಿರುವವರಾಗಿದ್ದಾರೆ. ನಾನು ನನ್ನ ಅನುಭವದಲ್ಲಿ ಹೇಳುವುದಾದರೆ, ಯಾರೂ ಅಂಥವರು ಇರಲಾರರು ಎಂದು ಕಾಣುತ್ತದೆ. ಬಹುಶಃ ಮಾನ್ಯ ಮುನಿಯಪ್ಪನವರು ಆರಕ್ಕಿಂತ ಹೆಚ್ಚುಸಲ ಸಸ್ಪೆಂಡ್ ಆಗಿರುವವರು ಬೇಡ ಇವರೇ ಇರಲಿ ಎಂದು ಅವರನ್ನೇ ಸೆಲೆಕ್ಟ್ ಮಾಡಿ ಅಲ್ಲಿಗೆ ಹಾಕಿಸಿಕೊಂಡಿರ ಬಹುದು.

ಈಗ ಮಾನ್ಯ ಮುನಿಯಪ್ಪನವರು, ಚೌಡರೆಡ್ಡಿಯವರು, ಕಾಗೋಡು ತಿಮ್ಮಪ್ಪನವರು ಕುಳಿತು ಈ ಸ್ಥಳಾಂತರ ಮಾಡುವ ಯೋಚನೆಯ ಬದಲು, ಇದ್ದಲ್ಲಿಯೇ ಸೌಹಾರ್ದ ಕಲ್ಪಿಸಲು ಯತ್ನಿಸ ಬೇಕು. ನಮ್ಮ ಕಂದಾಯ ಸಚಿವರಾದ ಶ್ರೀಕಂಠಯ್ಯನವರು ಅಲ್ಲಿಗೆ ಹೋಗಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅವರು ಅಲ್ಲಿಗೆ ಹೋಗಿ ಒಂದು ವೇಳೆ ಸ್ಥಳಾಂತರವನ್ನು ಮಾಡುವುದಿದ್ದರೆ ಎಲ್ಲಿಗೆ? ಅಂತೆಯೇ ಇಬ್ಬರು ನಡುವೆ ಸೌಹಾರ್ದವನ್ನು ಕಲ್ಪಿಸಲು ಏನು ಮಾಡಬೇಕು? ಎಂಬಿತ್ಯಾದಿ ವಿಷಯಗಳ ಬಗ್ಗೆ ಹೆಚ್ಚು ಗಮನ ಕೊಡಬೇಕು. ಇಂಥ ದುರಾದೃಷ್ಟಕರವಾದಂಥ ಸಂಗತಿಗಳು ಮುಂದೆ ನಡೆಯಬಾರದು. ಪ್ರಕರಣವನ್ನು ಸಿಬಿಐ ತನಿಖೆಗ ಒಳಪಡಿಸ ಬೇಕು. ಸಿಬಿಐಗೆ ಒಪ್ಪಿಸುವ ವಿಚಾರದಲ್ಲಿ ನಾವು ಸಪೋರ್ಟ್ ಮಾಡುತ್ತೇವೆ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

\+ ಶ್ರೀ ಬಿ.ಹೆಚ್.ಬನ್ನಿಕೋಡ್ (ಹಿರೇಕೇರೂರು): ಮಾನ್ಯ ಸಭಾಧ್ಯಕ್ಷರೆ,

ಇಲ್ಲಿಯವರೆಗೆ ದಲಿತರ ಬರ್ಬರ ಹತ್ಯೆಯ ಬಗ್ಗೆ, ಕಾರವಾರ ಶಾಸಕ ಸ್ನೇಹಿತರ ಹತ್ತೆ ಬಗ್ಗೆ, ಹುಬ್ಬಳ್ಳಿಯಲ್ಲಿನ ಅತ್ಯಂತ ಪ್ರಸಿದ್ಧ ವೈದ್ಯರಾದ ಜೋಷಿ ಸಹೋದರರ ಕೊಲೆ ಪ್ರಕರಣ, ರಾಜ್ಯದಾದ್ಯಂತ ಅನೇಕ ಕೊಲೆಗಳು ನಡೆದ ಬಗ್ಗೆ ಪ್ರಸ್ತಾಪವಾಗಿದೆ. ಕೆಲವೊಂದು ಕೊಲೆಗಳು ಇಷ್ಟೊಂದು ಸ್ವಲ್ಪವೂ ಸುಳಿವು ಸಿಗದ ರೀತಿಯಲ್ಲಿ ಮುಂದಾಲೋಚನೆಯಿಂದ, ಪ್ರೀಪ್ಲ್ಯಾನ್ಡ್ ಆಗಿ ನಡೆಯುತ್ತಾ ಇವೆ. ಇದಕ್ಕೆಲ್ಲಾ ಕಾರಣಗಳು ಏನು ಎಂಬುದನ್ನು ನಾವು ಹುಡುಕ ಬೇಕಾಗಿದೆ. ಇನ್ನೊಂದು ಕಡೆ ವೈಯಕ್ತಿಕ ದ್ವೇಷ, ಅವರುಗಳಲ್ಲಿರತಕ್ಕಂಥ ವೈಮನಸ್ಸು, ಇವುಗಳ ಹೆಚ್ಚು ಪ್ರಮಾಣ ಮುಟ್ಟಿದಾಗ ದ್ವೇಷ ಹೆಚ್ಚಾಗಿ ಕಗ್ಗೊಲೆಗಳು ನಡೆಯುತ್ತಾ ಇವೆ. ಈ ರೀತಿಯಾಗಿ ಎರಡು ವಿಧವಾದ ಕೊಲೆಗಳು ರಾಜ್ಯದಲ್ಲಿ ಉಂಟಾಗಿ ಅಶಾಂತಿಗೆ ಕಾರಣವಾಗಿದೆ. ಈಗ ತಾನೇ ನಡೆದ ಚರ್ಚೆಯನ್ನು ನೋಡಿದಾಗ ಕೆಲವೊಂದು ವಿಚಾರಗಳು ನಮ್ಮ ಗಮನಕ್ಕೆ ಬರುತ್ತವೆ. ಅಧಿಕಾರಿಗಳು ಇಲ್ಲಿ ತಪ್ಪಿತಸ್ಥರು, ಆರು ಸಲ ಸಸ್ಪೆಂಡ್ ಆದ ಪೋಲೀಸ್ ಇನ್‌ಸ್ಪೆಕ್ಟರ್‌ನ್ನು ಇಲ್ಲಿಗೆ ಹಾಕಿದ್ದಾರೆ, ಇಲಾಖೆಯಲ್ಲಿ ಕೆಳಗಿನಿಂದ ಮೇಲಿನವರೆಗೆ ಒಂದೇ ಕೋಮಿನವರು ಇದ್ದಾರೆ ಎಂಬಿತ್ಯಾದಿಯಾಗಿ ನಾವು ಮಾತನಾಡುವುದಾರೆ, ಇಡೀ ರಾಜ್ಯದ ಜನತೆಯು ಇಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡುತ್ತಾ ಇದ್ದಾರೆ, ಇದರ ಪರಿಣಾಮವಾಗಿ ನಾವು ಇನ್ನಷ್ಟು ಕೆಟ್ಟ ಪರಿಸ್ಥಿತಿಯನ್ನು ಉಂಟು ಮಾಡುವುದಕ್ಕೆ ಕಾರಣರಾಗುತ್ತೇವೆಯೇ ವಿನಹ ಅಲ್ಲಿ ಶಾಂತಿಯನ್ನು ಉಂಟು ಮಾಡುವುದಕ್ಕೆ ಕಾರಣರಾಗುವುದಿಲ್ಲ. ನಾವು ಆತ್ಮಾವಲೋಕನೆಯನ್ನು ಮಾಡಿಕೊಳ್ಳ ಬೇಕಾಗಿದೆ. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷ, ಚುನಾವಣೆ, ಚುನಾವಣೆಯಲ್ಲಿ ಒಬ್ಬರಿಗಿಂತ ಇನ್ನೊಬ್ಬರದು ಹೆಚ್ಚು ಸ್ಪರ್ಧೆ ಇರತಕ್ಕಂಥಾದ್ದು, ಬೆಂಬಲವನ್ನು ಕೊಡತಕ್ಕಂಥಾದ್ದು, ಮುಂತಾಗಿ ನಮ್ಮ ಪ್ರಜಾಪ್ರಭುತ್ವದ ನೀತಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಹೀಗೆ ಈ ನೀತಿಗಳನ್ನು ಒಪ್ಪಿದ ನಾವುಗಳು ಅದಕ್ಕೆ ಬದ್ಧರಾಗಿ ಇರಬೇಕಾಗುತ್ತದೆ. ಮನುಷ್ಯರು ಹುಟ್ಟುವುದು ಆಕಸ್ಮಿಕ. ಸಾವು ನಿಶ್ಚಿತ. ಅಧಿಕಾರ ಬರುವುದು ಆಕಸ್ಮಿಕ. ಅಧಿಕಾರವನ್ನು ಕಳೆದುಕೊಳ್ಳುವುದು ನಿಶ್ಚಿತ ಎನ್ನುವುದನ್ನು ಅರಿತುಕೊಂಡು ಜನಪ್ರತಿನಿಧಿಗಳು, ಶಾಸಕರು, ಮಂತ್ರಿಗಳು, ಮುಂತಾಗಿ ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸಿದಾಗ ಮಾತ್ರ ಪ್ರಾಮಾಣಿಕವಾದಂಥ, ಪಾರದರ್ಶಕವಾದಂಥ ಆಡಳಿತವನ್ನು ಸರಕಾರದವರು ಜನರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ನಾನು ಶಾಶ್ವತವಾಗಿ ಅಧಿಕಾರದಲ್ಲಿರ ಬೇಕು, ಪಕ್ಷಪಾತವನ್ನು ಮಾಡಬೇಕು, ರಾಜಕೀಯ ಪಕ್ಷಪಾತ, ಜಾತೀಯ ಪಕ್ಷಪಾತ, ಜಂಜಾಟ ಹಾಗೂ ಸ್ವಜನ ಪಕ್ಷಪಾತ ಮಾಡಿದರೆ ಎಂದಿಗೂ ನಿರ್ಭಯ, ನಿರ್ಭೀತಿಯ ಆಡಳಿತವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ಕೊಡಲು ಸಾಧ್ಯವಾಗುವುದಿಲ್ಲ ಅಂದರೆ ಇಲ್ಲಿ ಕೇವಲ ಸರಕಾರದ ಪ್ರಶ್ನೆ ಮಾತ್ರವಲ್ಲ. ಜನಪ್ರತಿನಿಧಿಗಳು, ನಮ್ಮ ನಮ್ಮ ಹಕ್ಕನ್ನು ಮತ್ತು ಕರ್ತವ್ಯವನ್ನು ಅರಿತಾಗ ಮತ್ತು ನಮ್ಮ ಆತ್ಮಾವಲೋಕನ ಮಾಡಿಕೊಂಡಾಗ ಮಾತ್ರ ಸಾಧ್ಯವಾಗುತ್ತದೆ. ಹಾಗೆಯೇ

ಸರಕಾರವನ್ನು ನಡೆಸುವವರಿಗೆ ಸಂಪೂರ್ಣವಾದ ಬೆಂಬಲವನ್ನು ಕೊಡಬೇಕು. ಸರ್ಕಾರವೂ ಅಷ್ಟೇ ಪಾರದರ್ಶಕತೆಯಿಂದ ಆಡಳಿತ ನಡೆಸಬೇಕಾಗುತ್ತದೆ. ಒಂದು ಜಾತಿಯ ವಿರುದ್ಧ ಇನ್ನೊಂದು ಜಾತಿಯವನಿಗೆ ಪ್ರಚೋದನೆ ಕೊಡುವುದು ಅವನ ವಿರುದ್ಧ ಇನ್ನೊಂದು ಜಾತಿಯವನಿಗೆ ಪ್ರಚೋದನೆ ಕೊಡುವ ಮಾತುಗಳನ್ನು ಜನಪ್ರತಿನಿಧಿಗಳಾದ ನಾವು ಸದನದಲ್ಲಿ ಮಾತನಾಡುವ ಮೂಲಕ ರಾಜ್ಯದ ಜನತೆಯನ್ನು ಪ್ರಚೋದಿಸುವ ದುರ್ಭರಪ್ರಸಂಗವನ್ನು ತರಬಾರದು. ಇಲ್ಲಿ ನೋಡಿದರೆ ಇವತ್ತು ನಾವು ರಾಜ್ಯವನ್ನು ಶಾಂತಿಕಡೆ ಒಯ್ಯುತಿದ್ದೇವೋ ಅಥವಾ ಇನ್ನಷ್ಟು ಅಶಾಂತಿ ಕಡೆಗೆ ತಳ್ಳಲು ವೈಯಕ್ತಿಕ ಕಚ್ಚಾಟಗಳನ್ನು ಮಾಡಿ ಜನತೆಯ ನಗೆಪಾಟಲಿಗೆ ಈಡಾಗುತ್ತಿದ್ದೇವೋ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಇವತ್ತು ಬಿಜೆಪಿ, ಪಕ್ಷೇತರ, ಕಾಂಗ್ರೆಸ್ ಇರಬಹುದು, ಪ್ರಜಾಪ್ರಭುತ್ವದಲ್ಲಿ ಸರ್ಕಾರಗಳು ಬರುತ್ತವೆ, ಹೋಗುತ್ತವೆ, ಆದರೆ ಪ್ರತಿ ಪ್ರತಿನಿಧಿ ತನ್ನ ಕ್ಷೇತ್ರ, ಊರು ಒಣಿ ಇಡೀ ರಾಜ್ಯದ ಜವಾಬ್ದಾರಿ ಹೂರಬೇಕಾಗುತ್ತದೆ. ಅಧಿಕಾರಿಗಳ ವರ್ಗಾವಣೆಯಲ್ಲಿ ಸಲಹೆ ಕೊಡಬಹುದು. ನಾನು ಒಂದು ಮಾತು ಹೇಳಲು ಇಚ್ಚಿಸುತ್ತೇನೆ, ಮಾನ್ಯ ಖರ್ಗೆಯವರಿಗೆ : ಮಾನ್ಯ ಸಿಂಧ್ಯಾರು ಗೃಹಸಚಿವರಾಗಿದ್ದಾಗ ಪ್ರತಿಯೊಬ್ಬ ಶಾಸಕನನ್ನೂ ಕೇಳುತ್ತಿದ್ದರು. ನಿನಗೆ ಯಾರು ಬೇಕು ಅಂತ. ಎಲ್ಲರು ಏನು ತಿಳಿದುಕೊಳ್ಳುತ್ತಿದ್ದರು ಅಂದರೆ ಇವರು ನಮ್ಮನ್ನು ಕೇಳಿ ಹಾಕುತ್ತಾರಲ್ಲಪ್ಪ, ಎಂಥಾ ಒಳ್ಳೆಯ ಹೋಂ ಮಿನಿಸ್ಟರಿವರು ಅಂತ. ಆಮೇಲೆ ಅವರು ಅಧಿಕಾರಿಗಳನ್ನು ಕರೆದು ಅಲ್ಲಿ ಏನು ಇದೆ ಅಲ್ಲಿ ಯಾವರೀತಿ ಹಿಂದೂಮುಸ್ಲಿಂ ದಂಗೆ ಇದೆಯೋ, ದಲಿತರಿದ್ದಾರೋ ಎಂದು ತಿಳಿದುಕೊಂಡು, ಇವರು ಯಾವ ಅಧಿಕಾರಿಯನ್ನು ಕೇಳುತ್ತಿದ್ದರು ಅವನನ್ನು ಅಲ್ಲಿಗೆ ಹಾಕುವುದು ಸೂಕ್ತವಲ್ಲವೆಂದು ಕಂಡುಬಂದರೆ ಸಾರಿ ಮಿಸ್ಟರ್, ಅಲ್ಲಿ ಶಾಂತಿಪಾಲನೆ ಮಾಡಬೇಕಾದರೆ ಅಲ್ಲಿ ಲಾ ಅಂಡ್ ಆರ್ಡರ್ ಪಾಲನೆ ಮಾಡುವ ಅಧಿಕಾರಿಯನ್ನು ಹಾಕಬೇಕಾಗುತ್ತದೆ ಎಂದು ಶಾಸಕರಿಗೆ ಹೇಳುತ್ತಿದ್ದರು. ಈ ರೀತಿಯ ಆಡಳಿತ ಬರಬೇಕು. ಪ್ರತಿನಿಧಿಗಳನ್ನು ಕೇಳಬೇಕು, ಆದರೆ ಯೋಗ್ಯತೆ ಇದ್ದರೆ ಅದನ್ನು ಮಾಡಬೇಕು, ಅದು ಬಿಟ್ಟು ಅಯೋಗ್ಯರಾಗಿದ್ದರೂ ನಾವು ಇದು ಆಗಲೇಬೇಕು ಎಂಬ ಹಠಮಾರಿತನದಿಂದ ಸಮಾಜದ ಹಿತದೃಷ್ಟಿಯಿಂದ ಜನತೆಯ ಹಿತದೃಷ್ಟಿಯಿಂದ ನಾವು ಕೈಬಿಡಬೇಕು. ಹಠಿಮಾರಿತನ ನಾವು ಕೈಬಿಡದೇಹೋದರೆ ತಾವು ನ್ಯಾಯ ನಿಷ್ಠೂರವಾದಂತಹ ನಿರ್ಣಯವನ್ನೂ ತೆಗೆದುಕೊಳ್ಳ ಬೇಕೆಂದು ಹೇಳುತ್ತಾ, ಇವತ್ತಿನ ದಿವಸ ಇದನ್ನೆಲ್ಲ ನೋಡಿದರೆ ಇನ್ನು ಮುಂದೆ ಯಾವರೀತಿ ಶಾಂತಿಯನ್ನು ಈ ರಾಜ್ಯದಲ್ಲಿ ಕಾಪಾಡಬೇಕು, ಕಾನೂನು ಸುವ್ಯವಸ್ಥೆ ಮಾಡಬೇಕೆನ್ನುವ ಸಲುವಾಗಿ ಸುದೀರ್ಘವಾದ ಚರ್ಚೆ ಈ ಸದನದಲ್ಲಿ ನಡೆದಿದೆ. ಅದಕ್ಕೆ ನಾವು ನಮ್ಮ ಆತ್ಮಾವಲೋಕನ ಮಾಡಿಕೊಂಡು ಇನ್ನು ಮುಂದಾದರೂ ಸಹಿತ ಅದು ಗೃಹಮಂತ್ರಿಗಳೇ ಇರಲಿ ಮುಖ್ಯ ಮಂತ್ರಿಗಳೇ ಇರಲಿ ಸರ್ಕಾರದ ಪರವಾಗಿರತಕ್ಕಂತ ಶಾಸಕರು, ವಿರೋಧ ಪಕ್ಷದವರೇ ಇರಲಿ ಯಾವುದೇ

ಶಾಸಕರಿರಲಿ ನಮ್ಮೆಲ್ಲರ ಜವಾಬ್ದಾರಿ ಈ ರಾಜ್ಯದ ಶಾಂತಿಪಾಲನೆ ಎನ್ನುವುದನ್ನು ಅರಿತುಕೊಂಡು ಸರ್ಕಾರ ನಡೆಸುವವರಿಗೆ ಸಹಕಾರಿಗಳಾಗಬೇಕು ಅಧಿಕಾರಿಗಳು ನಾವು ನಿರ್ಭೀತಿಯಿಂದ ಕರ್ತವ್ಯ ಮಾಡಿದರೆ ಸರ್ಕಾರ ನಮ್ಮನ್ನು ರಕ್ಷಣೆ ಮಾಡುತ್ತದೆನ್ನುವ ಭರವಸೆ ಬೇಕಾಗಿದೆ. ಅನೇಕ ಒಳ್ಳೆಯ ಅಧಿಕಾರಿಗಳಿದ್ದಾರೆ ಅವರಿಗೆ ಭಯವಿದೆ. ಇವತ್ತು ಈ ಪಕ್ಷದ ಆಡಳಿತ ಬಂತು, ಗೃಹಸಚಿವರು ಇಂಥವರು ನಾವೇನಾದರೂ ನ್ಯಾಯವಾದದ್ದನ್ನು ಮಾಡಿದ್ದರೆ ನಾಳೆ ನಮಗೇನಾದರೂ ತೊಂದರೆಯಾದೀತೆನ್ನುವ ಭಯದಲ್ಲಿ ಅನೇಕ ಪೋಲಿಸ್ ಅಧಿಕಾರಿಗಳಿದ್ದಾರೆ. ಅಂಥವರು ನಿರ್ಭೀತಿಯಿಂದ ಕೆಲಸ ನಿರ್ವಹಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕು ಅದಕ್ಕೆ ನಾವು ಸ್ಪಂದಿಸುತ್ತೇವೆ ಇನ್ನು ಮುಂದಾದರೂ ಸಹಿತ ರಾಜ್ಯದಲ್ಲಿ ಶಾಸಕರ ಹತ್ಯೆ, ರೈತರ ಹತ್ಯೆ ಶಿಕ್ಷಕರ ಹತ್ಯೆ, ದಲಿತರ ಹತ್ಯೆ ಇವನ್ನೆಲ್ಲ ನೋಡಿದರೆ ಶಾಂತಿಪ್ರಿಯವಾದಂತಹ ಕರ್ನಾಟಕ ರಾಜ್ಯಕ್ಕೆ ನಮ್ಮ ಸುತ್ತಮುತ್ತಲಿನಿಂದ ಈಗಾಗಲೇ ನಕ್ಸಲೀಯರು ಹೆಣೆದುಕೊಂಡಿದ್ದಾರೆ ಗೂಂಡಾ ಜನ, ಸಮಾಜಘಾತಕ ಜನಗಳಿಂದ, ನಾವು ನಮ್ಮನ್ನು, ನಮ್ಮ ರಾಜ್ಯವನ್ನು ರಕ್ಷಿಸಿಕೊಳ್ಳಬೇಕಾದರೆ ಈಗಲೇ ಎಚ್ಚರಿಕೆಯನ್ನು ವಹಿಸಬೇಕಾಗಿದೆ, ಬಿಹಾರದಲ್ಲಿ ಇವೊತ್ತು ಪರಿಸ್ಥಿತಿ ಕೈ ಮೀರಿ ಹೋಗಿದೆ, ಒಬ್ಬ ಮನುಷ್ಯ ಕೊಡುವ ಫಿರ್ಯಾದಿಯನ್ನು ಪೋಲೀಸ್ ಸ್ಟೇಷನ್ನಿಲ್ಲಿ ಅದನ್ನು ರಿಜಿಸ್ಟರ್ ಮಾಡಿಕೊಳ್ಳದೇ ಇದ್ದರೆ, ಕ್ರಮ ಜರುಗಿಸದೆ ಇದ್ದರೆ, ಸರ್ಕಾರ ನೋವಿಗೆ ಸ್ಪಂದಿಸದೇ ಇದ್ದರೆ ಆ ವ್ಯಕ್ತಿ ಕಾನೂನನ್ನು ತನ್ನ ಕೈಗೆತ್ತಿಕೊಳ್ಳುತ್ತಾನೆ. ಕಾನೂನು ರಕ್ಷಣೆ ಸಿಗದೆ ಇದ್ದಾಗ, ಆತ್ಮರಕ್ಷಣೆಗಾಗಿ ಕಾನೂನನ್ನು ಮರೆತು ಸಮಾಜದಲ್ಲಿ ಘಾತಕ ಕೆಲಸಗಳು ನಡೆಯುತ್ತವೆ. ಅದಕ್ಕೆ ಅವಕಾಶ ಕೊಡದೆ ಕಾನೂನನ್ನು ಕೈಗೆತ್ತಿಕೊಳ್ಳಲು ಯಾರು ಪ್ರಯತ್ನಿಸುವರೋ ಅವರಿಗೆಲ್ಲ ಕಠಿಣವಾದ ಬಿಗಿಯಿಂದ ಆಡಳಿತ ನಡೆಯಲಿ. ಮಾನ್ಯ ಖರ್ಗೆಯವರು ರಾಜೀನಾಮೆ ಪಡೆಯುವುದರಿಂದ ಇನ್ನು ಮುಂದೆ ಇಂಥಾದ್ದು ನಡೆಯುವುದಿಲ್ಲ ಅಂದರೆ ಅವರು ಕೊಟ್ಟುಬಿಡಲಿ. ಇವತ್ತು ಅವರಿಂದ ಏನಾದರೂ ತಪ್ಪಾಗಿದ್ದರೆ ನಾವು ಕೇಳಬಹುದಾಗಿತ್ತು ಎಲ್ಲ ಮಂತ್ರಿಗಳಿದ್ದಾಗಲೂ ಆಗಿದೆ, ಹಿಂದೊಂದು ಕಾಲವಿತ್ತು; ಇಂಥ ಘಟನೆಗಳು ನಡೆದಾಗ ಸಚಿವರು ವೈಯಕ್ತಿಕವಾಗಿ ಮನಸಿನಲ್ಲಿ ಖೇದಮಾಡಿಕೊಂಡು ರಾಜೀನಾಮೆ ಕೊಟ್ಟು ಹೋಗುವಂತಹ ಕಾಲ ಇತ್ತು. ಇವತ್ತು ಅದಿಲ್ಲ. ಅದಕ್ಕೆ ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ಎಲ್ಲರೂ ಕಾರಣ ಭೂತರಿರುವುದರಿಂದ ನಮ್ಮನ್ನು ನಾವು ತಿದ್ದಿಕೊಳ್ಳೋಣ. ಆಡಳಿತ ನಡೆಸುವವರು ದಯವಿಟ್ಟು ಇನ್ನು ಮುಂದಾದರೂ ಸಹಿತ ಇವತ್ತು ಎಲ್ಲರೂ ವಿವರವಾಗಿ ಹೇಳಿದ್ದಾರೆ, ಏನೇನಾಗಿದೆ, ಸ್ವಜನಪಕ್ಷಪಾತವಾಗಿದೆ, ಆಡಳಿತದಲ್ಲಿ ಬಿಗುವಿಲ್ಲವೆಂದು ಪೋಲೀಸ್ ಇಲಾಖೆಯಲ್ಲಿನ ಸ್ಥೈರ್ಯ ಇವೊತ್ತು ಹೋಗಿದೆ. morality ಹೋಗಿದೆ. ಇದನ್ನು ಸರಿಪಡಿಸಿ ಆಡಳಿತ ನಡೆಸಿಕೊಂಡು ಹೋಗಬೇಕೆಂಬ ಮಾತು ಹೇಳುತ್ತ ಆನಂತರ, ದಲಿತರಿಗೆಲ್ಲ ಹೇಳಿಬಿಟ್ಟರಿ, ಏನಂತ, ನಿಮಗೆಲ್ಲ ಭೂಮಿ ಕೊಡುತ್ತೇವೆ ಅಂತ. ಅರಣ್ಯ ಇಲಾಖೆಯವರು ಬಂದು ಇದು

ನಮ್ಮದು ಅಂತ ಹೇಳಿ ಅವರನ್ನು ಒಕ್ಕಲೆಬ್ಬಿಸುತ್ತಾರೆ ಇನ್ನೊಂದು ಕಡೆ ರೈತರು ಅಲ್ಲಿ ದನಮೇಯಲಿಕ್ಕೆ ಹುಲ್ಲುಗಾವಲು ಬೇಕು ಅಂದಾಗ ಅವರನ್ನು ಒಕ್ಕಲೆಬ್ಬಿಸುತ್ತಾರೆ ಘರ್ಷಣೆ ನಡೆಯುತ್ತದೆ, ನಮ್ಮಲ್ಲಿನ ಉದಾಹರಣೆಯನ್ನು ಮಾನ್ಯ ರಂಗನಾಥರ ಗಮನಕ್ಕೆ ತಂದಿದ್ದೆ: ದಲಿತರು ಸಾಗುವಳಿ ಮಾಡುವ ಜಮೀನಿಗೆ ರೈತರು ನಮ್ಮ ದನ ಮೇಯಲು ಹುಲ್ಲುಗಾವಲು ಬೇಕು ಅಂತಾರೆ ಅರಣ್ಯ ಇಲಾಖೆಯವರು ನಮ್ಮದು ಅಂತಾರೆ ಘರ್ಷಣೆ ನಡೆದು ಇಂತಹುದೇ ಅನಾಹುತ ಆಗುವಂತಹ ಪ್ರಸಂಗ ಇತ್ತು, ನಾನೇ ಮಂತ್ರಿಗಳ ಗಮನಕ್ಕೆ ತಂದು ಅಲ್ಲಿ ಹೋಗಿ ಹೇಳಿದೆ: ಸರ್ಕಾರ ಕೊಡುವುದಾದರೆ ಕಾನೂನು ಬದ್ಧವಾಗಿ ಕೊಡುತ್ತದೆ ಜನರು ಕಾನೂನನ್ನು ಕೈಗೆ ತೆಗೆದು ಕೊಳ್ಳಬೇಡಿರಿ ಎಂದು ಹೇಳಿ ಸಧ್ಯಕ್ಕಂತೂ ಶಾಂತಿಯನ್ನು ಮಾಡಿದ್ದೇವೆ. ಜಮೀನು ಕೊಡುವುದಿದ್ದರೆ ಕೊಟ್ಟು ಮುಗಿಸಿಬಿಡಿರಿ ಇಲ್ಲದಿದ್ದರೆ ಕೊಡಲಿಕ್ಕೆ ಬರುವುದಿಲ್ಲ ಅಂತ ತೀರ್ಮಾನ ಕೊಟ್ಟರೆ ಇಂತಹ ಘಟನೆಗಳು ಗ್ರಾಮೀಣಪ್ರದೇಶದಲ್ಲಿ ಕಡಿಮೆಯಾಗುತ್ತವೆ ಊರೂರಿನಲ್ಲಿ ಇಂತವು ಇವೆ, ಎಲ್ಲರೂ ಅರ್ಜಿ ಹಾಕಿಬಿಟ್ಟಿದ್ದಾರೆ, ಎಲ್ಲಾ ಭೂಮಿಗೆ ಅರ್ಜಿ ಹಾಕಿ ಬಿಟ್ಟಿದ್ದಾರೆ, ನಾವು ಸಾಗು ಮಾಡುತ್ತೇವೆ ಅಂತಾರೆ, ರೈತರು ನಮ್ಮ ಎತ್ತುದನ ಮೇಯಿಸುವುದಕ್ಕೆ ಬೇಕು ಅಂತಾರೆ, ಅಲ್ಲಿ ಘರ್ಷಣೆ ಕಾನೂನುಬದ್ಧವಾಗಿ ಕೊಡಲಿಕ್ಕೆ ಬಂದರೆ ಬೇಗ ಕೊಟ್ಟುಮುಗಿಸಿ ಬಾರದೇ ಇದ್ದರೆ ಅರಣ್ಯಭೂಮಿ ಇದ್ದರೆ ಮತ್ಯಾವುದೇ ಜಮೀನಿದ್ದರೆ, ಮಾನ್ಯ ಖರ್ಗೆಯವರು ಕಂದಾಯ ಮಂತ್ರಿಗಳಿದ್ದಾಗ ಕಾನೂನನ್ನು ತಿದ್ದುಪಡಿ ಮಾಡಿದರು: ಹುಲ್ಲುಗಾವಲನ್ನು ಸಾಗುವಳಿಗೆ ಕೊಡಬಾರದು ಅಂತ. ಆದರೆ ದಲಿತರು ಸಾಗುವಳಿ ಮಾಡುತ್ತೇವೆಂದರೆ ಹುಲ್ಲುಗಾವಲು ಇದ್ದರೂ ಸಹಿತ ಕಂದಾಯ ಭೂಮಿಯನ್ನು ಕೊಡಬಹುದು ಎಂದು ಕಾನೂನು ತಿದ್ದುಪಡಿ ಮಾಡಿದಿರಿ. ಬೇರೆಯವರು ಮಾಡಿದರೆ ಕೊಡಲು ಬರುವುದಿಲ್ಲ. ಆದರೆ ದಲಿತರು ಮಾಡಿದರೆ ಮಾತ್ರಕೊಡಬಹುದೆಂದು ಕಂದಾಯ ಕಾನೂನನ್ನು ತಿದ್ದುಪಡಿ ಮಾಡಿದಿರಿ. ಆ ಪ್ರಕಾರ ಎಷ್ಟು ಜನರಿಗೆ ಕೊಟ್ಟಿದ್ದೀರಿ? ನಾನೇ ಹೇಳುತ್ತೇನೆ : ಈ ವಿಧಾನಸಭೆಯ ಅಧ್ಯಕ್ಷರ ಸ್ಥಾನವನ್ನು ವಹಿಸಿದ್ದವರು ಹುಲ್ಲುಗಾವಲನ್ನು ಕೊಡಲಿಕ್ಕೆ ಬರುವುದಿಲ್ಲ ಅಂತ ರೈತರನ್ನು ಒಂದು ಕಡೆ ಪ್ರಚೋದನೆ ಮಾಡುತ್ತಿದ್ದಾರೆ, ದಯವಿಟ್ಟು ಒಟಗಾಗಿ ದಲಿತರನ್ನು ಬಲಿ ತೆಗೆದುಕೊಳ್ಳುವಂತಹ ಕೆಲಸ ವಿಧಾನಸಭೆಯಿಂದಲೂ ನಡೆದಿದೆ. ಅವನ್ನು ತಿದ್ದಿಕೊಳ್ಳಿ. ನೀವು ಕೊಟ್ಟರೆ ನಮಗೇನಿಲ್ಲ, ಇದು ತಲತಲಾಂತರದಿಂದ ಮುಂದುವರೆದುಕೊಂಡು ಹೋಗಿದೆ. ಕೊಡಲಿಕ್ಕೆ ಬಂದರೆ ಕೊಟ್ಟುಬಿಡಿ, ಬಾರದೇ ಇದ್ದರೆ ಬಿಡಿಸಿಬಿಡಿ, ಆ ಮೂಲಕ ಈ ದುರಂತಕ್ಕೆ ಅಂತ್ಯ ಹಾಡೋಣ ಎಂಬ ಮಾತು ಹೇಳಿ ನಾವು ಇವತ್ತು ಮಹಾತ್ಮಗಾಂಧಿಯವರನ್ನು ನೆನೆಯುತ್ತಿರುತ್ತೇವೆ ನಮ್ಮ ಅಹಿಂಸೆಯನ್ನು ಎತ್ತಿಹಿಡಿದ ಪರಮಪುರಷ ಅನ್ನುತ್ತೇವೆ. ಅವರಿಗೇ ಗುಂಡುಹಾಕಿದ ಈ ಸಮಾಜ, ಏಸುಕ್ರಿಸ್ತನನ್ನು ಹೊತ್ತು ಕುಣಿದಾಡುತ್ತೇವೆ, ಅವನನ್ನೂ ಶಿಲುಬೆಗೇರಿಸಿದ ಸಮಾಜ ಮಹಾತ್ಮ ಬಸವೇಶ್ವರರು ಕೂಡ ಸಂಗಮದಲ್ಲಿ ಐಕ್ಯರಾದರು ಅಂತ

ಹೇಳುತ್ತಿದ್ದೇವೆ, ದಲಿತರ ಮುಂದುವರಿದವರ ವಿವಾಹ ನಡೆಸಿ ಸಮಾಜ ಸುಧಾರಣೆ ಮಾಡಲಿಕ್ಕೆ ಹೋಗಿ ಬಸವಣ್ಣನವರು ಐಕ್ಯರು ಎಂದು ಧರ್ಮದ ಹಿತದೃಷ್ಟಿಯಿಂದ ಹೇಳುತ್ತಾರೆ ಆದರೆ ಕೂಡಲಸಂಗಮದಲ್ಲಿ ಅವರು ಹಾರುವಂತೆ ಮಾಡಿದ ಸ್ವಾರ್ಥಿಗಳು, ಸಮಾಜವಿರೋಧಿಗಳೂ ಇರುವಾಗ ನಮ್ಮನ್ನು ಸ್ವಲ್ಪ ಮಟ್ಟಿಗೆ ನಾವು ತಿದ್ದಿಕೊಂಡು ಇನ್ನೊಬ್ಬರನ್ನು ಸುಧಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ಮಾತ್ರ ಶಾಂತಿಪಾಲನೆಯಾಗುತ್ತದೆ, ಸಮಾಜದಲ್ಲಿ ಸಹಕಾರ ಬರುತ್ತದೆ ಬಂಧುತ್ವ ಬರುತ್ತದೆ ಸಹೋದರತ್ವ ಬರುವಂತಹಕೆಲಸವನ್ನು ದಯವಿಟ್ಟು ನಾವೂನೀವೂ ಎಲ್ಲ ಮಾಡೋಣ. ಸಿಬಿಐಗೆ ಈ ಘಟನೆ ಕಳುಹಿಸಿ ಅನ್ನುತ್ತಿದ್ದೀರಿ, ಅದೇನಾಗುತ್ತದೋ ಆಗಲಿ, ಕಾನೂನಿನ ಪ್ರಕಾರ ಅವರು ಕ್ರಮ ಕೈಗೊಳ್ಳುತ್ತಾರೆ, ಒಳ್ಳೆಯ ಹೆಸರು ಬರಬಹುದು. ಎಲ್ಲೆಲ್ಲಿ ರಾಜ್ಯದಲ್ಲಿ ದುಷ್ಟರು ಗೂಂಡಾಗಳು ಇದ್ದಾರೆ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಿ ಭೀತಿ ಹುಟ್ಟಿಸದೇ ಹೋದರೆ ಇವತ್ತು ಎಂಎಲ್‌ಎ ಆಡಳಿತ ಪಕ್ಷದವರೇ ಇದ್ದರೆ ಏನು ಮಾಡಿದರೂ ನಡೆಯುತ್ತದೆ, ವಿರೋಧಪಕ್ಷದವರಿದ್ದರೆ ನ್ಯಾಯ ಸಿಗುವುದಿಲ್ಲವೆಂಬ ವಾತಾವರಣ ಈ ರಾಜ್ಯದಿಂದ ಹೋಗಬೇಕು. ನಿಮ್ಮ ಆಡಳಿತದಲ್ಲಿ ಪಾರ ದರ್ಶಕತೆಯನ್ನು ಹೇಳಿದ ಪ್ರಕಾರ ತರಲಿಕ್ಕೆ ಪ್ರಯತ್ನ ಮಾಡಿರಿ ಅಂತ ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

5.50 ಪಿ.ಎಂ.

+ ಆರ್.ಕೃಷ್ಣಮೂರ್ತಿ (ಸಂತೆಮರಳ್ಳಿ): ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಕಾರ್ಯಕಲಾಪಗಳ ಪಟ್ಟಿಯಲ್ಲಿ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ಪ್ರಸ್ತಾವ ಇದ್ದರೂ ಕೂಡ ಇವತ್ತು ನಮ್ಮ ಸಭಾನಾಯಕರು ಈ ಗಂಭೀರವಾದ ಪರಿಸ್ಥಿತಿಯನ್ನು ಅವಲೋಕನ ಮಾಡಿ ಮಾತನಾಡುಲು ಅವಕಾಶ ಮಾಡಿಕೊಟ್ಟಿದ್ದಕ್ಕೋಸ್ಕರ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತು ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕು ಕಂಬಾಲಪಲ್ಲಿಯಲ್ಲಿ ದಲಿತರನ್ನು ದಹಿಸತಕ್ಕಂಥ ಪ್ರಕರಣ ಏನು ಇದೆ, ಇದು ನಿಜಕ್ಕೂ ಕೂಡ ಖಂಡನೀಯ ವಿಚಾರ ಎಂದು ನಾನು ವೈಯಕ್ತಿಕವಾಗಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಸಾಧುಸಂತರು ಬಾಳಿದ ಈ ನಾಡಿನಲ್ಲಿ ಭಾರತದೇಶಕ್ಕೆ ಅಹಿಂಸೆ ಮುಖಾಂತರ ಸ್ವಾತಂತ್ರ್ಯವನ್ನು ತಂದು ಕೊಟ್ಟಂಥ ಮಹಾತ್ಮಗಾಂಧಿಯವರು ಬಾಳಿದಂಥ ಈ ದೇಶದಲ್ಲಿ ಬುದ್ಧ, ಬಸವ, ಅಂಬೇಡ್ಕರ್‌ರವರು ಇದ್ದಂಥ ಈ ಒಂದು ದೇಶದಲ್ಲಿ ಇಂಥ ಘಟನೆಗಳು ನಡೆಯುತ್ತಿರುವುದು ನಿಜಕ್ಕೂ ಕೂಡ ಬಹಳ ವಿಷಾದನೀಯ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ದಲಿತರನ್ನು ದಹಿಸಿರುವ ಬಗ್ಗೆ ನಾವು ಪತ್ರಿಕೆಗಳಲ್ಲಿ ಮಾಧ್ಯಮಗಳ ಮುಖಾಂತರ ನೋಡಿರುವ ಈ ಸಂದರ್ಭದಲ್ಲಿ ಮನುಷ್ಯ ಮನುಷ್ಯನನ್ನು ದಹಿಸುವುದು ಇದೆಯಲ್ಲ, ಅದು ಬಹಳ ಕ್ರೂರವಾದುದು. ಆ ಮಾನವತೆಯ

ಮೌಲ್ಯಗಳು ನಮ್ಮ ದೇಶದಲ್ಲಿ ಏಕೆ ಇವತ್ತಿನದಿವಸ ಈ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಬಹಳ ನೋವಿನಿಂದ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಈ ಒಂದು ದೇಶ ಅದರದೇ ಆದ ಒಂದು ಪರಂಪರೆ, ಬಹಳ ಶಾಂತಿ ಸೌಹಾರ್ದದಿಂದ ಬಾಳುವ ಈ ನಾಡಿನಲ್ಲಿ ಈ ಸಮಾಜ ಈ ಒಂದು ದಿಕ್ಕಿನಲ್ಲಿ ಸಾಗಬೇಕಾದರೆ ಏನು ಕಾರಣವೆನ್ನುವುದು ಕೂಡ ಬಹಳ ಮುಖ್ಯ. ಸ್ವಾತಂತ್ರ್ಯ ಬಂದು 53-54 ವರ್ಷಗಳ ಸಂದರ್ಭ ಈ ಒಂದು ಭಾರತ ದೇಶಕ್ಕೆ ನಮ್ಮದೇ ಆದ ಒಂದು ಸಂವಿಧಾನದ ಚೌಕಟ್ಟಿನ ಕೆಲಸ ಮಾಡುತ್ತಿದ್ದರೂ ಕೂಡ ಪ್ರತಿಯೊಬ್ಬನೂ ಕೂಡ ಅವನದೇ ಆದ ಫಂಡಮೆಂಟಲ್ ರೈಟ್ಸನ್ನು ಅಳವಡಿಸಿಕೊಂಡಿದ್ದರೂ ಕೂಡ ಇವತ್ತು ಭಾರತದೇಶದ ಪ್ರತಿಯೊಬ್ಬ ಪ್ರಜೆಗೂ ರಕ್ಷಣೆ ಸಿಗುತ್ತಿಲ್ಲವೇನೊ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಅಧಿಕಾರದ ವಿಕೇಂದ್ರೀಕರಣ, ಅದು ಶಾಸಕಾಂಗ ಇರಬಹುದು, ಕಾರ್ಯಾಂಗ ಇರಬಹುದು, ನ್ಯಾಯಾಂಗ ಇರಬಹುದು, ಇವತ್ತು ಎಲ್ಲಾ ಹಂತಗಳಲ್ಲೂ ಕೂಡ ಅಧಿಕಾರದ ವಿಕೇಂದ್ರೀಕರಣದ ವ್ಯವಸ್ಥೆಯನ್ನು ನಾವು ಕಾಣುತ್ತಿದ್ದೇವೆ. ಉದ್ದೇಶ ಏನು, ಈ ಅಧಿಕಾರ ವಿಕೇಂದ್ರೀಕರಣದ ಮುಖೇನ ಈ ಒಂದು ಆಡಳಿತವನ್ನು ಚುರುಕುಗೊಳಿಸತಕ್ಕಂಥ, ಅದನ್ನು ಬಿಗಿಗೊಳಿಸತಕ್ಕಂಥ, ರಕ್ಷಣೆಯನ್ನು ಕೊಡುವ ದಿಕ್ಕಿನಲ್ಲಿ ಇವತ್ತು ಕಾನೂನನ್ನು ತಿದ್ದುಪಡಿ ಮಾಡಿ ಈ ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯನ್ನು ಇವತ್ತು ಈ ಮೂರುಹಂತಗಳಲ್ಲಿ ನಾವು ತಂದಿದ್ದೇವೆ. ಆದರೂ ಕೂಡ ಈ ಸಮಾಜದಲ್ಲಿ ಇವತ್ತು ದೀನದಲಿತರಿಗೇ ಅಲ್ಲ, ಶ್ರೀಸಾಮಾನ್ಯನಿಗೂ ಕೂಡ ರಕ್ಷಣೆ ಸಿಗುವ ದಿಕ್ಕಿನಲ್ಲಿ ನಮ್ಮ ಸಮಾಜ ಸಾಗುತ್ತಿಲ್ಲ. ಇವತ್ತು ನಾವೆಲ್ಲರೂ ಕೂಡ ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕಾಗಿದೆ. ಈ ಕಾನೂನಿನಲ್ಲಿ ತಪ್ಪು ಮಾಡಿದವನಿಗೆ ಶಿಕ್ಷೆ ಆದಾಗ ಇನ್ನೊಮ್ಮೆ ತಪ್ಪು ನಡೆಯುತಕ್ಕ ದಿಕ್ಕಿನಲ್ಲಿ ಅವರ್ಯಾರು ಕೂಡ ಸಾಗುವುದಿಲ್ಲ, ಆ ದಿಕ್ಕಿನಲ್ಲಿ ಇವತ್ತು ನಮ್ಮ ಸರ್ಕಾರ ಆಡಳಿತ ಯಂತ್ರವನ್ನು ಹಿಡಿದು ಅಧಿಕಾರವನ್ನು ಮಾಡುತ್ತಿದೆ, ಆ ದಿಕ್ಕಿನಲ್ಲಿ ಇವತ್ತೇನು ಈ ಒಂದು ಸದನದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ನಮ್ಮ ನಾಯಕರಾದ ಸನ್ಮಾನ್ಯ ಸಿಂಧ್ಯಾರವರು ಇತರರೆಲ್ಲರೂ ಕೂಡ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆ ವಿಚಾರದಲ್ಲಿ ಇವತ್ತು ನ್ಯಾಯಾಂಗ ತನಿಖೆ ಇರಬಹುದು, ಸಿಓಡಿ ತನಿಖೆ, ಸಿಬಿಐ ತನಿಖೆ ಇರಬಹುದು, ಯಾವುದೇ ತನಿಖೆಗಾದರೂ ಕೂಡ ಆ ಒಂದು ತನಿಖೆ ಮುಖಾಂತರ ಬಂದ ವರದಿಯ ಆಧಾರದಮೇಲೆ ಕ್ರಮ ತೆಗೆದುಕೊಂಡಾಗ ಮಾತ್ರ ಇದಕ್ಕೊಂದು ಅರ್ಥ ಬಂದಂತಾಗುತ್ತದೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಶಿವಣ್ಣನವರ್ ಬಸವರಾಜ ನೀಲಪ್ಪ (ಹಾವೇರಿ): ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಕಂಬಾಲಪಲ್ಲಿಯಲ್ಲಿ ಆಗಿರತಕ್ಕ ಘಟನೆ

ಇದು ನಮ್ಮ ಸದನಕ್ಕಾಗಲಿ, ಇವತ್ತು ರಾಜ್ಯಕ್ಕಾಗಲಿ ತಲೆ ತಗ್ಗಿಸುವ ಘಟನೆ ಇವತ್ತು ಕಂಬಾಲಪಲ್ಲಿಯಲ್ಲಿ ಆಗಿದೆ. ಇವತ್ತು ಬಿಹಾರ್ ರಾಜ್ಯದಲ್ಲಿ ನಡೆದ ಘಟನೆಗೂ ಮೀರಿದ ಘಟನೆ ಅಲ್ಲಿ ಆಗಿದೆ. ಈ ಘಟನೆಯ ಬಗ್ಗೆ ನಮ್ಮ ವಿರೋಧಪಕ್ಷದ ನಾಯಕರು ಈಗಾಗಲೇ ಈ ವಿಷಯದ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ನಾನು ಆ ವಿಷಯದ ಬಗ್ಗೆ ಹೆಚ್ಚಿಗೆ ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಸವರ್ಣೀಯರು ಮತ್ತು ಪರಿಶಿಷ್ಟರ ಮೇಲೆ ಆಗಿರುವ ಘಟನೆ ಬಗ್ಗೆ ಅವರ ಮಾನಸಿಕ ಬದಲಾವಣೆ ಮತ್ತು ಅವರನ್ನು ಹತ್ತಿರಕ್ಕೆ ತರತಕ್ಕಂಥ ವ್ಯವಸ್ಥೆಯನ್ನು ಮಾಡಿದರೆ ಇಂಥ ಘಟನೆಗಳು ಮತ್ತೆ ಮರುಕಳಿಸುವುದಿಲ್ಲ. ಇವತ್ತು ಅವರುಗಳು ಸ್ಥಳಾಂತರ ಮಾಡುವುದರಿಂದ ಈ ಘಟನೆ ಇಲ್ಲಿಗೇ ನಿಲ್ಲುವುದಿಲ್ಲ. ಅವರನ್ನು ಮಾನಸಿಕವಾಗಿ ಬದಲಾವಣೆ ಮಾಡುವ ಏನಾದರೂ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಆ ನಿಟ್ಟಿನಲ್ಲಿ ಹೆಚ್ಚಿನ ವಿಚಾರ ಮಾಡಿ ರಾಜ್ಯದಲ್ಲಿ ಮುಂದೆ ಇಂಥ ಘಟನೆಗಳಾಗದ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಲಿ, ಮಾನ್ಯ ಗೃಹಸಚಿವರಾಗಲಿ ಆ ನಿಟ್ಟಿನಲ್ಲಿ ವಿಚಾರ ಮಾಡಬೇಕು. ಇದನ್ನು ಕೇವಲ ರಾಜಕೀಯ ಪ್ರತಿಷ್ಠೆಗಾಗಿ ಭಾಷಣ ಮಾಡತಕ್ಕಂಥದ್ದಲ್ಲ. ಇದು ಯಾವುದೇ ಸರ್ಕಾರವಿದ್ದಾಗಲೂ ಆಗತಕ್ಕ ಘಟನೆಗಳು. ಇವತ್ತು ರಾಜಕೀಯವಾಗಿ ಯಾವುದೇ ಒಂದು ಜನರ ಮನಸ್ಸನ್ನು ಒಲಿಸುವುದಕ್ಕೆ ಮಾತನಾಡಿ ಮತ್ತೊಂದು ಸಮಸ್ಯೆಯನ್ನು ನಾವು ಬಿಗಡಾಯಿಸುತ್ತೇವೆ. ಆ ಕಾರಣಕ್ಕಾಗಿ ಪಕ್ಷಾತೀತವಾಗಿ ಈ ಸಮಸ್ಯೆಯನ್ನು ಪ್ರತಿಯೊಬ್ಬರೂ ನಾವು ಇದು ನಮ್ಮ ಸಮಾಜದಲ್ಲಿ ಇಂಥ ಘಟನೆಗಳು ಆಗಬಾರದು ಎಂದು ಹೇಳಿ ಬಹಳ ನೋವಿನಿಂದ ಈ ಸಮಸ್ಯೆ ಬಗ್ಗೆ ಚರ್ಚೆ ಮಾಡಿ ಅದಕ್ಕೇನಾದರೂ ಒಂದು ದಾರಿ ಹುಡುಕಿ ಮುಂದೆ ಈ ರೀತಿಯ ಘಟನೆಗಳಾಗದ ರೀತಿಯಲ್ಲಿ ಸರ್ಕಾರ ಮತ್ತು ವಿರೋಧ ಪಕ್ಷಗಳಾದ ನಾವು ನೀವು ಕೂಡ ಎಲ್ಲರೂ ಚಿಂತನೆ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ತಮ್ಮ ಮೂಲಕ ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ತಾವು ಕೂಡ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹಸಚಿವರು): ಮಾನ್ಯ ಸಭಾಧ್ಯಕ್ಷರೇ, ಕೋಲಾರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿ ಗ್ರಾಮದಲ್ಲಿ ದಿನಾಂಕ: 11-3-2000ರಂದು ನಡೆದ ಘಟನೆ ಬಗ್ಗೆ ಈಗಾಗಲೇ ಹಲವಾರು ಸದಸ್ಯರುಗಳು ಮಾತನಾಡಿದ್ದಾರೆ ಮತ್ತು ವಿಶೇಷವಾಗಿ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು ಹಾಗೂ ಶ್ರೀಮಾನ್ ಸಿಂಧ್ಯಾಜಿಯವರು, ಶ್ರೀಯುತರುಗಳಾದ ಚೌಡರೆಡ್ಡಿಯವರು, ಸುಬ್ಬಾರೆಡ್ಡಿಯವರು, ಸದಾನಂದಗೌಡರು, ಸೋಮಶೇಖರ್‌ರವರು, ಹನುಮೇಗೌಡರು, ಚೆನ್ನಿಗಪ್ಪನವರು, ಭೈರೇಗೌಡರು, ಬಚ್ಚೇಗೌಡರು, ಶ್ರೀನಿವಾಸರೆಡ್ಡಿಯವರು, ಜಯಪ್ರಕಾಶ್ ಹೆಗಡೆಯವರು,

ಬನ್ನಿಕೋಡ್‌ರವರು, ಮತ್ತು ಈಗತಾನೆ ಇಬ್ಬರು ಮಿತ್ರರು ಕೂಡ ಮಾತನಾಡಿದ್ದಾರೆ. ಈ ಘಟನೆಯ ವಿವರಗಳು ಕೂಡ ಅನೇಕ ರೀತಿಯಿಂದ ಇವತ್ತು ಬೇರೆ ಬೇರೆ ರೀತಿಯಿಂದ ವಿಷಯಗಳೆಲ್ಲಾ ಹೊರಗಡೆ ಬಂದಿವೆ. ನಾನು ಪ್ರತಿಯೊಂದು ವಿಷಯದ ಮೇಲೆ ಅದು ಉತ್ತರವಾಗಿ ಅಥವಾ ಅದನ್ನು ಅಲ್ಲಗಳೆಯುವ ಕೆಲಸಕ್ಕೆ ಹೋಗುವುದಿಲ್ಲ. ಏಕೆಂದರೆ ತಮ್ಮ ತಮ್ಮ ಅನಿಸಿಕೆಗಳನ್ನು ಮಾನ್ಯ ಸದಸ್ಯರು ಇಂಥ ಒಂದು ಅಮಾನುಷವಾದ ಘಟನೆ ಬಗ್ಗೆ ವ್ಯಕ್ತಮಾಡುವಾಗ ಇದರಲ್ಲಿ ಯಾರು ಕೂಡ ಮಧ್ಯ ಪ್ರವೇಶಿಸಬಾರದು ಎನ್ನುವ ದೃಷ್ಟಿಯಿಂದಲೇ ನಾನು ಬಹಳ ಮೂಕಪ್ರೇಕ್ಷಕನಾಗಿ ಮತ್ತು ಈ ಒಂದು ಗೃಹಇಲಾಖೆಯನ್ನು ವಹಿಸಿಕೊಂಡು ನನ್ನ ಅವಧಿಯಲ್ಲಿ ಇಂಥ ಒಂದು ದುರ್ಘಟನೆ ನಡೆಯಿತಲ್ಲಾ ಎನ್ನುವ ಕೊರಗು ಕೂಡ ನನಗಿದೆ. ಅದಕ್ಕಾಗಿ ನಾನು ಹೆಚ್ಚಿನ ಪ್ರಶ್ನೋತ್ತರಗಳಿಗೆ ಉತ್ತರವನ್ನು ಕೂಡ ಕೊಡಬಾರದು ಎನ್ನುವ ದೃಷ್ಟಿಯಿಂದಲೇ ಇಲ್ಲಿ ಕುಳಿತಿದ್ದೇನೆ. ನನಗೆ ಅದೂ ಗೊತ್ತಿದೆ, ಯಾವ ಯಾವ ಸದಸ್ಯರು ಎಷ್ಟೆಷ್ಟು ಪತ್ರಗಳನ್ನು ನನಗೆ ಕೊಡುತ್ತಾರೆ, ಏಕೆಂದರೆ ನನ್ನ ಇಲಾಖೆ ಇದು ಅಭಿವೃದ್ಧಿ ಇಲಾಖೆಯಲ್ಲ. ನನಗೆ ಬರುವ ಪತ್ರಗಳು ವರ್ಗಾವಣೆ ಇಲ್ಲದಿದ್ದರೆ ಪೋಸ್ಟಿಂಗ್ಸ್‌ಗೆ ಬರುವಂಥವು. ನಾನು ಅದನ್ನು ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಯಾರು ಕೊಟ್ಟರು ಎಂದು. ನನ್ನ ಹತ್ತಿರ ಫೋನ್ ಮಾಡಿ ಇಂಥವರನ್ನೇ ಹಾಕಿ ಎಂದು ಹೇಳಿದರು, ಅದು ಕೂಡ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ವಿಷಯ ಗಂಭೀರ ಇದೆ, ಇದನ್ನು ನಾವು ತಿರುಚಿ ಅದನ್ನು ಅವರು ಹೀಗೆ ಮಾಡಿದರು, ಇವರು ಹಾಗೆ ಮಾಡಿದರು, ಅದು ಅವರ ಕಾಲದಲ್ಲಿ ಆಯಿತು, ಇದು ಅವರ ಕಾಲದಲ್ಲಿ ಆಯಿತು ಎಂತಲೂ ಕೂಡ ಹೇಳುವುದಕ್ಕೆ ನನಗೆ ಮನಸ್ಸಾಗುತ್ತಿಲ್ಲ. ನಾನು ಈ ಖಾತೆಯ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ನನ್ನ ಕರ್ತವ್ಯವನ್ನು ನಿಭಾಯಿಸತಕ್ಕದ್ದು ಇದು ನನ್ನ ಮೇಲೆ ಬಿದ್ದಂತಹ ಜವಾಬ್ದಾರಿ. ಈ ಜವಾಬ್ದಾರಿಯನ್ನು ನಾನು ನೇರವಾಗಿ ವಹಿಸುವುದರಲ್ಲಿ ಎಡವಿದರೆ ಅಥವಾ ನನ್ನ ದೃಷ್ಟಿಗೆ ಇದು ಬಂದು ನಿರ್ಲಕ್ಷ್ಯ ಆಗಿದ್ದರೆ ಅಥವಾ ನನ್ನ ದೃಷ್ಟಿಗೆ ಬಂದು ಈ ಘಟನೆ ಬಗ್ಗೆ ಇಂಥಹದ್ದು ಆಗುತ್ತದೆ ಎಂದು ಏನಾದರೂ ಸುಳಿವು ಇದ್ದಿದ್ದರೆ ಖಂಡಿತವಾಗಿಯೂ ತಪ್ಪಿಸತಕ್ಕ ಎಲ್ಲಾ ಪ್ರಯತ್ನಗಳನ್ನು ಕೂಡ ನಾನು ಮಾಡುತ್ತಿದ್ದೆ. ಆ ಘಟನೆ ನನಗೆ ಗೊತ್ತಾದ ತಕ್ಷಣ ನಾನು ಮರುದಿವಸವೇ ಆ ಸ್ಥಳಕ್ಕೆ ಧಾವಿಸಿ ಹೋದೆ ಮತ್ತು ನನ್ನ ಸರ್ಕಾರದ ವತಿಯಿಂದ ಯಾವ್ಯಾವ ಸಹಾಯ ಮತ್ತು ಸಹಕಾರವನ್ನು ನೀಡಬೇಕಾಗಿತ್ತು. ಅದನ್ನು ಕೂಡ ನಿರ್ವಹಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದರು. ಅವರು ಅಲ್ಲೇ ಆದೇಶಗಳನ್ನು ಕೊಟ್ಟರು. ಮಾನ್ಯ ಸಮಾಜ ಕಲ್ಯಾಣ ಸಚಿವರು ಬಂದಿದ್ದರು. ಮಾನ್ಯ ಉಸ್ತುವಾರಿ ಸಚಿವರು ಕೂಡ ಇದ್ದರು. ಮತ್ತು ಅನೇಕ ಸಚಿವರು ಕೂಡಭೇಟಿಯನ್ನು ನೀಡಿದರು. ಅದರ ಜೊತೆಯಲ್ಲಿಯೇ ಮಾನ್ಯ ವಿರೋಧ ಪಕ್ಷದ ಎಲ್ಲಾ ಮುಖಂಡರುಗಳು ಕೂಡ ಅಲ್ಲಿಗೆ ಹೋಗಿ ಸ್ಥಳೀಯ ಜನರಿಗೆ ಸಮಾಧಾನವನ್ನು ಹೇಳಿ ಒಂದು ಶಾಂತಿಯ ವಾತಾವರಣವನ್ನು ತರತಕ್ಕಂಥ

ಪ್ರಯತ್ನವನ್ನು ಎಲ್ಲಾ ಪಕ್ಷದವರು ಮಾಡಿದ್ದಾರೆ. ಅದಕ್ಕಾಗಿ ನಾನು ಎಲ್ಲರಿಗೂ ಅನಂತಾನಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಅದೇ ಸಮಯದಲ್ಲಿ ಮಾನ್ಯ ಬನ್ನಿಕೋಡ್ ಅವರು ಹೇಳಿದ ಹಾಗೆ ನಾವು ಈ ಸಂದರ್ಭದಲ್ಲಿ ಪ್ರಚೋದನಕಾರಿಯಾದಂತಹ ಮಾತುಗಳನ್ನು ಆಡತಕ್ಕದ್ದು ಆಗಲಿ ಅಥವಾ ಅದನ್ನು ಬೆಳೆಸತಕ್ಕದ್ದು ಆಗಲಿ ನಾವ್ಯಾರೂ ಕೂಡ ಮಾಡಬಾರದು ಎನ್ನತಕ್ಕ ಮನವಿಯನ್ನು ಮಾಡಿಕೊಳ್ಳುತ್ತೇನೆ. ಕೆಲವು ವಿವರಗಳನ್ನು ನಾನು ಕೊಟ್ಟು ಪುನಃ ಯಾವ ರೀತಿಯಾಗಿ ಸಹಾಯವನ್ನು ಇದರ ಬಗ್ಗೆ ಮಾಡಿದ್ದೇವೆ ಎಂದು ಹೇಳುತ್ತೇನೆ. ನನ್ನ ಹೇಳಿಕೆ ಈ ರೀತಿಯಾಗಿದೆ.

**''ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿ ಗ್ರಾಮದಲ್ಲಿ ದಿ: 11.3.2000ರಂದು ನಡೆದ ಜಾತೀಯ ಘರ್ಷಣೆ ಕುರಿತು**

ದಿನಾಂಕ: 11.3.2000 ರಂದು ಸಾಯಂಕಾಲ 7-30ರ ಸಮಯದಲ್ಲಿ ಕೆಂಚಾರ್ಲ ಹಳ್ಳಿ ಪೋಲೀಸ್ ಠಾಣೆ ವ್ಯಾಪ್ತಿಯ ಕಂಬಾಲಪಲ್ಲಿಯಲ್ಲಿ ಆಂಜನಪ್ಪ, ಶ್ರೀರಾಮಪ್ಪ ಮತ್ತು ಇತರೆ 15 ಜನ ಹರಿಜನರು ಕಿಟ್ಟಿ ಅಲಿಯಾಸ್ ಕೃಷ್ಣಾರೆಡ್ಡಿ ತಂದೆ ರಾಮಪ್ಪ (ಸವರ್ಣೀಯ) 45 ವರ್ಷ ರವರನ್ನು ಇರಿದಾಗ ಕೃಷ್ಣಾರೆಡ್ಡಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಈ ಘಟನೆಯ ಪ್ರತೀಕಾರವಾಗಿ ಸುಮಾರು 150-200 ಸವರ್ಣೀಯರು ಮಾರಕ ಆಯುಧಗಳೊಂದಿಗೆ ಅಕ್ರಮ ಕೂಟ ಮಾಡಿಕೊಂಡು ಅಂಜನಪ್ಪ ಮತ್ತು ಇತರರ (ಪರಿಶಿಷ್ಟ ಜಾತಿ) ಮೇಲೆ ಆಕ್ರಮಣ ನಡೆಸಿ ಅವರನ್ನು ಶ್ರೀರಾಮಪ್ಪ (ಪರಿಶಿಷ್ಟ ಜಾತಿ)ರವರ ಮನೆಯಲ್ಲಿ ಕೂಡಿ ಹಾಕಿ ಅವರ ಮನೆಯ ಮೇಲೆ ಸೀಮೆಎಣ್ಣೆ, ಕಟ್ಟಿಗೆ, ಹುಲ್ಲುಹಾಕಿ ಬೆಂಕಿ ಹಚ್ಚಿರುತ್ತಾರೆ. ಅವರು ಪರಿಶಿಷ್ಟ ಜಾತಿಯವರ ಇನ್ನೊಂದು ಮನೆಗೂ ಬೆಂಕಿ ಹಚ್ಚಿರುತ್ತಾರೆ. ಇದರಿಂದ ಆರು ಜನರು 1 ಆಂಜನಪ್ಪ (2) ಶ್ರೀರಾಮಪ್ಪ (3) ಶಂಕರಪ್ಪ (4) ನರಸಿಂಹಪ್ಪ (5) ಈಶ್ವರಮ್ಮ (6) ಸರಸ್ವತಮ್ಮ ಮನೆಯ ಒಳಗಡೆ ಉಸಿರುಕಟ್ಟಿ ಮತ್ತು ಸುಟ್ಟಗಾಯದಿಂದ ಮೃತಪಟ್ಟಿರುತ್ತಾರೆ, ಬೆಂಕಿಹಚ್ಚಿದ ಪಕ್ಕದ ಇನ್ನೊಂದು ಮನೆಯಲ್ಲಿ ಇಬ್ಬರು ಮಹಿಳೆಯರು ಸುಟ್ಟು ಗಾಯಗೊಂಡಿರುತ್ತಾರೆ, ಅವರಲ್ಲಿ ಪಾಪಮ್ಮ ಎಂಬುವರು ಆಸ್ಪತ್ರೆಗೆ ಸಾಗಿಸುವಾಗ ಮೃತಪಟ್ಟಿರುತ್ತಾರೆ. ಇನ್ನೊಬ್ಬರು ಕೋಲಾರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸವರ್ಣೀಯ ಹಿಂದುಗಳು ಕೆಲವು ಪರಿಶಿಷ್ಟ ಜಾತಿಯ ಜನರ ಮೇಲೂ ಹಲ್ಲೆಯನ್ನು ನಡೆಸಿರುತ್ತಾರೆ. ಈ ಹಲ್ಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ 24 ಮನೆಗಳಲ್ಲಿ ಕೇವಲ 2 ಮನೆಗಳ ಮೇಲೆ ಮಾತ್ರ ಕೇಂದ್ರಿಕೃತವಾಗಿದೆ. ವಿಷಯ ತಿಳಿದ ಕೂಡಲೇ ಪೊಲೀಸ್ ಮಹಾನಿರ್ದೇಶಕರು, ಹೆಚ್ಚುವರಿ ಪೋಲೀಸ್ ಮಹಾನಿರ್ದೇಶಕರು, ಮಧ್ಯ ವಲಯದ ಪೋಲೀಸ್ ಮಹಾನಿರೀಕ್ಷಕರು, ಹೆಚ್ಚುವರಿ ಪೋಲೀಸ್ ಅಧೀಕ್ಷಕರು ಮತ್ತು ಜಿಲ್ಲಾ ದಂಡಾಧಿಕಾರಿಗಳು ಸ್ಥಳಕ್ಕೆ ಧಾವಿಸಿರುತ್ತಾರೆ,

ಮತ್ತು ಗ್ರಾಮದಲ್ಲಿ ಉಳಿದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕುಟುಂಬದವರಿಗೆ ಸೂಕ್ತ ರಕ್ಷಣೆ ಹಾಗೂ ಭದ್ರತಾ ವ್ಯವಸ್ಥೆ ಮಾಡಿರುತ್ತಾರೆ ದಿನಾಂಕ: 12 ಮಾರ್ಚ್‌ರ ಬೆಳಿಗ್ಗೆ ಮೃತಪಟ್ಟ ಒಬ್ಬ ಹಿಂದು ಮತ್ತು 7 ಪರಿಶಿಷ್ಟ ಜಾತಿಯವರ ಶವಗಳ ಮರಣೋತ್ತರ ಪರೀಕ್ಷೆ ನಡೆಸಲಾಗಿರುತ್ತದೆ.

ಮಾನ್ಯ ಮುಖ್ಯಮಂತ್ರಿಗಳು, ಗೃಹ ಮಂತ್ರಿಗಳು ಹಿರಿಯ ಪೋಲೀಸ್ ಅಧಿಕಾರಿಗಳು ಮತ್ತು ಕಂದಾಯ ಅಧಿಕಾರಿಗಳೊಡನೆ ಸ್ಥಳಕ್ಕೆ ಭೇಟಿ ನೀಡಿ ಪರಿಶಿಷ್ಟ ಜಾತಿಯ ಉಳಿದ ಕುಟುಂಬಗಳಿಗೆ ರಕ್ಷಣೆ ನೀಡುವ ಭರವಸೆ ನೀಡಿ ಪರಿಹಾರ ಕಾರ್ಯದ ವ್ಯವಸ್ಥೆ ಮಾಡಿರುತ್ತಾರೆ, ಸಮಾಜ ಕಲ್ಯಾಣ ಸಚಿವರೂ ಕೂಡ ಗ್ರಾಮಕ್ಕೆ ಭೇಟಿ ನೀಡಿರುತ್ತಾರೆ. ಸ್ಥಳೀಯ ದಲಿತ ಸಂಘರ್ಷ ಸಮಿತಿಯ ಮುಖಂಡರುಗಳು ಮತ್ತು ಸದರಿ ಪ್ರದೇಶದ ಜವಾಬ್ದಾರಿಯುತ ನಾಗರಿಕರೊಡನೆ ಚರ್ಚಿಸಿ ಮಾನ್ಯ ಮುಖ್ಯಮಂತ್ರಿಗಳು ಸದರಿ ಘಟನೆಯ ಕುರಿತು ನ್ಯಾಯಾಂಗ ತನಿಖೆ ನಡೆಸುವಂತೆ ಮತ್ತು ಮೃತಪಟ್ಟ ವ್ಯಕ್ತಿಗಳ ಪ್ರತಿ ಕುಟುಂಬಕ್ಕೆ ರೂ. ಒಂದು ಲಕ್ಷ ಪರಿಹಾರ ಧನವನ್ನು ನೀಡುವಂತೆ ಮತ್ತು ಕುಟುಂಬದ ಸದಸ್ಯರೊಂದಿಗೆ ಉದ್ಯೋಗ ನೀಡುವಂತೆ, ಅವಶ್ಯ ಬಿದ್ದರೆ ಬೇರೆಡೆ ಅವರ ಪುನರ್ ವಸತಿ ಮಾಡುವಂತೆ ಮತ್ತು ಈ ಬಗ್ಗೆ ಅವಶ್ಯವಾದ ಹಣಕಾಸಿನ ಸಹಾಯ ಒದಗಿಸುವಂತೆ ಹಾಗೂ ಇಂತಹ ಘೋರ ಅಪರಾಧ ಮಾಡಿದ ದುಷ್ಕರ್ಮಿಗಳ ವಿರುದ್ಧ ಕಟ್ಟು ನಿಟ್ಟಾದ ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದಾರೆ. ಈಗಾಗಲೇ ಪರಿಶಿಷ್ಟ ಜಾತಿಯವರ ಮೇಲಾದ ನರಮೇಧಕ್ಕೆ ಸಂಬಂಧಿಸಿದಂತೆ ಪೋಲೀಸರು 15 ಅಪರಾಧಿಗಳನ್ನು ಬಂಧಿಸಿದ್ದಾರೆ.

ರಾಜ್ಯ ಸರ್ಕಾರವು ಹೆಚ್ಚುವರಿ ಪೋಲೀಸ್ ಮಹಾನಿರ್ದೇಶಕರವರ ನೇತೃತ್ವದಲ್ಲಿ ಸದರಿ ಕೇಸುಗಳ ತನಿಖೆ ಮತ್ತು ಉಳಿದ ಅಪರಾಧಿಗಳ ಬಂಧನಕ್ಕಾಗಿ ವಿಶೇಷ ತನಿಖಾ ಪಡೆಯೊಂದನ್ನು ರಚಿಸುತ್ತಿದೆ. ಚಿಂತಾಮಣಿ ನಗರ ಮತ್ತು ಕಂಬಾಲಪಲ್ಲಿ ಗ್ರಾಮಗಳಲ್ಲಿ ಪ್ರತಿಬಂಧಕ ಆಜ್ಞೆ ಜಾರಿಯಲ್ಲಿದೆ, ಹಿರಿಯ ಅಧಿಕಾರಿಗಳು ಗ್ರಾಮದಲ್ಲಿ ಮೊಕ್ಕಾಂ ಮಾಡಿದ್ದಾರೆ. ವಿವಿಧ ದಲಿತ ಸಂಸ್ಥೆಗಳು ಕೋಲಾರ ಜಿಲ್ಲೆಯ ವಿವಿದ ಸ್ಥಳಗಳಲ್ಲಿ ಮತ್ತು ರಾಜ್ಯದ ವಿವಿಧೆಡೆಗಳಲ್ಲಿ (ಚಿಂತಾಮಣಿ ಕೋಲಾರ, ಶಿಡ್ಲಘಟ್ಟ, ಬಾಗೇಪಲ್ಲಿ, ಗುಲ್ಬರ್ಗಾ, ಚಿತ್ರದುರ್ಗ, ರಾಮನಗರ) ಬಂದ್ ಮತ್ತು ರಸ್ತೆ ತಡೆ ಹಮ್ಮಿಕೊಂಡಿದೆ,

ಕೆಂಚಾರ್ಲ ಹಳ್ಳಿ ಪೋಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಕೆ.ಜಿ.ವೆಂಕಟರಮಣಪ್ಪ ಇವರನ್ನು ನಡೆಯಬಹುದಾದ ಘರ್ಷಣೆಗಳನ್ನು ಅರಿತುಕೊಳ್ಳಲು ವಿಫಲರಾದುದಕ್ಕೆ ಅಮಾನತ್ತಿನಲ್ಲಿಡಲಾಗಿದೆ. ಈ ಕೋಲಾರ ಜಿಲ್ಲೆಯ ಪೋಲೀಸ್ ಅಧೀಕ್ಷಕರು ಮತ್ತು ಹೆಚ್ಚುವರಿ ಪೋಲೀಸ್ ಅಧೀಕ್ಷಕರು ಹಾಗೂ ಚಿಂಚಾಮಣಿ ಉಪ ಪೋಲೀಸ್ ಅಧೀಕ್ಷಕರನ್ನು ವರ್ಗಾಯಿಸಲಾಗಿದೆ.'' ಇಷ್ಟಲ್ಲದೆ ಇದು ತಾತ್ವಿಕವಾಗಿ ಇರತಕ್ಕ

ರಿಪೋರ್ಟ್. ಆದರೆ ಇದರ ಹಿಂದೆ ಇರತಕ್ಕ ಸತ್ಯಾಂಶ ಏನು? ಇದನ್ನು ಕಂಡು ಹಿಡಿಯಬೇಕಾದರೆ ಎಲ್ಲಿಯವರೆಗೆ ಜ್ಯುಡಿಷಿಯಲ್ ಪ್ರೋಬ್ ಆಗುವುದಿಲ್ಲ. ಸಿಟ್ಟಿಂಗ್ ಹೈಕೋರ್ಟ್ ಜಡ್ಜನಿಂದ ಪ್ರೋಬ್ ಆಗುವುದಿಲ್ಲ ಅಲ್ಲಿಯವರೆಗೆ ಸತ್ಯಾಂಶ ಬರುವುದಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಚೀಫ್ ಜಸ್ಟೀಸ್ ಅವರಿಗೆ ಪತ್ರವನ್ನು ಬರೆದಿದ್ದಾರೆ. ಯಾರಾದರೂ ಹೈಕೋರ್ಟ್ ಜಡ್ಜ್ ಅನ್ನು ತಾವು ನೇಮಿಸಿ ನ್ಯಾಯಾಂಗ ತನಿಖೆಯನ್ನು ಮಾಡಿಸಬೇಕು. ಇದರ ಹಿನ್ನಲೆ ಏನು ಇದೆ? ಏಕೆ ಈ ಘಟನೆ ನಡೆಯುತ್ತಿದೆ. ತಾವೆಲ್ಲ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಮಾನ್ಯ ಸಿಂಧ್ಯ ಅವರು ಹೇಳಿದ ಹಾಗೆ ಮತ್ತು ಎಲ್ಲಾ ಮುಖಂಡರುಗಳು ಕೂಡ ಹೇಳಿದ ಹಾಗೆ ಮೂರು ವರ್ಷಗಳಿಂದ ನಡೆದಿದೆ. ಸಿಟ್ಟಿಂಗ್ ಜಡ್ಜ್ ಅವರನ್ನೇ ಮಾಡಲೀ ಅಥವಾ ಅವರ ಅನುಭವಕ್ಕೆ ಏನು ಬರುತ್ತದೋ ಅದರಂತೆ ಯಾರನ್ನು ಬೇಕಾದರೂ ಮಾಡಲಿ, ನಾವು ಅದರಲ್ಲಿ ಮಧ್ಯ ಪ್ರವೇಶಿಸುವುದಿಲ್ಲ. ತಾವು ಹೇಳಿದಂತೆ ಈ ಪ್ರಕರಣ ಕಳೆದ ಮೂರು ವರ್ಷಗಳಿಂದಲೂ ನಡೆಯುತ್ತಿದ್ದು, ಇದರ ಹಿನ್ನಲೆ ಏನು? ಮತ್ತು ಕಾರಣವೇನು? ಎಂಬುದೆಲ್ಲಾ ತನಿಖೆಯಿಂದ ಹೊರಗೆ ಬರುತ್ತದೆ. ಅದು ಬಿಟ್ಟು ಪುನಃ ಅದರ ಬಗ್ಗೆ ಸವಿಸ್ತಾರವಾಗಿ ಹೇಳುತ್ತಾ ಒಬ್ಬರು ಹೇಳಿದ್ದನ್ನು ಮತ್ತೊಬ್ಬರು ಅಲ್ಲಗಳೆಯುವಂಥಾದ್ದು, ಉತ್ತರಕ್ಕೆ ಪ್ರತ್ಯುತ್ತರ ಕೊಡುವುದು ಸರಿಯಲ್ಲ ಎನ್ನುವ ದೃಷ್ಟಿಯಿಂದ ಸೀಮಿತವಾಗಿ ಹೇಳಬೇಕೆಂದು ನಿಂತಿದ್ದೇನೆ. ಎಲ್ಲಕ್ಕಿಂತ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಪ್ರಕಾರ ಅವರಿಗೆ ಏನೇನು ಸೌಲಭ್ಯಗಳು ಸಿಗಬೇಕೋ ಎಲ್ಲವನ್ನೂ ಸರ್ಕಾರ ಒದಗಿಸಿಕೊಡುವತ್ತದೆ ಮತ್ತು ರಾಜ್ಯದಲ್ಲಿ ಇಂತಹ ಘಟನೆಗಳು ಮುಂದೆ ಮತ್ತೆಲ್ಲೂ ಮರುಕಳಿಸದಂತೆ ಈಗಾಗಲೇ ಪೊಲೀಸ್ ಇಲಾಖೆಯಿಂದ ಎಚ್ಚರಿಕೆ ನೀಡಿ ಆದೇಶಿಸಲಾಗಿದೆ. ಒಂದು ವೇಳೆ ಇಂತಹ ಘಟನೆಗಳು ಪುನಃ ಜರುಗಿದಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಎಸ್.ಪಿ.ಯವರೇ ನೇರ ಹೊಣೆಗಾರರಾಗುತ್ತಾರೆಂದು ಕೂಡ ಹೇಳಿದ್ದೇವೆ. ಆದುದರಿಂದ, ನ್ಯಾಯಾಂಗ ತನಿಖೆ ಮುಖಾಂತರ ಯಾರ್ಯಾರ ಹೊಣೆ ಎಷ್ಟೆಷ್ಟು ಇದೆಯೆಂದು ತಿಳಿದು ಬಂದ ನಂತರ ಖಂಡಿತವಾಗಿಯೂ ತಪ್ಪಿತಸ್ಥರ ಮೇಲೆ ಕ್ರಮ ಕೈಕೊಳ್ಳುತ್ತೇವೆ. ಆದಷ್ಟು ಬೇಗ ತನಿಖೆಯನ್ನು ಮುಗಿಸಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಅಡಿಷನಲ್ ಡಿ.ಜಿ.ಪಿ. ಅವರ ಹಂತದಲ್ಲಿಯೇ ಒಂದು ತಂಡ ರಚಿಸಿ ಸ್ಪೆಷಲ್ ಟಾಸ್ಕ್ ಫೋರ್ಸ್ ಮಾಡಿದ್ದು ಅವರೇ ಎಕ್ಸ್‌ಕ್ಲೂಸಿವ್ ಆಗಿ ಪ್ರಕರಣದ ವಿಚಾರಣೆ ಕೈಗೊಳ್ಳಲು ಕ್ರಮ ಕೈಗೊಂಡಿದ್ದೇವೆ. ಎಕ್ಸ್‌ಕ್ಲೂಸಿವ್ ಆಗಿ ಚಾರ್ಜ್‌ಶೀಟ್ ಹಾಕುವವರೆಗೆ ಈ ಪ್ರಕರಣದ ಎಲ್ಲಾ ತನಿಖೆಯನ್ನು ಅವರೇ ಮಾಡಬೇಕೆಂದು ವಿಶೇಷವಾಗಿ ಅವರಿಗೆ ಇದನ್ನು ಒಪ್ಪಿಸಿದ್ದೇವೆ. ಈ ರೀತಿಯಾಗಿ ನಾವು ಇಷ್ಟೊಂದು ನಿರ್ಣಯಗಳನ್ನು ತೆಗೆದುಕೊಂಡಿದ್ದು, ಸಂತ್ರಸ್ತರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲು

ಚಿಂತಾಮಣಿಯಲ್ಲಾಗಲೀ, ಪಕ್ಕದ ಹಳ್ಳಿಯಲ್ಲಾಗಲೀ ಅವರು ಎಲ್ಲಿ ಕೇಳುತ್ತಾರೋ ಅಲ್ಲಿ ಸದರಿ ಸೌಲಭ್ಯ ಒದಗಿಸಿಕೊಟ್ಟು ಮತ್ತು ಯಾರು ಅರ್ಹರಿದ್ದಾರೋ ಅವರಿಗೆ ಸರ್ಕಾರಿ ನೌಕರಿ ಒದಗಿಸಿಕೊಡಬೇಕೆಂಬ ತೀರ್ಮಾನವನ್ನೂ ಸಹ ಸರ್ಕಾರ ಕೈಗೊಂಡಿದೆ. ಜೊತೆಗೆ ಕೃಷಿ ವೃತ್ತಿ ಕೈಗೊಳ್ಳಲು ಒಂದು ಎಕರೆಯಷ್ಟು ಜಮೀನು ಹಾಗೂ ಒಂದು ಹಸು ಒದಗಿಸಿ ಕೊಡುವಂಥ ವ್ಯವಸ್ಥೆಯನ್ನು ಸಮಾಜ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ನಿಗಮ(ನಿ)ದ ವತಿಯಿಂದ ಮಾಡಲು ನಿರ್ಣಯವನ್ನೂ ಸಹ ಮಾಡಿದ್ದೇವೆ. ಆದಕಾರಣ, ಈ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಹಿಡಿಯಲು ನಾವು ನ್ಯಾಯಾಂಗ ತನಿಖೆಗಾಗಿ ವಹಿಸಿದ್ದು, ಸದರಿ ಪ್ರಕರಣದ ವಿಚಾರಣೆ ಸಮಯದಲ್ಲಿ ಯಾರ್ಯಾರು ಹೊಣೆಗಾರರು ಎಂಬುದು ಹೊರಗೆ ಬರುವುದರಿಂದ ನ್ಯಾಯಾಂಗ ತನಿಖೆ ನಡೆಯಲು ತಾವುಗಳೆಲ್ಲರೂ ತಮ್ಮ ಸಹಾಯ-ಸಹಕಾರ ನೀಡಬೇಕೆಂದು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ.

ಶ್ರೀ ಸಿ.ಭೈರೇಗೌಡ: ನಾವು ಸಿ.ಬಿ.ಐ. ಎನ್‌ಕ್ವೈರಿ ಮಾಡಬೇಕೆಂದು ಕೇಳಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ನಿನ್ನೆಯೇ ಇದರ ಬಗ್ಗೆ ಚೀಫ್ ಜಸ್ಟೀಸ್ ಅವರಿಗೆ ಪತ್ರ ಬರೆದಿದ್ದು, ಪ್ರಕರಣದ ತನಿಖೆಗಾಗಿ ಅವರು ಸಿಟ್ಟಿಂಗ್ ಜಡ್ಜ್ ಅನ್ನು ನೇಮಕ ಮಾಡುತ್ತಾರೋ ಅಥವಾ ಬೇರೆ ಯಾರನ್ನು ನೇಮಕ ಮಾಡುತ್ತಾರೋ ಗೊತ್ತಿಲ್ಲ. ಒಂದು ಕಡೆ ಪ್ರಕರಣವನ್ನು ನ್ಯಾಯಾಂಗ ತನಿಖೆಗಾಗಿ ಒಪ್ಪಿಸಬೇಕೆಂದು ನಾವು ನಿರ್ಣಯ ತೆಗೆದುಕೊಂಡ ನಂತರ ಪುನಃ ಅದನ್ನು ಸಿ.ಬಿ.ಐ.ಗೆ ತನಿಖೆಗಾಗಿ ವಹಿಸಿಕೊಡುವುದು ಸೂಕ್ತವೇ? ಅಲ್ಲವೇ? ಹೇಗೆ? ಎಂಬುದು ಪ್ರಶ್ನೆ. ಎರಡನೆಯದಾಗಿ, ಈ ಹಿಂದೆ ಶಾಸಕರಾಗಿದ್ದ ಡಾ: ಯು.ಚಿತ್ತರಂಜನ್‌ರವರ ಕೊಲೆಯಾದಾಗ ಪ್ರಕರಣದ ತನಿಖೆಗಾಗಿ ಸಿ.ಬಿ.ಐ.ಗೆ ವಹಿಸಿದ್ದು ತನಿಖೆ ಯಾವ ರೀತಿ ನಡೆಯುತ್ತಿದೆಯೆಂಬುದನ್ನು ನೋಡುತ್ತಿದ್ದೇವೆ. ಅದೇ ರೀತಿ ಬದನವಾಳು ಗ್ರಾಮದ ಪ್ರಕರಣವನ್ನು ಸಹ ಸಿ.ಬಿ.ಐ.ಗೆ ತನಿಖೆಗಾಗಿ ವಹಿಸಿದ್ದು, ಈಗ ಸದರಿ ಪ್ರಕರಣದ ಟ್ರೈಯಲ್ ನಡೆಯುತ್ತಿದೆ. 1993ನೇ ಇಸವಿಯಲ್ಲಿ ತನಿಖೆಗಾಗಿ ವಹಿಸಿದಂಥ ಪ್ರಕರಣವು 2000 ಇಸವಿಯಾದರೂ ಇನ್ನೂ ಮುಗಿದಿಲ್ಲ. ಈ ಎರಡೂ ಪ್ರಕರಣಗಳೂ ನಮ್ಮ ಕಣ್ಣ ಮುಂದಿವೆ. ಎರಡೂ ಪ್ರಕರಣಗಳ ಮೊಕದ್ದಮೆ ಸಂಖ್ಯೆ: 50 ಮತ್ತು 51 ಆಗಿದ್ದು, ಪ್ರಕರಣಗಳ ತನಿಖೆಗೆ ಸಿ.ಬಿ.ಐ.ಗೆ ವಹಿಸಿದ್ದು, ಒಂದು ಪ್ರಕರಣದ ಟ್ರಯಲ್ ಈಗ ನಡೆಯುತ್ತಿರುವುದರಿಂದ ಕಂಬಾಲಪಲ್ಲಿ ಪ್ರಕರಣದ ಬಗ್ಗೆ ನಾವು ಹೆಚ್ಚು ಆಸಕ್ತಿ ವಹಿಸಿ ಸ್ಪೆಷಲ್ ಟಾಸ್ಕ್ ಫೋರ್ಸ್ ರಚಿಸಿರುವುದರ ಜೊತೆಗೆ ನ್ಯಾಯಾಂಗ ತನಿಖೆಗೂ ಆದೇಶಿಸಿರುವುದರಿಂದ ಇವರು ಒಂದು ಕಡೆ ತಮ್ಮ ವಿಚಾರಣೆ ನಡೆಸಲಿ. ಮತ್ತು ನಾವು ಸ್ಪೆಷಲ್ ಸ್ಕ್ವಾಡ್ ಏನು ಮಾಡಿದ್ದೇವೆ, ಅವರು ತಕ್ಷಣದಿಂದಲೇ ತಮ್ಮ ಕೆಲಸ

ಪ್ರಾರಂಭಿಸುವುದರಿಂದ ನನಗನ್ನಿಸಿದ ಮಟ್ಟಿಗೆ ಯಾರು ತಪ್ಪಿತಸ್ಥರಿದ್ದಾರೋ, ಅವರನ್ನು ಶಿಕ್ಷಿಸುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ, ಪ್ರಕರಣವನ್ನು ಸಿ.ಬಿ.ಐ.ಗೆ ಒಪ್ಪಿಸುವುದಾದರೆ ಅವರಿಗೆ ಪತ್ರ ಬರೆದು ಅವರು ತಮ್ಮ ಒಪ್ಪಿಗೆ ಕೊಟ್ಟ ಬಳಿಕ ಪ್ರಕರಣವನ್ನು ಅವರಿಗೆ ಹಸ್ತಾಂತರಿಸುವ ವೇಳೆಗೆ 3-4 ತಿಂಗಳುಗಳು ಕಳೆಯುತ್ತದೆ. ಇದರ ಪ್ರೊಸೀಜರ್ ತಮಗೆಲ್ಲರಿಗೂ ಗೊತ್ತಿರುವುದರಿಂದ ಅದರ ಬಗ್ಗೆ ಹೆಚ್ಚಿಗೆ ನಾನು ಏನೂ ಹೇಳುವುದಿಲ್ಲ. ಈ ಪ್ರಶ್ನೆ ಇವೊತ್ತು ನಮ್ಮ ಮುಂದಿದ್ದ ಕಾರಣ ಮತ್ತು ನ್ಯಾಯ ಒದಗಿಸಿಕೊಡಬೇಕೆನ್ನುವ ದೃಷ್ಟಿಯಿಂದ ಪಕ್ರರಣವನ್ನು ನ್ಯಾಯಾಂಗ ತನಿಖೆಗಾಗಿ ಒಪ್ಪಿಸಿದ್ದೇವೆ. ವಿಶೇಷವಾಗಿ ದಲಿತರು ತಮ್ಮ ಸ್ವಂತ ಕಾಲ ಮೇಲೆ ನಿಂತುಕೊಂಡು ಸ್ವಾಭಿಮಾನದಿಂದ ಬದುಕಲು ಹೊರಟಂಥ ಸಂದರ್ಭದಲ್ಲಿ ಇಂತಹ ಸಂಘರ್ಷಗಳು ಅನೇಕ ಹಳ್ಳಿಗಳಲ್ಲಿ ಜರುಗುತ್ತಿದೆ. ಸಂಘರ್ಷಗಳು ಕೆಲವು ಕಡೆಗಳಲ್ಲಿ ಕೊಲೆ ಮುಖಾಂತರ ನಡೆದಿದ್ದರೆ, ಮತ್ತೊಂದು ಕಡೆಗಳಲ್ಲಿ ಮಾತಿನ ಚಕಮಕಿಗಳಾಗಿ ಜಗಳವಾಡಿ ಬಿಟ್ಟಿರಬಹುದು. ಆದರೆ, ಇವೊತ್ತು ಎಲ್ಲೆಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರು ಸ್ವಲ್ಪ ವಿದ್ಯಾವಂತರಾಗಿ ತಲೆಯೆತ್ತುತ್ತಿದ್ದಾರೋ ಅಂತಹ ಕಡೆಗಳಲ್ಲಿ ಈ ವರ್ಗದವರ ಏಳಿಗೆಯನ್ನು ಸಹಿಸದಿರುವ ಜನರು ಇಂತಹ ಅಹಿತಕರ, ಅಕೃತ್ಯಗಳನ್ನು ಎಸಗುತ್ತಿದ್ದಾರೆ. ಇದೊಂದು ಸ್ವಾಭಿಮಾನದ ಹೋರಾಟವಾಗಿದ್ದು, ಈ ಸ್ವಾಭಿಮಾನದ ಹೋರಾಟ ನನ್ನದೊಂದೇ ಅಲ್ಲ, ತಮಗೆಲ್ಲರಿಗೂ ಗೊತ್ತಿರುವಂತೆ ಈ ಹೋರಾಟದ ಕಾಲದಲ್ಲಿ ಒಬ್ಬರು, ಇಬ್ಬರು, ಮೂವರು ಸತ್ತಿರಬಹುದು, ಆದರೆ ಇವೊತ್ತು ಏಳು ಜನ ದಲಿತರು ಸತ್ತಿದ್ದಾರೆ. ಆದುದರಿಂದ, ಇದರ ಹಿನ್ನೆಲೆ ಏನು? ಸಮಾಜದಲ್ಲಿ ಇಂತಹ ವಾತಾವರಣ ಏಕಿದೆ? ಎಂಬುದನ್ನೆಲ್ಲಾ ಇವೊತ್ತು ಅರ್ಥಮಾಡಿಕೊಳ್ಳಬೇಕಾಗಿದೆ. ಅದಕ್ಕೋಸ್ಕರ ನಮ್ಮ ಜವಾಬ್ದಾರಿಯನ್ನು ತಪ್ಪಿಸುವುದಕ್ಕಾಗಲೀ ಅಥವಾ ಬೇರಾವುದೋ ರೀತಿಯಿಂದ ನಾವು ಬೇರೆಯವರ ಮೇಲೆ ದೂರು ಹೇಳಿ, ಹಿಂದೆ ಅಧಿಕಾರದಲ್ಲಿದ್ದಂಥ ಸರ್ಕಾರವನ್ನು ಬೈದು ನಾವು ಸಮರ್ಥಿಸಿಕೊಳ್ಳುವಂಥಾದ್ದಲ್ಲ. ಈ ಘಟನೆಯ ಸಂಬಂಧದಲ್ಲಿ ಯಾರು ತಪ್ಪಿಸ್ಥರಿದ್ದಾರೆ, ಅವರಿಗೆ ಶಿಕ್ಷೆಯಾಗಿ ಹಳ್ಳಿಯಲ್ಲಿರುವ ಜನರು ನೆಮ್ಮದಿಯಿಂದ ಜೀವಿಸುವಂತಾಗಬೇಕು. ಅನೇಕ ಶಾಸಕ ಮಿತ್ರರು ಹೇಳಿದಂತೆ ಜನರಲ್ಲಿ ಸಾಮರಸ್ಯ ಮೂಡಿಸುವ ಕೆಲಸವಾಗಬೇಕು. ಸಮಾಜದಲ್ಲಿ ಎಲ್ಲಿಯವರೆಗೆ ನಾವು ಸಾಮರಸ್ಯ ಮೂಡಿಸುವುದಿಲ್ಲವೋ ಅಲ್ಲಿಯವರೆಗೆ ಇಂತಹ ಅಹಿತಕರ ಘಟನೆಗಳು ಜರುಗುತ್ತಿರುತ್ತವೆ. ಏಕೆಂದರೆ, ಪ್ರಚೋದಿಸುವವರು ಒಬ್ಬರಿದ್ದರೆ, ನೀವೇನು ಕಡಿಮೆ, ನೀವೂ ಒಂದು ಕೈನೋಡಿ ಎಂದು ಹೇಳುವ ಮತ್ತೊಬ್ಬರಿದ್ದಾರೆ. ಇದಕ್ಕೆ ಕೆಲವು ಆರ್ಥಿಕ ಕಾರಣಗಳಿರಬಹುದು, ನಿರುದ್ಯೋಗ ಸಮಸ್ಯೆಯೂ ಇರಬಹುದು ಅಥವಾ ಸ್ವಾಭಿಮಾನದಿಂದ ಹೋರಾಡುವ ಜನರಿಗೆ ಇವೊತ್ತು ಏಕೆ ನೀವು ಸಮಾಜದಲ್ಲಿ ತಲೆಯೆತ್ತುತ್ತಿದ್ದೀರಿ ಎಂದು ಅವರಿಗೆ ಹೇಳಿ ಅವರನ್ನು ತುಳಿಯತಕ್ಕಂಥ ಕುತಂತ್ರ ಇದರಲ್ಲಡಗಿರಬಹುದು. ಈ ಎಲ್ಲಾ ವಿವರಗಳು ನ್ಯಾಯಾಂಗ ತನಿಖೆ ಮೂಲಕ ಹೊರಗೆ

ಬರುವುದರಿಂದ ಹೈಕೋರ್ಟಿನ ಸಿಟ್ಟಿಂಗ್ ಜಡ್ಜ್ ಅವರೇ ಪ್ರಕರಣದ ವಿಚಾರಣೆ ನಡೆಸುವುದರಿಂದ ತನಿಖೆಯನ್ನು ಬಹಳ ಬೇಗನೇ ಮಾಡುತ್ತಾರೆ. ಆದುದರಿಂದ ತಮ್ಮ ಪಾಡಿಗೆ ಅವರು ಒಂದು ಕಡೆ ನ್ಯಾಯಾಂಗ ತನಿಖೆ ನಡೆಸುತ್ತಿದ್ದರೆ, ಮತ್ತೊಂದು ಕಡೆ ಶ್ರೀಮಾನ್ ಎಂ.ಡಿ.ಸಿಂಗ್ ಅವರ ನೇತೃತ್ವದಲ್ಲಿ ಸ್ಪೆಷಲ್ ಸ್ಕ್ವಾಡ್ ಮಾಡಿರುವುದರಿಂದ ಇದರಿಂದ ಪ್ರಕರಣದ ಬಗ್ಗೆ ಏನಾದರೂ ಫಲಿತಾಂಶ ಸಿಗುತ್ತದೆ ಎನ್ನುವ ನಂಬಿಕೆ ನನಗಿದೆಯೆಂಬ ಮಾತನಾಡುತ್ತಾ, ತಾವುಗಳು ಮಾತನಾಡುತ್ತಾ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದ್ದೀರಿ. ಆದರೆ, ಕರ್ನಾಟಕ ರಾಜ್ಯದಲ್ಲಿ ನನ್ನ ರಾಜೀನಾಮೆಯಿಂದ ಅಸ್ಪೃಶ್ಯತಾ ಸಮಸ್ಯೆ ನಿವಾರಣೆಯಾಗಿ ಪರಿಶಿಷ್ಟರ ಮೇಲಿನ ಇಂತಹ ದೌರ್ಜನ್ಯಗಳು ನಿಲ್ಲುತ್ತದೆ ಎಂದರೆ ಖಂಡಿತವಾಗಿಯೂ ಹಿಂದು-ಮುಂದು ನೋಡದೆ ನಾನು ಇವೊತ್ತೇ ನನ್ನ ರಾಜೀನಾಮೆಯನ್ನು ಮುಖ್ಯಮಂತ್ರಿಯವರಿಗೆ ಕೊಡುತ್ತೇನೆ. ಇದರ ಬಗ್ಗೆ ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ನನ್ನ ರಾಜೀನಾಮೆಯಿಂದಲೇ ರಾಜ್ಯದಲ್ಲಿ ಇಂತಹ ಸಮಸ್ಯೆಗಳು ಬಗೆಹರಿಯುತ್ತದೆಂದು ವಿರೋಧ ಪಕ್ಷದವರೆಲ್ಲರೂ ಸೇರಿಕೊಂಡು ಹೇಳಿದರೆ ಖಂಡಿತವಾಗಿಯೂ ನಾನು ರಾಜೀನಾಮೆ ಕೊಡಲು ತಯಾರಿದ್ದೇನೆ.

(ಈ ಹಂತದಲ್ಲಿ ಸನ್ಮಾನ್ಯ ಗೃಹ ಸಚಿವರಾದ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆಯವರು ಭಾವೋದ್ವೇಗಕ್ಕೊಳಗಾದರು)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಭಾವೋದ್ವೇಗಕ್ಕೊಳಗಾಗಿದ್ದಾರೆ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಹಳ ವರ್ಷಗಳಿಂದಲೂ ರಾಜಕೀಯದಲ್ಲಿ ಇದ್ದು ದಲಿತರ ಬಗ್ಗೆ ವಿಶೇಷ ಕಳಕಳಿ ಹೊಂದಿ ರಾಜಕಾರಣಿಯಾಗಿ ಬೆಳೆದಂತಹ ಇವರು ದಯವಿಟ್ಟು ಈ ವಿಷಯದಲ್ಲಿ ಭಾವೋದ್ವೇಗ ಕ್ಕೊಳಗಾಗಬಾರದು. ಸೂಕ್ತವಾದ ನಿರ್ಣಯ ತೆಗೆದುಕೊಳ್ಳಿ. ಅದರ ಬಗ್ಗೆ ಪ್ರಶ್ನೆ ಇಲ್ಲ. ಸನ್ಮಾನ್ಯ ಗೃಹಮಂತ್ರಿಗಳು ಮಾತನಾಡುತ್ತಾ ಕೆಲವು ವಿಚಾರಗಳನ್ನು ಹೇಳಿದರು. ಪ್ರಕರಣದ ವಿಚಾರಣೆಗೆ ನ್ಯಾಯಾಂಗ ತನಿಖೆಗಾಗಿ ಆದೇಶಿಸಿ ಈ ಸಂಬಂಧ ಪತ್ರ ಬರೆದಿರುವುದಲ್ಲದೆ, ಟಾಸ್ಕ್‌ಫೋರ್ಸ್ ಕಮಿಟಿಯನ್ನೂ ಸಹ ಮಾಡಿರುವುದರಿಂದ ಸಿ.ಬಿ.ಐ. ಎನ್‌ಕ್ವೈರಿಗೆ ಪ್ರಕರಣವನ್ನು ವಹಿಸಿಸುವುದು ಬೇಡವೆಂದರು. ನ್ಯಾಯಾಂಗ ತನಿಖೆ ಒಂದೆಡೆ ನಡೆಯಲಿ, ಅದರ ಪ್ರಶ್ನೆಯಿಲ್ಲ. ಆದರೆ, ಸಿ.ಬಿ.ಐ. ಎನ್‌ಕ್ವೈರಿ ಮಾಡಲು ಯಾವುದೇ ತೊಂದರೆ ಇಲ್ಲ. ನಾವು ಹೇಳುವುದೇನೆಂದರೆ, ಮಾನ್ಯ ಗೃಹ ಸಚಿವರು ಕೆಲವೊಂದು ಉದಾಹರಣೆಗಳನ್ನು ಕೊಟ್ಟರು ಹಿಂದೆ ಜಗನ್ನಾಥಶೆಟ್ಟಿ ಆಯೋಗದ ನೇಮಕವಾಯಿತು, ಅನಂತರ ಡಾಃ ಯು.ಚಿತ್ರರಂಜನ್ ಕೊಲೆ ಪ್ರಕರಣದಲ್ಲಿ ಒಂದು ನ್ಯಾಯಾಂಗ ತನಿಖೆಯಾಯಿತು.

6. 30 ಪಿ.ಎಂ

ನಮ್ಮ ಬೇಡಿಕೆ ಇಷ್ಟೆ ಸಿ.ಬಿ.ಐ. ತನಿಖೆ ಆಗಬೇಕೆನ್ನುವುದು. ಬದನಾಳು ಗ್ರಾಮದ ವಿಚಾರಣೆ ಶುರು ಮಾಡಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಇಲ್ಲಿ ಕಳೆದ ಮೂರು ವರ್ಷಗಳಿಂದ ಇಂತಹ ಘಟನೆಗಳು ನಡೆಯುತ್ತಿವೆ. ಚಿಂತಾಮಣಿ ತಾಲ್ಲೂಕು ಸುತ್ತಮುತ್ತಲು. ಈ ವಿಷಯದಲ್ಲಿ ಸಿ.ಬಿ.ಐ ತನಿಖೆ ಮಾಡುವುದು ಅವಶ್ಯಕತೆ ಇದೆ. ನಾನು ಮಾನ್ಯ ಗೃಹಸಚಿವರಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದರಲ್ಲಿ ಸರ್ಕಾರದವರು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ತೆಗೆದುಕೊಳ್ಳುವುದು ಬೇಡ. ಏಕೆಂದರೆ ಇದರಲ್ಲಿ ಸತ್ಯ ಏನು ಎಂಬುದು ಹೊರಗೆ ಬರಬೇಕಾಗಿದೆ. ಯಾವುದಾದರೂ ಒಂದು ಮೂಲೆಯಿಂದ ಆ ಸತ್ಯ ಹೊರಗೆ ಬರಲಿ. ಜುಡಿಷಿಯಲ್ ಎನ್‌ಕ್ವೈರಿಯಾದರೆ ಅದರಿಂದಲಾದರೂ ಸತ್ಯ ಹೊರಗೆ ಬರಲಿ. ಇದರಲ್ಲಿ ನಾವ್ಯಾರು ಪ್ರತಿಷ್ಠೆ ಮಾಡುವುದು ಬೇಡ. ಆದ್ದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಗೃಹಸಚಿವರು ಸಿ.ಬಿ.ಐ. ವಿಚಾರಣೆಯನ್ನು ಮಾಡುವುದಕ್ಕೆ ಒಪ್ಪಿಸಿ. ಸಿ.ಬಿ.ಐ. ವಿಚಾರಣೆಯನ್ನು ಮಾಡುವುದಕ್ಕೆ ಸರ್ವ ಪ್ರಯತ್ನವನ್ನು ನಾವು ಮಾಡೋಣ. ನಿಜವಾದ ಪರಿಸ್ಥಿತಿ ಇವತ್ತು ತಿಳಿಯಬೇಕಾಗಿದೆ. ಆದ್ದರಿಂದ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹಸಚಿವರು ಇದಕ್ಕೆ ಸಹಕಾರವನ್ನು ಕೊಡುತ್ತಾರೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ವೈಯುಕ್ತಿಕವಾಗಿ ನಾವು ಮಾತನಾಡಿರತಕ್ಕಂಥ ಎಲ್ಲಾ ಮಿತ್ರರು ಸಹ ಮಾನ್ಯ ಖರ್ಗೆಯವರ ಬಗ್ಗೆ ನಾವುಗಳು ಅಪಾರವಾದ ಗೌರವವನ್ನು ಇಟ್ಟುಕೊಂಡಿರುತ್ತೇವೆ. ಒಬ್ಬ ದಲಿತ ಮುಖಂಡರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಬೆಳೆಯತಕ್ಕಂಥಾದ್ದನ್ನು ನಾವೆಲ್ಲರೂ ಬಯಸತಕ್ಕಂಥವರು. ಇಂಥಹ ದುರ್ಘಟನೆ ನಡೆದಿರತಕ್ಕಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ಹಿರಿಯರಾಗಿರತಕ್ಕಂಥ ಮಾನ್ಯ ರಂಗನಾಥ್‌ರವರು ಇರಬಹುದು, ಮಾನ್ಯ ಖರ್ಗೆಯವರು ಇರಬಹುದು, ಸೋಮಶೇಖರ್‌ರವರಿಗೆ ಇರಬಹುದು, ವಿಶೇಷವಾಗಿ ನೋವಾಗುತ್ತದೆ. ಅವರು ಈ ಸದನಕ್ಕೆ ಬಂದಿರತಕ್ಕಂಥದ್ದೇ ಒಂದು ಹೆಮ್ಮೆಯ ವಿಚಾರ. ಆದ್ದರಿಂದ ನಾವುಗಳು ಇದರಲ್ಲಿ ರಾಜಕೀಯವನ್ನು ಬೆರೆಸಬೇಕು ಎನ್ನುವಂತಹ ಉದ್ದೇಶ ಖಂಡಿತವಾಗಿ ನಮಗೆ ಇಲ್ಲ. ನಮಗೆ ಗೊತ್ತಿದೆ. ನಮ್ಮ ಸಮಾಜದಲ್ಲಿರತಕ್ಕಂಥ ಸ್ಥಾನಗಳು ಏನು? ಯಾವ ಯಾವ ಶಕ್ತಿಗಳು ಎಲ್ಲೆಲ್ಲಿ ಏನೇನು ಕೆಲಸಗಳನ್ನು ಮಾಡುತ್ತವೆ, ನಾವುಗಳು ರಾಜಕೀಯವಾಗಿ ಮುಂದೆ ಬರುವುದಕ್ಕೆ ಯಾವ್ಯಾವುದನ್ನು ಬಳಸಿಕೊಳ್ಳುತ್ತೇವೆ, ಬಳಸಿಕೊಂಡಿದ್ದೇವೆ, ಎನ್ನತಕ್ಕಂಥ ಒಂದು ವಿಮರ್ಶೆಯನ್ನು ನಮ್ಮ ಮಟ್ಟಿಗೆ ನಾವೆಲ್ಲರೂ ಸಹ ರಾಜಕೀಯ ಪಕ್ಷಗಳು ಆಗಿರಬಹುದು, ವ್ಯಕ್ತಿಗಳು ಆಗಿರಬಹುದು, ಮುಖಂಡರುಗಳು ಆಗಿರಬಹುದು. ನಾವು ಮಾಡಿಕೊಳ್ಳದೆ ಹೋದರೆ ಈ ಸಮಾಜವನ್ನು ನಾವು ಸರಿ ಮಾಡುವುದಕ್ಕೆ ಆಗುವುದಿಲ್ಲ ಎನ್ನುವಂಥಾದ್ದನ್ನು ನಾನು

ಒಪ್ಪಿಕೊಳ್ಳುತ್ತೇನೆ. ನಾವು ಮಾತನಾಡಿರತಕ್ಕಂಥ ಪ್ರತಿಯೊಬ್ಬರು ಸಹ ಇದನ್ನು ನಾವು ನಿಮ್ಮ ಇಚ್ಛೆಗೆ ಬಿಡುತ್ತೇವೆಂದು ಹೇಳಿದ್ದೇವೆಯೇ ಹೊರತು ನಾವು ಇದನ್ನು ಬಹಳಸೂಕ್ಷ್ಮವಾಗಿ ಮಾತನಾಡಿದ್ದೇವೆ. ತಮ್ಮ ವಿಚಾರ ಬಂದಂತಹ ಸಂದರ್ಭದಲ್ಲಿ. ಆದ್ದರಿಂದ ಇದನ್ನು ತಾವು ಭಾವನಾತ್ಮಕವಾಗಿ ತೆಗೆದುಕೊಳ್ಳಬಾರದೆಂದು ನಾನು ವೈಯಕ್ತಿಕವಾಗಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ಈಗ ಘಟನೆ ನಡೆದ ನಂತರ ಮಾನ್ಯ ಮುಖ್ಯ ಮಂತ್ರಿಗಳು, ಗೃಹಸಚಿವರು ಮತ್ತು ಮಾನ್ಯ ಸಮಾಜ ಕಲ್ಯಾಣ ಸಚಿವರು ತಾವೆಲ್ಲರೂ ಮಾಡಿರತಕ್ಕಂಥ ಕೆಲಸವನ್ನು ನಾವುಗಳು ಯಾರು ಅಲ್ಲಗಳೆದಿಲ್ಲ. ನನಗೆ ಗೊತ್ತಿದೆ, ತಾವು ಏನು ಸೂಚನೆಯನ್ನು ಕೊಟ್ಟಿದ್ದೀರಿ, ಆ ಅಧಿಕಾರಿಗಳ ಮೇಲೆ ಏನು ಸಿಟ್ಟು ಮಾಡಿಕೊಂಡಿದ್ದೀರಿ ಎನ್ನುವುದು, ಪ್ರತಿಯೊಂದು ವಿಚಾರದಲ್ಲಿಯೂ ಸಹ ನಮಗೆ ತಿಳುವಳಿಕೆ ಇದೆ. ತಾವು ಏನು ಮಾಡಿದ್ದೀರಿ ಎನ್ನತಕ್ಕಂಥದ್ದು ನಮಗೆ ಗೊತ್ತಿದೆ. ತಾವು ಆ ಜನಗಳಿಗೆ ಪುನರ್ವಸತಿ ಮಾಡತಕ್ಕಂಥ ವಿಚಾರ ಇರಬಹುದು, ಅವರ ಕುಟುಂಬದಲ್ಲಿ ಬದುಕಿರತಕ್ಕಂಥವರಿಗೆ ಎರಡು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಕ್ಕಂಥ ವಿಚಾರ ಇರಬಹುದು, ಉದ್ಯೋಗ ಕೊಡುವ ವಿಚಾರ ಇರಬಹುದು, ಇವೆಲ್ಲ ಸಹ ನಡೆಯುತ್ತಿವೆ. ತಾವು ಜಿಲ್ಲಾಧಿಕಾರಿಗಳಿಗೆ ಮತ್ತು ಎಸ್.ಪಿ.ಗಳಿಗೆ ತಿಳುವಳಿಕೆ ಕೊಟ್ಟು ಇಂತಹ ವಿಷಯಗಳು ಮತ್ತೆ ಪುನರಾವರ್ತನೆಯಾಗಬಾರದು, ಎನ್ನತಕ್ಕಂಥ ಒಂದು ಎಚ್ಚರಿಕೆಯನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಈ ಸದನದ ಮೂಲಕ ಹೋದಂತಹ ಸಂದರ್ಭದಲ್ಲಿ ಸಾಮಾನ್ಯವಾಗಿ ಅವರ ಮೇಲೆ ಅದರ ಎಫೆಕ್ಟ್ ಇದ್ದೇ ಇರುತ್ತದೆ. ಅದರಲ್ಲಿ ಸಂಶಯವಿಲ್ಲ. ತಾವು ವಿಶೇಷವಾಗಿ ಏನು ಹೇಳುತ್ತಿದ್ದೀರಿ ನಾವು ಕೇಳಿಕೊಂಡಿರತಕ್ಕಂಥದ್ದು ಇಷ್ಟೆ. ಜ್ಯುಡಿಷಿಯಲ್ ವಿಚಾರಣೆ ಏನು ಮಾಡುತ್ತಿದ್ದೀರಿ ಅದಕ್ಕೆ ಒಂದು ಸಮಯವನ್ನು ನಿಗದಿ ಮಾಡಿ. ಅದಕ್ಕೆ ಟರ್ಮ್ಸ್ ಆಫ್ ರೆಫರೆನ್ಸ್ ತಕ್ಷಣ ಮಾಡಿ, ಅದನ್ನು ಕಳುಹಿಸಿಕೊಡತಕ್ಕಂಥ ಕೆಲಸವನ್ನು ತಾವು ಮುಂದಿನ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ಆದಷ್ಟು ಬೇಗ ಕಳುಹಿಸಿಕೊಡುವಂತಹ ವ್ಯವಸ್ಥೆ ಮಾಡಬೇಕು. ಸಿ.ಆರ್.ಇ.ಸೆಲ್ ಮತ್ತು ಮಾನ್ಯ ಎಂ.ಡಿ.ಸಿಂಗ್ ಅವರ ಬಗ್ಗೆ ನಮಗೆಲ್ಲರಿಗೂ ಬಹಳ ಗೌರವ ಇದೆ. He is one of the most honest officers. We have many honest officers in our Department and Mr.M.D.Singh is also one of them. ಅದರಲ್ಲಿ ಸಂಶಯವೇನೂ ಇಲ್ಲ. about his competency and all that. ಅದು ಏನಾಗುತ್ತದೆಂದರೆ ಈಗ ಇಂತಹ ಶಕ್ತಿಗಳು ಸಮಾಜದಲ್ಲಿ ಎರಡೂ ಕಡೆ ಇವೆ. ಮತ್ತೆ ನಮ್ಮ ಸಮಾಜದಿಲ್ಲ ಟು ಮಚ್ ಅಫ್ ರೆಪ್ಚರ್ ಮಾಡುವುದಕ್ಕೆ ನಾವು ಅವಕಾಶವನ್ನು ಮಾಡಿಕೊಬಾರದು. ಒಂದೇ ಕಡೆ ಇದೆ ಎಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಶ್ರೀ ಕೃಷ್ಣಾರೆಡ್ಡಿಯನ್ನು ಕೊಲೆ ಮಾಡುವುದಕ್ಕೆ ಕಾರಣ ಏನು ಎನ್ನತಕ್ಕಂಥ ಪ್ರಶ್ನೆಯನ್ನು ಸಹ

ನಾವು ನೋಡಬೇಕಾಗುತ್ತದೆ. ಯಾರು ಕೊಲೆ ಮಾಡಿದರು, ಹೇಗೆ ಆಯಿತು? ಈ ರೀತಿ ಆದರೆ ಈ ದೇಶ ಉಳಿಯುತ್ತದೆಯೇ? ಆದ್ದರಿಂದ ನಾವೆಲ್ಲ ಅಲ್ಪಿಮೇಟ್ಲಿ ಆತ್ಮಾವಲೋಕನ ಮಾಡಿಕೊಂಡು ಏನಾದರೂ ಒಂದು ಪರಿಹಾರ ಹಿಡಿಯುವುದಕ್ಕೆ ಪ್ರಯತ್ನ ಮಾಡೋಣ ಎರಡು ವಿಚಾರಗಳಲ್ಲಿ ಒಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲೆ ಆಗುತ್ತಿರುವಂತಹ ಅತ್ಯಾಚಾರದ ಬಗ್ಗೆ. ಹೆಣ್ಣು ಮಕ್ಕಳ ಮೇಲೆ ಆಗುತ್ತಿರುವಂತಹ ಘಟನೆಗಳ ಬಗ್ಗೆ. ಇವತ್ತು ಮನುಷ್ಯರನ್ನು ಮನುಷ್ಯರು ಸುಡುತ್ತಿದ್ದೇವೆ. ಅತ್ತೆ ಸೊಸೆಯನ್ನು ಸುಡುತ್ತಾರೆ. ಅದಕ್ಕಿಂತ ಅವಮಾನಕರವಾದಂತಹ ವಿಚಾರ ಇನ್ನೇನು ಇದೆ? ಆದ್ದರಿಂದ ತಾವು ಎಮೋಶನಲ್ ಆಗುವುದಕೆ ಹೋಗಬೇಡಿ. ಅದರಿಂದ ಏನೂ ಉಪಯೋಗವಾಗುವುದಿಲ್ಲ. ಅದರಿಂದ ಆ ವರ್ಗದ ಜನರಿಗೆ ಸಹಾಯ ಮಾಡಿದಂತೆ ಆಗುವುದಿಲ್ಲ. ಇವತ್ತು ಕಮ್ಯುನಲ್ ಹಾರ್ಮೊನಿ ಬಗ್ಗೆ ಹೇಳುವುದೊಂದು ಮಾಡುವುದೊಂದು ಆಗಿದೆ, ಪರ್ಟಿಕ್ಯುಲರ್ ಆಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಗೃಹಸಚಿವರಿಗೆ ಹಿಂದೆ ನಡೆದಿರತಕ್ಕಂಥ ಎಲ್ಲಾ ಇನ್ಸಿಡೆಂಟ್ಸ್‌ನ್ನು ನೆನೆಸಿಕೊಂಡರೆ. ಮಾನ್ಯ ಧರ್ಮಸಿಂಗ್ ಅವರು ಗೃಹಸಚಿವರಾಗಿದ್ದರು, ಮಾನ್ಯ ಚೌಡರೆಡ್ಡಿಯವರು ಆಗಿದ್ದರು, ನಾನು ಆಗಿದ್ದೆ ನಮಗೆ ಗೊತ್ತಿದೆ. ನಾನು ಅನೇಕ ಕಡೆಗಳಲ್ಲಿ ಹೇಳಿದ್ದೇನೆ. ನಮಗೆ ಗೃಹ ಖಾತೆ ಇದೊಂದು ಹೊಸ ಪ್ರಪಂಚ ಅಂತ. ಅದೊಂದು ದೊಡ್ಡ ಅನುಭವ. ಈ ಸಮಾಜದಲ್ಲಿ ಏನೇನು ಕೆಲಸಗಳು ಯಾವ ಯಾವ ಶಕ್ತಿಗಳು ಮಾಡುತ್ತವೆ ಎನ್ನುವುದು ತಮಗೆ ಗೊತ್ತಿದೆ. ಆದ್ದರಿಂದ ನಾನು ಇಷ್ಟೇ ಮನವಿ ಮಾಡಿಕೊಳ್ಳತಕ್ಕಂಥಾದ್ದು, ಕರ್ನಾಟಕ ರಾಜ್ಯದಲ್ಲಿ ಇಂಥ ಘಟನೆ ನಡೆಯಬಾರದಾಗಿತ್ತು, ನಡೆದಿದೆ. ಮೈಸೂರಿನ ಮಹಾರಾಜರ ಕಾಲದಿಂದಲೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಾವು ಮಿಸಲಾತಿಯನ್ನು ಕೊಟ್ಟುಕೊಂಡು ಬಂದು ಒಂದು ದೊಡ್ಡ ಹೆಸರನ್ನು ಗಳಿಸಿರತಕ್ಕಂಥ ಜನ ನಾವು. ಆದರೆ ಬಿಹಾರಕ್ಕೆ ಹೋಲಿಕೆ ಮಾಡಿಕೊಳ್ಳತಕ್ಕಂಥ ಘಟನೆ ಇವತ್ತು ನಡೆದಿದೆ. ಆದ್ದರಿಂದ ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳತಕ್ಕಂಥಾದ್ದು ಏನೆಂದರೆ ಈ ವಿಷಯ ಲೋಕಸಭೆಯಲ್ಲಿ ಸಹ ಚರ್ಚೆಯಾಗಿದೆ. ರಾಜ್ಯ ಸಭೆಯಲ್ಲಿಯೂ ಚರ್ಚೆಯಾಗಿದೆ. ಆದ್ದರಿಂದ ಅವರಿಗೆಲ್ಲಾ ಒಂದು ಸಿಗ್ನಲ್ ಹೋಗಲಿ. ಅದರಿಂದ ಬಹಳ ದೊಡ್ಡ ಸಾಧನೆಯಾಗುತ್ತದೆಂದು ನಾನು ಹೇಳುವುದಿಲ್ಲ. ನಾವು ಏನು ಡಿಮ್ಯಾಂಡ್ ಮಾಡಿದ್ದೇವೆಂದರೆ ಒಂದು ಸಿ.ಬಿ.ಐ. ವಿಚಾರಣೆ ಆಗಬೇಕೆಂದು ನಾವು ಕೇಳಿದ್ದೇವೆ. ಅದರಿಂದ ನಿಮಗೆ ಏನೂ ತೊಂದರೆಯಾಗುವುದಿಲ್ಲ. ಈ ಜ್ಯುಡಿಷಿಯಲ್ ವಿಚಾರಣೆಯನ್ನು ತಾವು ಯಾವ ರೀತಿ ಕಂಟಿನ್ಯೂ ಮಾಡಿಕೊಂಡು ಹೋಗುತ್ತೀರಿ, ಅದೇ ರೀತಿಯಲ್ಲಿ ಸಿ.ಆರ್.ಐ. ಸೆಲ್ ಸಹ. ಸಿ.ಬಿ.ಐ. ವಿಚಾರಣೆಗೆ ತಾವು ಕೇಂದ್ರ ಸರ್ಕಾರದ ಗೃಹಸಚಿವರಲ್ಲಿ ಮಾತನಾಡಿದರೆ ಪ್ರಧಾನ ಮಂತ್ರಿಗಳಲ್ಲಿ ಮಾತನಾಡಿದರೆ ಒಳ್ಳೆಯದು. because they are also equally concerned. The circumstances of Dr.Chittaranjan

murder is entirely different. ಬದನವಾಳದಲ್ಲಿ ಆಗಿರತಕ್ಕಂಥ ಘಟನೆಯೇ ಬೇರೆ. ಆದರೆ ಇಲ್ಲಿ ಆಗಿರುವಂತಹ ಘಟನೆಯೇ ಬೇರೆ. ಆದ್ದರಿಂದ ನಮ್ಮ ಪಕ್ಷದ ವತಿಯಿಂದ ಕೇಳುತ್ತಿದ್ದೇವೆ. ನಾವೆಲ್ಲರೂ ನಿಮ್ಮ ಜೊತೆಯಲ್ಲಿದ್ದೇವೆ we feel for the people who have been killed. But we urge upon the Government through you Mr.Speaker, Sir, that the Government should concede for C.B.I Enquiry instead of C.R.E Cell enquiry.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ ಮಾನ್ಯ ಖರ್ಗೆಯವರು ಬಹಳನೊಂದು ಬಹಳ ಆವೇಶದಿಂದ ಮಾತನಾಡಿದ್ದಾರೆ. ಅವರನ್ನು ನೋಯಿಸಬೇಕೆನ್ನುವ ಉದ್ದೇಶದಿಂದ ನಾವ್ಯಾರು ಮಾತನಾಡಿಲ್ಲ. ನಮಗೂ ಸಹ ಅಷ್ಟೇ ನೋವು ಇದೆ ನಾವು ನೇರವಾಗಿ ತಾವೇ ಜವಾಬ್ದಾರರು ಅಂತ ಹೇಳಿಲ್ಲ. ಇಂಥ ವ್ಯವಸ್ಥೆಯಲ್ಲಿ ಬಹಳ ಒತ್ತಡಗಳು, ಫೋರ್ಸ್‌ಗಳು ಕೆಲಸ ಮಾಡಿ ಇಂತಹವುಗಳು ಆಗುತ್ತವೆ. ಇಂತಹ ವಿಚಾರಗಳು ಸರ್ಕಾರಗಳಲ್ಲಿ ಬಂದಾಗ ನಾವು ಸಹ ಸರ್ಕಾರ ರಾಜೀನಾಮೆ ಕೊಡಲೇಬೇಕು ಎನ್ನತಕ್ಕಂತ ನಿಲುವುಗಳನ್ನು ತೆಗೆದುಕೊಂಡು ಧರಣಿ ಮಾಡಿರತಕ್ಕಂಥ ಸಂದರ್ಭಗಳು ಉಂಟು. ಆದರೆ ನಾವು ಈ ವಿಚಾರದಲ್ಲಿ ಆ ಮಟ್ಟಕ್ಕೆ ಹೋಗಿಲ್ಲ. ಇಂತಹ ಒಂದು ದೊಡ್ಡ ಘಟನೆಯಾದರೂ ಸರ್ಕಾರ ರಾಜೀನಾಮೆ ಕೊಡಲೇಬೇಕು ನೀವು, ಎಂದು ಕೇಳಿಲ್ಲ. ನಾವು ಕೇಳಿರತಕ್ಕಂಥಾದ್ದು ಕೇವಲ ಒಂದು ಚಿಕ್ಕ ಬೇಡಿಕೆ. ಕಾರಣ ಸಹ ಹೇಳಿದ್ದಾರೆ. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಕೃಷ್ಣಾರೆಡ್ಡಿ ಎನ್ನುವವರ ಕೊಲೆ ಸಹ ಆಗಿದೆ. ಅವರು ಬೇರೆ ವರ್ಗದವರು. ಮತ್ತು 8 ಜನ ದಲಿತರ ಸಜೀವ ದಹನವಾಗಿದೆ. ಇದಕ್ಕೆ ಯಾರು ಕಾರಣಕರ್ತರು? ಇವತ್ತು ಯಾರು ಯಾರನ್ನು ಕೊಲೆ ಮಾಡಿದ್ದಾರೆ ಎನ್ನತಕ್ಕಂಥಾದ್ದು ಕೂಲಂಕಷವಾಗಿ ವಿಚಾರಣೆ ನಡೆಯಬೇಕಾಗುತ್ತದೆ. ಈಗಾಗಲೇ ವರ್ಗಾವಣೆಯಾಗಿರುವ ಎಸ್.ಪಿ.ಯವರು ಹೇಳಿದ್ದಾರೆ. ಕೋಲಾರದ ಎಸ್.ಪಿ.ಯವರು. ಇದಕ್ಕೆ ಪೋಲಿಸಿನವರ ವೈಫಲ್ಯವೇ ಕಾರಣವೆಂದು ಹೇಳಿದ್ದಾರೆ. ತಾವು ಸಹ ಸ್ಪೆಷಲ್ ಟಾಸ್ಕ್‌ಫೋರ್ಸ್ ಮಾಡಿದ್ದೇವೆ, ಅವರು ವಿಚಾರಣೆಯನ್ನು ಮಾಡುತ್ತಾರೆಂದರೆ ಅದರಲ್ಲಿ ನಮಗ ಅಷ್ಟೊಂದು ವಿಶ್ವಾಸ ಮೂಡುವುದಿಲ್ಲ. ಆದ್ದರಿಂದ ಇದು ಅಷ್ಟುದೊಡ್ಡದೇನೂ ಆಗುವುದಿಲ್ಲ. ನಾವು ಒಂದೊಂದು ಕೊಲೆಯಾದಾಗಲೂ ಸಹ ಸಿ.ಬಿ.ಐ. ವಿಚಾರಣೆಗೆ ಕೊಟ್ಟಿದ್ದೇವೆ. ಆದರೆ ಈ ವಿಚಾರ ಮಾನಸಿಕವಾಗಿ ಇಡೀ ರಾಜ್ಯಾದ್ಯಂತ ದಲಿತ ಸಂಘರ್ಷ ಸಮಿತಿಯವರು ಸಹ ಸಿ.ಬಿ.ಐ ವಿಚಾರಣೆಯನ್ನು ಕೇಳಿದ್ದಾರೆ, ಎಲ್ಲಾ ವಿರೋಧಪಕ್ಷಗಳು ಕೇಳಿದ್ದೇವೆ, ತಾವು ಸಿ.ಬಿ.ಐ ವಿಚಾರಣೆಗೆ ಒಪ್ಪಿಕೊಂಡರೆ ಅವರಿಗೂ ಸಹ ಒಂದು ಸಮಾಧಾನವಾಗುತ್ತದೆ.

ಸಾರ್ವಜನಿಕರಿಗೂ ಸಹ ಸಮಾಧಾನವಾಗುತ್ತದೆ. ತಾವು ಪ್ರತಿಷ್ಠೆ ಮೇಲೆ ನಿಲ್ಲದೆ ಸಿ.ಬಿ.ಐ. ವಿಚಾರಣೆಗೆ ಒಪ್ಪಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಒಂದು ಸಣ್ಣ ಜಿಜ್ಞಾಸೆ ನಮ್ಮ ಮಾನ್ಯ ಗೃಹಸಚಿವರಲ್ಲಿ ಇದೆ. ಬೇರೆ ಬೇರೆ ಇನ್ಸಿಡೆಂಟ್ಸ್, ಮಾನ್ಯ ಚಿತ್ತರಂಜನ್ ಕೊಲೆ ವಿಷಯ ಇರಬಹುದು, ಬದನವಾಳು ಇನ್ಸಿಡೆಂಟ್ ಇರಬಹುದು, ಇದರಲ್ಲಿ ಸ್ವಲ್ಪ ಡಿಲೇ ಆಗಿದೆ ಅಂತ. ಇದನ್ನು ಮತ್ತೆ ಸಿ.ಬಿ.ಐ.ಗೆ ಒಪ್ಪಿಸಿದರೆ ಡಿಲೇ ಆಗಬಹುದು ಎನ್ನುವ ಭಾವನೆ ಇದ್ದರೂ ಇರಬಹುದು. ಆದರೆ ಈ ಕೇಸ್‌ಗೂ ಆ ಎರಡು ಕೇಸ್‌ಗಳಿಗೂ ಪರಿಸ್ಥಿತಿ ಬೇರೆ ಬೇರೆ ಇದೆ ಎಂದು ನಾವು ಆಲೋಚನೆ ಮಾಡಬೇಕಾಗುತ್ತದೆ. ಡಾ: ಚಿತ್ತರಂಜನ್ ಕೊಲೆ ಪ್ರಕರಣದಲ್ಲಿ ಅಪರಾಧಿಗಳು ಯಾರು ಅಂತ ಗೊತ್ತಿಲ್ಲ. ಎಲ್ಲಾ ವಿಚಾರಗಳು ಸಹ ಸ್ವಲ್ಪ ನಿಗೂಢವಾಗಿ ನಡೆದಂಥಾದ್ದು. ಆದರೆ ಈ ವಿಚಾರ ಹಾಗಲ್ಲ. ಪೂರ್ತಿಯಾಗಿ ಎರಡು ತಿಂಗಳಿನಿಂದ ನಡೆದಂತಹ ವಿಚಾರಗಳು. ಕಳೆದ ಮೂರು ವರ್ಷಗಳಿಂದ ನಡೆದಂತಹ ಘಟನೆಗಳು. ಈ ಘಟನೆಯ ಹಿಂದೆ ಯಾರ್‍ಯಾರು ಇದ್ದಾರೆ ಎನ್ನುವುದು ಸಾಧಾರಣವಾಗಿ ಗೊತ್ತಾಗಿದೆ. ಈ ಘಟನೆ ಲೋಕಸಭೆಯಲ್ಲಿ ಅತ್ಯಂತ ಗಂಭೀರವಾಗಿ ಚರ್ಚೆಯಾಗಿದೆ. ಕೇಂದ್ರ ಸರ್ಕಾರ ಸಹ ಇದನ್ನು ಅತ್ಯಂತ ಗಂಭೀರವಾಗಿ ತೆಗೆದುಕೊಳ್ಳಬೇಕೆನ್ನುವ ವಿಚಾರ ಸಹ ಪ್ರಸ್ತಾಪವಾಗಿದೆ. ಈ ಘಟನೆಯನ್ನು ಸಿ.ಬಿ.ಐ.ಗೆ. ಒಪ್ಪಿಸಿದರೆ ಅತ್ಯಂತ ಪರಿಣಮಾಕಾರಿಯಾಗಿ ಆಗಬಹುದು. ಈಗ ಡಾ: ಚಿತ್ತರಂಜನ್‌ರವರು ಕೊಲೆ ಪ್ರಕರಣ ಸಿ.ಬಿ.ಐ ಮತ್ತು ರಾಮಚಂದ್ರಯ್ಯನವರ ಆಯೋಗ ಎರಡೂ ಜೊತೆ ಜೊತೆಯಾಗಿ ಕೆಲಸ ಮಾಡುತ್ತಿವೆ. ಅದು ಇಲ್ಲ ಅಂತಿಲ್ಲ. ಅದಕ್ಕೆ ಕೊಡಬಾರದು ಎನ್ನುವಂತಹ ಭಾವನೆಗಳು ಇಲ್ಲ. ಸಿ.ಬಿ.ಐಗೆ ಹ್ಯಾಂಡ್ ಓವರ್ ಮಾಡುವುದಕ್ಕೆ ಇನ್ನೂ ಒಂದು ಪ್ರಮುಖವಾದಂತಹ ಕಾರಣ ನೀಡಬಹುದು. ಈಗಾಗಲೇ ರಾಜಕಾರಣದ ಹಿನ್ನೆಲೆಯಲ್ಲಿ ಈ ಘಟನೆ ನಡೆದಿದೆ ಎನ್ನುವಂತಹ ಜಿಜ್ಞಾಸೆ ಎಲ್ಲಾ ಕಡೆಯಿಂದಲೂ ಕೇಳಿ ಬರುತ್ತಿದೆ. ಹೀಗಿರುವಾಗ ಈ ಘಟನೆಯ ತನಿಖೆಯನ್ನು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೇ ವಹಿಸಿದಲ್ಲಿ ಇದಕ್ಕೆ ಇಂಬು ಕೊಡುವಂತಹ ಭಾವನೆ ಮತ್ತು ಸಂಶಯ ನಮಗೂ ಮತ್ತು ಸಾರ್ವಜನಿಕ ವಲಯದಲ್ಲೂ ಕೂಡ ಎಡೆಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಈ ಪ್ರಕರಣದ ತನಿಖೆಯನ್ನು ಇಲ್ಲಿಂದ ಮುಕ್ತಗೊಳಿಸಿ ಸಿ.ಬಿ.ಐ.ಗೆ ವಹಿಸಿದಲ್ಲಿ ಬಹುಶಃ ಈ ರೀತಿಯ ಒಂದು ಸಂಶಯದಿಂದ ಮುಕ್ತರಾಗಬಹುದು. ಇದರಿಂದಾಗಿ ನಮ್ಮಲ್ಲಿರುವ ಸಂಶಯ ಕೂಡ ನಿವಾರಣೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಘಟನೆಯ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

+ ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಸಚಿವರಾದಂತಹ ಖರ್ಗೆಯವರು ಈ ದುರಂತದ ಬಗ್ಗೆ ಸರ್ಕಾರದ ನಿಲುವನ್ನು ಸ್ಪಷ್ಟ ಪಡಿಸಿದ್ದಾರೆ. ಸುಮಾರು 30 ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿ ತಮ್ಮದೇ ಆದಂತಹ ವ್ಯಕ್ತಿತ್ವವನ್ನು ಪಡೆದು ಬಂದಿರುವ ಹಿನ್ನೆಲೆಯಲ್ಲಿ ಅವರು ಭಾವನಾತ್ಮಕವಾದರೆ ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನಿಲುವಳಿ ಸೂಚನೆಯೊಂದು ಮಂಡನೆಯಾದ ತಕ್ಷಣ ಸಾಮಾನ್ಯವಾಗಿ ಅಧಿಕಾರದಲ್ಲಿರುವ ಸರ್ಕಾರವು ಮಂಡಿಸಿರುವ ವಿಷಯವು ನಿಲುವಳಿ ಸೂಚನೆಯಾಗುವುದಿಲ್ಲ ಎಂಬ ವಾದವನ್ನು ಮುಂದಿಡುತ್ತದೆ. ಅದಕ್ಕೆ ಸರ್ಕಾರ ನೂರಾರು ಕಾರಣಗಳನ್ನು ನಮೂದಿಸಬಹುದು. ಯಾವ ರೀತಿಯಲ್ಲಿ ನಿಲುವಳಿ ಸೂಚನೆಯನ್ನು ಒಪ್ಪಬೇಕೆಂದು ವಿರೋಧ ಪಕ್ಷಗಳು ಸಾವಿರಾರು ಕಾರಣಗಳನ್ನು ಕೊಡಬಹುದೋ, ಅದೇ ರೀತಿಯಲ್ಲಿ ಸರ್ಕಾರವೂ ಸಹ ಅದನ್ನು ಒಪ್ಪಬಾರದು ಎಂದು ಕನಿಷ್ಠ ಹತ್ತು ಕಾರಣಗಳನ್ನಾದರೂ ಕೊಡಬಹುದು. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಚರ್ಚೆಯ ಮೇಲೆ ಮಾತನಾಡುವಾಗ ಸಮಗ್ರವಾಗಿ ಯಾವುದೇ ವಿಚಾರದ ಮೇಲೆ ಮಾತನಾಡಬಹುದು. ಆದುದರಿಂದ ವಿರೋಧ ಪಕ್ಷಗಳು ನಿಲುವಳಿ ಸೂಚನೆಯನ್ನು ಮಂಡಿಸಿದಾಗ, ಆ ನಿಲುವಳಿ ಸೂಚನೆ ಅಪ್ರಕೃತವಾಗುತ್ತದೆ ಎಂಬ ನಿಲುವನ್ನು ನಾವು ತೆಗೆದುಕೊಳ್ಳುವುದಕ್ಕೆ ಅವಕಾಶ ಇತ್ತು. ಆದರೆ ನಾವು ಆ ನಿಲುವನ್ನು ತೆಗೆದುಕೊಳ್ಳಲಿಲ್ಲ. ಯಾವ ಮುಜುಗರವೂ ಇಲ್ಲದೇ ನಿಲುವಳಿ ಸೂಚನೆಯ ಮೇಲೆ ಎಷ್ಟು ಹೊತ್ತು ಬೇಕಾದರೂ ಚರ್ಚೆ ನಡೆಯಲಿ ಎಂಬ ನಿಲುವನ್ನು ನಾವು ತೆಗೆದುಕೊಂಡಿದ್ದರ ಹಿನ್ನೆಲೆ ಏನೆಂದರೆ, ನಮ್ಮ ಕೈಗಳು ಶುದ್ಧವಾಗಿವೆ, ನಮ್ಮ ಆತ್ಮಗಳು ಶುದ್ಧವಾಗಿವೆ. ಆದುದರಿಂದ ಇದು ಅತ್ಯಂತ ಭಯಾನಕವಾದಂತಹ ಒಂದು ಬೆಳವಣಿಗೆ. ಈ ಬೆಳವಣಿಗೆಗೆ ನಾವು ಕಡಿವಾಣ ಹಾಕದೇ ಹೋದರೆ ನಮ್ಮ ರಾಜ್ಯ ಕಳೆದ ಐವತ್ತು ವರ್ಷಗಳಲ್ಲಿ ಏನೊಂದು ಒಳ್ಳೆಯ ಹೆಸರನ್ನು ಗಳಿಸಿದೆಯೋ ಅದಕ್ಕೆ ನಾವು ತಿಲಾಂಜಲಿಯನ್ನು ಕೊಟ್ಟಂತಾಗುತ್ತದೆ. ಆದುದರಿಂದ ಇಡೀ ಸದನವನ್ನು ನಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋಗಬೇಕೆಂಬ ಒಂದೇ ಒಂದು ಭಾವನೆಯಿಂದ ನಾವು ಈ ನಿಲುವಳಿ ಸೂಚನೆಗೆ ನಮ್ಮ ಒಪ್ಪಿಗೆಯನ್ನು ಕೊಟ್ಟೆವು. ಈಗಾಗಲೇ ನಾನು ಮಾನ್ಯ ಗೃಹ ಸಚಿವರ ಜೊತೆಗೆ ಚರ್ಚೆ ಮಾಡಿ ಈ ದುರಂತದ ಬಗ್ಗೆ ಒಂದು ನ್ಯಾಯಾಂಗ ತನಿಖೆಯನ್ನು ನಡೆಸಬೇಕೆಂದು ನಾವೇ ತೀರ್ಮಾನ ಮಾಡಿದ್ದೇವೆ. ಆ ತೀರ್ಮಾನದ ಪ್ರಕಾರ ನ್ಯಾಯಾಂಗ ತನಿಖೆ ನಡೆಸುವ ಸಲುವಾಗಿ ಒಬ್ಬ ನ್ಯಾಯಾಧೀಶರ ಹೆಸರನ್ನು ದಯಮಾಡಿ ನೇಮಿಸಬೇಕೆಂದು ನಾನು ಈಗಾಗಲೇ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಒಂದು ಕಾಗದವನ್ನು ಸಹ ಬರೆದಿದ್ದೇನೆ. ಈಗ ನಮ್ಮ ಮುಂದೆ ಇರುವ ಪ್ರಶ್ನೆ ಒಂದು ಕಡೆ ನ್ಯಾಯಾಂಗ ತನಿಖೆ ಆಗಬೇಕು ಇನ್ನೊಂದು ಕಡೆ ವಿಶೇಷ ದಳವನ್ನು ನೇಮಕ ಮಾಡಿದ್ದೇವೆ ಈ ವಿಶೇಷ ದಳವನ್ನು ನೇಮಕ ಮಾಡಿರುವ ಶ್ರೀಘ್ರವಾಗಿ ರೂದ್ವೇಶವಾದಲು ಕೂಡ ಶೀಘ್ರ ತನಿಖೆ, ಶೀಘ್ರವಾಗಿ ಸಂಬಂಧಪಟ್ಟವರ

ಬಂಧನವಾಗಿ ನ್ಯಾಯಾಲಯದಲ್ಲಿ ಅವರ ವಿಚಾರಣೆ ತ್ವರಿತವಾಗಿ ನಡೆಯಬೇಕು ಎಂಬ ಉದ್ದೇಶದಿಂದ ಈ ಪ್ರಕರಣದ ಬಗ್ಗೆ ವಿಶೇಷವಾದಂತಹ ದಳವನ್ನೂ ಕೂಡ ರಚನೆ ಮಾಡಿದ್ದೇವೆ. ಇಲ್ಲಿ ಎರಡು ವಿಚಾರಗಳನ್ನು ನಾವು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಪ್ರಕರಣದ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಿದರೆ ಅದು ವಿಳಂಬವಾಗುತ್ತದೆಯೇ? ಅಥವಾ ನ್ಯಾಯಾಂಗ ತನಿಖೆಗೆ ವಹಿಸಿದರೆ ಅದು ತ್ವರಿತ ಗತಿಯಲ್ಲಿ ಆಗುತ್ತದೆಯೇ? ಎಂಬುದು ಚರ್ಚಾಸ್ಪದವಾದಂತಹ ವಿಷಯವಾಗಿದೆ. ಆ ಬಗ್ಗೆ ನಿಮ್ಮದೇ ಆದಂತಹ ಕಲ್ಪನೆಗಳು ನಿಮಗೆ ಇರುತ್ತವೆ, ಅವರಿಗೆ ಬೇರೆ ಕಲ್ಪನೆಗಳು ಇರಬಹುದು, ನಮಗೆ ಬೇರೆಯದೇ ಆದಂತಹ ಕಲ್ಪನೆಗಳು ಇರಬಹುದು. ಕಳೆದ ಐದು ತಿಂಗಳಿನಿಂದ ನಮ್ಮ ಕಾಂಗ್ರೆಸ್ ಪಕ್ಷದವರು ರಾಜ್ಯದಲ್ಲಿ ರಾಜ್ಯಭಾರ ಮಾಡುತ್ತಿದ್ದೇವೆ. ನಮ್ಮ ಅಧಿಕಾರಾವಧಿಯಲ್ಲಿ ಒಳ್ಳೆಯ ಕೆಲಸಗಳು ಆಗಿರಬಹುದು, ಕೆಟ್ಟ ಕೆಲಸಗಳು ನಿಮಗೆ ಕಂಡಿರಬಹುದು. ಅದನ್ನು ಟೀಕೆ ಮಾಡತಕ್ಕಂತಹ ಹಕ್ಕು ಇನ್ನು ಒಂದೂವರೆ ತಿಂಗಳ ಸದನದ ಒಳಗೆ ಮತ್ತು ಅನಂತರ ನಿರಂತರವಾಗಿ ಸದನದ ಹೊರಗೆ ನಿಮಗೆ ಇದೆ. ಇದು ಜನತಂತ್ರದ ಚೌಕಟ್ಟಿನಲ್ಲಿ ನಡೆದು ಬಂದಿದೆ. ಅಲ್ಲಿ ನಾವು ಕುಳಿತಿದ್ದಾಗ ಏನು ಹೇಳಿದ್ದೆವು, ಇಲ್ಲಿ ನೀವು ಕುಳಿತಿದ್ದಾಗ ಏನು ಮಾಡಿದ್ದೀರಿ ಎಂಬುದು ಈಗ ಐತಿಹಾಸಿಕ. ನಮ್ಮ ಸದನದ ನಡವಳಿಗಳನ್ನು ಓದಿದಾಗ ಅದು ನಮಗೆ ಅರ್ಥವಾಗುತ್ತದೆ. ಕದಡಿ ಹೋಗಿರುವ ಮನಸ್ಸುಗಳನ್ನು ತಿಳಿ ಮಾಡಬೇಕಾಗಿರತಕ್ಕಂತಹ ಮಹತ್ತರವಾದಂತಹ ಜವಾಬ್ದಾರಿ ಈ ಮಹಾ ಸದನದ ಮೇಲಿದೆ. ಅದಕ್ಕೆ ಅನುವು ಆಗತಕ್ಕಂತಹ, ಅದಕ್ಕೆ ಪೂರಕವಾಗುತ್ತಕ್ಕಂತಹ, ಅದಕ್ಕೆ ಸಹಾಯಕವಾಗತಕ್ಕಂತಹ ನಿಲುವನ್ನು ಈ ಇಡೀ ಸದನ ತೆಗೆದುಕೊಳ್ಳಬೇಕಾಗಿರತಕ್ಕಂಥದ್ದು ಅವಶ್ಯಕ. ತಾವು ನ್ಯಾಯಾಂಗ ತನಿಕೆಯಾಗಬೇಕೆಂದು ಆಗ್ರಹಿಸಿದರೆ, ಈಗಾಗಲೇ ನ್ಯಾಯಾಂಗ ತನಿಖೆ ಮಾಡಲು ನಾವು ಕ್ರಮ ತೆಗೆದುಕೊಂಡಿದ್ದೇವೆ, ಅದನ್ನು ನಾವು ಮುಂದುವರೆಸುತ್ತೇವೆ. ತಾವು ಸಿ.ಬಿ.ಐ. ತನಿಖೆ ಆಗಬೇಕೆಂದು ಹೇಳಿದರೆ, ನಾವು ಆ ಸಿ.ಬಿ.ಐ. ತನಿಖೆಯನ್ನು ನಡೆಸಲಿಕ್ಕೂ ಕೂಡ ನಾವು ಸಿದ್ಧವಾಗಿದ್ದೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಮೇಜು ತಟ್ಟಿ ಮಾನ್ಯ ಮುಖ್ಯಮಂತ್ರಿಗಳ ನಿರ್ಧಾರವನ್ನು ಸ್ವಾಗತಿಸಿದರು)

ಈಗಾಗಲೇ ನಾವು ಸದರಿ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ವಹಿಸಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ನಾವು ಈಗಾಗಲೇ ಕೋರಿದಂತೆ ನ್ಯಾಯಾಂಗ ತನಿಖೆ ಸಲುವಾಗಿ ನ್ಯಾಯಾಧೀಶರೊಬ್ಬರ ಹೆಸರನ್ನು ತಾವು ಸೂಚಿಸಬೇಕಾಗಿಲ್ಲ ಎಂದು ಅವರ ಕ್ಷಮೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ನಾನು ಮತ್ತೊಮ್ಮೆ ಒಂದು ಕಾಗದವನ್ನು ಬರೆಯುತ್ತೇನೆ. ಒಟ್ಟಾರೆ ಅಭಿಪ್ರಾಯ ಏನು ಬಂದಿದೆ

ಎಂದರೆ ಸಿ.ಬಿ.ಐ. ತನಿಖೆಗೆ ಈ ಪ್ರಕರಣವನ್ನು ನಾವು ಒಪ್ಪಿಸಬೇಕು ಅಂತ ಹೇಳಿ. ಇದರ ಉದ್ದೇಶವೇನೆಂದರೆ **harmony** ಉಂಟು ಮಾಡುವುದು ಸಮಾಜದಲ್ಲಿ ಸಾಮರಸ್ಯವನ್ನು ನಾವು ಮತ್ತು ನೀವು ಸೇರಿಕೊಂಡು ಉಂಟು ಮಾಡುತ್ತೇವೆಯೇ ಹೊರತು ಸಿ.ಬಿ.ಐ.ರವರ ಕೈಯಲ್ಲಿ ಆ ಸಾಮರಸ್ಯವನ್ನು ಉಂಟು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ.

(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಮಾನ್ಯ ಸದಸ್ಯರು ಮೇಜು ತಟ್ಟಿದರು)

ಶ್ರೀ ಪಿ.ಜಿ.ಆರ್.ಸಿಂಧ್ಯಾ: ವಿಷಯ ಬಹಳ ಗಂಭೀರತೆಯಿಂದ ಕೂಡಿದೆ. ಹೀಗಿರುವಾಗ ಆಡಳಿತ ಪಕ್ಷದ ಮಾನ್ಯ ಸದಸ್ಯರು ವಿನಾಕರಾಣ ಚಪ್ಪಾಳೆ ತಟ್ಟಿದರೆ ಹೇಗೆ?

ಶ್ರೀ ಡಿ.ಬಿ.ಚಂದ್ರೇಗೌಡ: ಸಿ.ಬಿ.ಐ.ನವರೇನು ದೇವಲೋಕದಿಂದ ಇಳಿದಿಲ್ಲ.

ಶ್ರೀ ಬಿ.ಸೋಮಶೇಖರ್: ಮಾನ್ಯ ಮುಖ್ಯಮಂತ್ರಿಗಳು ಹೇಳತಕ್ಕಂತಹ ವಿಚಾರವನ್ನು ನಾವು ಬಹಳ ಗಂಭೀರವಾಗಿ ಕೇಳುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳ ನಿರ್ಧಾರಕ್ಕೆ ನಾವು ಸಂತೋಷವನ್ನೂ ಕೂಡ ವ್ಯಕ್ತಪಡಿಸಿದ್ದೇವೆ. ಹೀಗಿರುವಾಗ ಮಾನ್ಯ ಮುಖ್ಯಮಂತ್ರಿಗಳು ಯಾವುದೋ ಒಂದು ಹೊಸ ಕಾರ್ಯಕ್ರಮವನ್ನು ಘೋಷಣೆ ಮಾಡಿದ ರೀತಿಯಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಚಪ್ಪಾಳೆ ತಟ್ಟಿದರೆ ಹೇಗೆ? ಇದು ಬಹಳ ದುಃಖವಾಗಿರತಕ್ಕಂತಹ ವಿಚಾರ.

ಶ್ರೀ ಎಸ್.ಎಂ.ಕೃಷ್ಣ: ಸಿ.ಬಿ.ಐ. ತನಿಖೆಗೆ ಸದರಿ ಪ್ರಕರಣವನ್ನು ಒಪ್ಪಿಸುತ್ತೇನೆ ಎಂದು ನಾನು ಹೇಳಿದಾಗ ಎರಡೂ ಕಡೆಯಿಂದಲೂ ಮೇಜು ತಟ್ಟಿ ಅದನ್ನು ಸ್ವಾಗತಿಸಲಾಯಿತು. ನಮ್ಮ ಆಡಳಿತ ಪಕ್ಷದ ಕಡೆ ಹಲವಾರು ಮಾನ್ಯ ಸದಸ್ಯರುಗಳು ಇದೇ ಮೊದಲ ಬಾರಿಗೆ ಆಯ್ಕೆಯಾಗಿ ಸದನವನ್ನು ಪ್ರವೇಶಿಸಿದ್ದಾರೆ. ಅವರಿಗೆ ಯಾವಾಗ ಚಪ್ಪಾಳೆ ತಟ್ಟಬೇಕು, ಯಾವಾಗ ಮೇಜು ತಟ್ಟಬೇಕು ಎಂದು ಗೊತ್ತಾಗುವುದಿಲ್ಲ. ಅಪಾರವಾದ ಅನುಭವ ಇರತಕ್ಕ ಮಾನ್ಯ ಸೋಮಶೇಖರ್‌ರವರಿಗೆ ಯಾವಾಗ ಮೇಜು ತಟ್ಟಬೇಕೆಂಬುದು ಗೊತ್ತಿದೆ. ಯಾವುದಾದರೂ ಕಾರ್ಯಕ್ರಮಗಳನ್ನು ಹೊಸದಾಗಿ ಘೋಷಣೆ ಮಾಡಿದಾಗ ಮಾತ್ರ ಮೇಜು ತಟ್ಟಬೇಕು. ಇಲ್ಲದಿದ್ದರೆ ತಟ್ಟಬಾರದು ಎಂದು ನಾನು ಕೋರುತ್ತಿದ್ದೇನೆ. ಈಗಾಗಲೇ ಮೂರು ವಿಚಾರಗಳಿಗೆ ಸಂಬಂಧಪಟ್ಟಂತೆ ಮೂರು ಪೋಲಿಸ್ ಮೊಕದ್ದಮೆಗಳನ್ನು ಹಾಕಲಾಗಿದೆ. ಅವುಗಳು ಯಾವುವೆಂದರೆ ಮೊಕದ್ದಮೆ ಸಂಖ್ಯೆ 45, ಮೊಕದ್ದಮೆ ಸಂಖ್ಯೆ 46 ಹಾಗೂ ಮೊಕದ್ದಮೆ ಸಂಖ್ಯೆ 47 ಎಂಬುವುಗಳಾಗಿವೆ. ಈ ಮೂರು ಮೊಕದ್ದಮೆಗಳನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸುವ ತೀರ್ಮಾನವನ್ನು ಸರ್ಕಾರದ ಪರವಾಗಿ ನಾನು ಮಾನ್ಯ ಅಧ್ಯಕ್ಷರಾದ

ತಮ್ಮ ಮುಂದೆ ಇಡುತ್ತಿದ್ದೇನೆ. ಇನ್ನು ಕಂಬಾಲಪಲ್ಲಿ ಘಟನೆಗೆ ಸಂಬಂಧಪಟ್ಟಂತೆ ಚರ್ಚೆಯ ಸಂದರ್ಭದಲ್ಲಿ ಹಲವಾರು ಮಾತುಗಳು ಕಠಿಣವಾಗಿ ಹೊರಬಂದಿವೆ. ಅದನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಏಕೆಂದರೆ ಘಟನೆ ಆ ರೀತಿಯಲ್ಲಿ ನಡೆದಿದೆ. ಇದು ಬಹಳ ದುಗುಡ ತರತಕ್ಕಂಥ ಬೆಳವಣಿಗೆಯಲ್ಲಿ ನಡೆದಿದೆ. ಆದುದರಿಂದ ಪ್ರತಿಯೊಬ್ಬರು ಕೂಡ ಭಾವನಾತ್ಮಕವಾಗಿ ಮಾತನಾಡತಕ್ಕಂಥ ದಾಟಿಯಲ್ಲಿ ಮಾತನಾಡಿದ್ದಾರೆ. ವಿಷಯಕ್ಕೆ ಭಾವನಾತನ್ಮಕವಾಗಿ ರೂಪು ಕೊಟ್ಟಿದ್ದಾರೆ. ನಮಗೆ ಈ ರೀತಿಯ ಚರ್ಚೆಯಿಂದಾಗಿ ಬೇಸರವೇನೂ ಆಗಿಲ್ಲ. ಒಟ್ಟಾರೆಯಾಗಿ ಎಲ್ಲಾ ಸದಸ್ಯರಲ್ಲೂ ನಾನು ಮತ್ತೊಮ್ಮೆ ಅತ್ಯಂತ ವಿನೀತನಾಗಿ ಪ್ರಾರ್ಥನೆ ಮಾಡುವುದೇನೆಂದರೆ ಸಮಾಜದಲ್ಲಿ ಸಾಮರಸ್ಯವನ್ನು ತರುವುದಕ್ಕೆ ನಾವು ಮತ್ತು ನೀವುಗಳೆಲ್ಲಾ ಜೊತೆಯಾಗಿ ಕೆಲಸ ಮಾಡಬೇಕಾಗಿರುವ ಅವಶ್ಯಕತೆ ಇರುವುದರಿಂದ ಇದಕ್ಕೆ ಎಲ್ಲರೂ ಸಹಕಾರ ಕೊಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಕಂಬಾಲಪಲ್ಲಿ ಘಟನೆಗೆ ಸಂಬಂಧಪಟ್ಟಂತೆ ಸರ್ಕಾರದವರು ಸಿ.ಬಿ.ಐ. ತನಿಖೆಗೆ ಕೊಟ್ಟಿರುವುದರಿಂದ ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡುತ್ತೇನೆ. ಇನ್ನು ಮಾನ್ಯ ಸಭಾನಾಯಕರು ನನಗೊಂದು ಪತ್ರ ಬರೆದು ಸಹಸ್ರಮಾನದ ಮಾಹಿತಿ ತಂತ್ರಜ್ಞಾನ ನೀತಿಯನ್ನು ಔಪಚಾರಿಕವಾಗಿ ದಿನಾಂಕ 18-03-2000 ರಂದು ಶನಿವಾರ ಮಧ್ಯಾಹ್ನ 1.00 ಗಂಟೆಗೆ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಘೋಷಿಸುವುದಾಗಿ ತಿಳಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಮೂರು ಅಂಶಗಳ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳು ಈಗ ಸದನದಲ್ಲಿ ಮಂಡಿಸುತ್ತಾರೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು): ಮಾನ್ಯ ಸದಸ್ಯರುಗಳು ಒಪ್ಪಿದರೆ, ನೀತಿಯ ಒಂದು ಕಾಪಿಯನ್ನು ಸದನದ ಮೇಜಿನ ಮೇಲೆ ಮಂಡಿಸುತ್ತೇನೆ.

ಮಾನ್ಯ ಸದಸ್ಯರಿಗೆ ತಿಳಿದಿರುವಂತೆ, ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ ಹಾಗೂ ಭಾರತದ ಸಿಲಿಕಾನ್ ರಾಜ್ಯ ಎಂದು ಕರೆಯಲ್ಪಟ್ಟಿದೆ. ಜೊತೆಗೆ ರಾಜ್ಯದ ರಾಜಧಾನಿ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಪ್ರಚಂಡ ಬೆಳವಣಿಗೆ ತೋರಿಸಿದೆ ಹಾಗೂ ಭಾರತದ ಮಾಹಿತಿ ತಂತ್ರಜ್ಞಾನ ರಾಜಧಾನಿಯಾಗಿದೆ.

2. 1997ರಲ್ಲಿ ಮಾಹಿತಿ ತಂತ್ರಜ್ಞಾನ ನೀತಿಯನ್ನು ಘೋಷಿಸಿದ ಪ್ರಥಮ ರಾಜ್ಯ ಕರ್ನಾಟಕ ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಬೆಳವಣಿಗೆಯಾಗಲು ಸದರಿ ನೀತಿಯು ಪ್ರಮುಖ ಪ್ರಚೋದನೆಯಾಗಿ ಕಾರ್ಯ ಮಾಡಿದೆ. ಆದಾಗ್ಯೂ ಈ ಕೈಗಾರಿಕೆ ಅತಿ ವೇಗದಲ್ಲಿ ಬೆಳೆಯುತ್ತಿದೆ, ಹಾಗೂ ಈ ವ್ಯವಹಾರದ ಮಾದರಿ ಮತ್ತು ಸ್ವರೂಪ